## ಅಧ್ಯಾಯ 16

# ರೌದ್ರದ ಏಳು ಪಾತ್ರೆಗಳು

ಪ್ರಕಟನೆ 16ರಲ್ಲಿ, ಯೋಹಾನನು "ದೇವರ ಪ್ರತೀಕಾರದ ರೌದ್ರವನ್ನು ಕುರಿತಾದ ಎಲ್ಲಾ ಭಯಾನಕ ಕಥೆಗಳನ್ನು ಒಂದುಗೂಡಿಸಿದನು ಮತ್ತು ... ಅವುಗಳನ್ನು ಒಂದು ಕಡೇ ಭಯಂಕರವಾದ ವಿನಾಶದ ಪ್ರವಾಹವಾಗಿ ಅವಿಶ್ವಾಸಿ ಲೋಕದ ಮೇಲೆ ಎಸೆದನು."[1] ಅಪೊಸ್ತಲನು ದೇವರ ಅಪಾರವಾದ ರೋಷಾಗ್ನಿಯನ್ನು ಚಿತ್ರಿಸುವದರ ಮಧ್ಯದಲ್ಲಿ, ಈ ಮಾತುಗಳಿಂತಲೂ ಹೆಚ್ಚು ನಡುಕುವನ್ನು ಹುಟ್ಟಿಸುವಂಥ ಬೇರೆ ಮಾತುಗಳಿರುವದಿಲ್ಲ: "ಇದಲ್ಲದೆ ದೇವರು ದೊಡ್ಡ ಬಾಬೆಲನ್ನು *ಜ್ಞಾಪಿಸಿಕೊಂಡು* ತನ್ನ ಉಗ್ರಕೋಪವೆಂಬ ದ್ರಾಕ್ಷಾರಸದ ಪಾತ್ರೆಯನ್ನು ಅವಳಿಗೆ ಕುಡಿಯಲು ಕೊಟ್ಟನು" (16:19; ಒತ್ತಿ ಹೇಳಿದ್ದು ನನ್ನದು; ನೋಡಿರಿ 18:5). (ಹಳೆಯ ಒಡಂಬಡಿಕೆಯಲ್ಲಿರುವ ಇದೇ ರೀತಿಯ ಪದಗಳಿಗಾಗಿ, ನೋಡಿರಿ ಯೆಹೆಜ್ಕೇಲ 21:24 ಮತ್ತು ಹೋಶೇಯ 9:9.)

ನಮ್ಮ ದೇವರು "ಕರ್ತನೇ, ನೀನು ಕನಿಕರವೂ ದಯೆಯೂ ಉಳ್ಳ ದೇವರು; ದೀರ್ಘಶಾಂತನು, ಬಹಳ ಪ್ರೀತಿಯೂ ನಂಬಿಕೆಯೂ ಉಳ್ಳವನು" (ಕಿರ್ತನೆ 86:15). ಆತನ ದೀರ್ಘಶಾಂತಿಯು ಚಿರಪರಿಚಿತವಾಗಿದೆ (ರೋಮಾ 2:4; 1 ಪೇತ್ರ 3:20). ಈ ವಾಸ್ತವಾಂಶದ ಕಾರಣದಿಂದಾಗಿ, ಕೆಲವು ಸಮಯಗಳಲ್ಲಿ ದೇವರು ಕಣ್ಣಿಗೆ ಕುಕ್ಕುವಂತಿರುವ ಮಾನವ ಅವಿಧೇಯತೆಯ ಕುರಿತು ಮರೆತು ಬಿಟ್ಟಿದ್ದಾನೋ ಎಂಬಂತೆ ತೋರುವದು, ಆದರೆ ದೇವರು ಮರೆತಿಲ್ಲ. ಆತನು ಮಾನವನನ್ನು ಮನವೊಲಿಸಲು ನೋಡುತ್ತಾನೆ; ಆತನು ಮನುಷ್ಯನನ್ನು ಎಚ್ಚರಿಸುತ್ತಾನೆ - ಇನ್ನೇನು ಮುಂದೆ ಪ್ರಯತ್ನ ಮಾಡುವದರಿಂದ ಪ್ರಯೋಜವಿಲ್ಲ ಎಂಬುದು ಖಾತ್ರಿಯಾಗುವಷ್ಟರ ವರೆಗೂ ಹಾಗೆಯೇ ಮಾಡುವನು. ಬಳಿಕ, ದೇವರು ಕ್ಷಮಾಪಣೆ ಹೊಂದದ ಪ್ರತಿಯೊಂದು ಪಾಪವನ್ನು, ಪಶ್ಚಾತ್ತಾಪ ಪಡದ ಪ್ರತಿಯೊಂದು ಪಾಪವನ್ನು ಜ್ಞಾಪಿಸಿಕೊಳ್ಳುವನು - ಮತ್ತು ಆತನ ರೌದ್ರವು ಸುರಿಸಲ್ಪಡುತ್ತದೆ. ಕ್ರೈಸ್ತರು ರೌದ್ರದ ಪಾತ್ರೆಗಳಿಂದ ಅದನ್ನೇ ಕಲಿತುಕೊಳ್ಳಬೇಕೆಂದು ದೇವರು ಬಯಸುವನು.

15 ಮತ್ತು 16 ಅಧ್ಯಾಯಗಳು ಗಲಾತ್ಯ 6:7ನೇ ವಚನದ ಮಾತುಗಳನ್ನು ಕಣ್ಣಿಗೆ ಕಟ್ಟಿದಂತೆ ದೃಷ್ಟಾಂತಪಡಿಸುತ್ತವೆ: "ಮೋಸಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು." ದೇವರ ರೌದ್ರವು ಸುರಿಸಲ್ಪಡುವಾಗ, ಪಶ್ಚಾತ್ತಾಪ ಪಡುವದಕ್ಕೆ ಪಾಪಿಗಳಿಗೆ ಇನ್ನು ಸದವಕಾಶಗಳು ಕೊಡಲ್ಪಡುವದಿಲ್ಲ.

ಅನೇಕ ವ್ಯಾಖ್ಯಾನಗ್ರಂಥಗಳು 15 ಮತ್ತು 16 ಅಧ್ಯಾಯಗಳು ತಾತ್ಕಾಲಿಕ ನ್ಯಾಯತೀರ್ಪಿನ ಕುರಿತು ತಿಳಿಸುತ್ತವೋ ಅಥವಾ ಅಂತಿಮ ನ್ಯಾಯತೀರ್ಪಿನ ಕುರಿತಾಗಿ ತಿಳಿಸುತ್ತವೋ ಎಂಬುದರ ಕುರಿತು ಚರ್ಚಿಸುತ್ತವೆ. ಪುಸ್ತಕದ ಸನ್ನಿವೇಶವು, ಮಾತ್ರವಲ್ಲದೆ ಕಾಲಘಟ್ಟವು ಸಹ ವಾಕ್ಯಭಾಗ ರೋಮನ್ ಸಾಮ್ರಾಜ್ಯದ ನಾಶನವನ್ನು ಸೂಚಿಸುತ್ತದೆ ಎಂಬ

ವಿಚಾರದ ಪರವಾಗಿ ಇರುತ್ತವೆ. ಪಾತ್ರೆಗಳ ವಿಭಾಗದ ಪರಾಕಾಷ್ಠೆಯು ಮಹಾ ಬಾಬೆಲಿನ ಬೀಳುವಿಕೆಯಾಗಿರುತ್ತದೆ (16:19), ಅದು ಮುಂದಿನ ಅಧ್ಯಾಯದಲ್ಲಿ ರೋಮ್ ನಗರ ಎಂದು ಗುರುತಿಸಲ್ಪಟ್ಟಿದೆ (17:9, 18). ಹೇಗೂ, ಈ ಅಧ್ಯಾಯಗಳು ತಮ್ಮನ್ನು ಹಿಂಸಿಸುವ ರೋಮನ್ನರ ಮೇಲೆ ದೇವರು ನ್ಯಾಯತೀರ್ಪಿನಿಂದ ಇಳಿದು ಬರುವನು ಎಂಬುದನ್ನು ಈ ಅಧ್ಯಾಯಗಳು ಕಲಿಸುತ್ತವೆಂದು ಹೆಚ್ಚುಕಡಿಮೆ ಖಚಿತವಾಗಿಯೇ ಅರ್ಥಮಾಡಿಕೊಂಡಿರಬಹುದಾದರೂ, ಕೆಲವೊಂದು ವಚನಗಳು ನ್ಯಾಯತೀರ್ಪಿನ ದಿನದಂತೆ ಅನ್ನಿಸುತ್ತವೆ (ನೋಡಿರಿ 16:18–21).

ನಾವು ಸುರಕ್ಷಿತವಾಗಿ 16ನೇ ಅಧ್ಯಾಯದಿಂದ ಮೂರು ಅನ್ವಯಿಕೆಗಳನ್ನು ಮಾಡಬಹುದಾಗಿದೆ: (1) ಯೋಹಾನನ ದಿನದಲ್ಲಿ, ಅಧ್ಯಾಯವು ರೋಮನ್ ಸಾಮ್ರಾಜ್ಯಕ್ಕೆ ನಿರ್ದಿಷ್ಟವಾದ ಅನ್ವಯಿಕೆಯನ್ನು ಹೊಂದಿತ್ತು. (2) ಅಧ್ಯಾಯವು ದೇವರು *ಯಾವದೇ ವ್ಯಕ್ತಿಯು,* ಒಬ್ಬ ವ್ಯಕ್ತಿಯಾಗಿರಲಿ ಅಥವಾ ಒಂದು ದೇಶವಾಗಲಿ ತೋರಿಸುವ ಅಸಡ್ಡೆಯನ್ನು ಹಾಗೂ ಅವಿಧೇಯತೆಯನ್ನು ಅನಿರ್ದಿಷ್ಟವಾಗಿ ಸಹಿಸಿಕೊಳ್ಳುವದಿಲ್ಲ ಎಂಬುದನ್ನು ಸಹ ಸ್ಥಿರಪಡಿಸುತ್ತದೆ. ಕೀರ್ತನೆಗಾರನು ಹೀಗೆ ಬರೆದನು, "ದುಷ್ಟರು ಅಂದರೆ ದೇವರನ್ನು ಅಲಕ್ಷ್ಯಮಾಡುವ ಜನಾಂಗಗಳವರೆಲ್ಲಾ ಪಾತಾಳಕ್ಕೆ ಇಳಿದುಹೋಗುವರು" (ಕೀರ್ತನೆ 9:17). ಈ ಸತ್ಯದ ಕುರಿತ ದೃಷ್ಟಾಂತಗಳು ಇತಿಹಾಸದಲ್ಲಿ ಹೇರಳವಾಗಿರುತ್ತವೆ. ಹೆಸರಾಂತ ಇತಿಹಾಸಕಾರನಾದ Arnold Toynbeeನ ಪ್ರಕಾರವಾಗಿ, ಇತಿಹಾಸದ ಪುಟಗಳಲ್ಲಿ ನಡೆದಾಡಿದ ಹತ್ತೊಂಭತ್ತು ನಾಗರೀಕತೆಗಳೊಳಗೆ ಹದಿನಾರು ನಾಗರೀಕತೆಗಳು ನಾಶವಾಗಿ ಹೋಗಿರುತ್ತವೆ.[2] Jim McGuigganನು ಒತ್ತಿ ಹೇಳಿದ್ದೇನೆಂದರೆ, "ಪುಸ್ತಕದಲ್ಲಿ ಕಲಿಸಲ್ಪಟ್ಟಿರುವ ತತ್ವಗಳು ಎಲ್ಲಾ ಸಮಯಗಳಲ್ಲಿನ ಎಲ್ಲಾ ದೇಶಗಳ ವಿಷಯದಲ್ಲಿ ದೇವರು ನಡೆದುಕೊಂಡ ರೀತಿಗಳಿಗೆ ಅನ್ವಯವಾಗುತ್ತವೆ ಮತ್ತು ಅದು ಎಂದಿಂದೆಗೂ ಇದ್ದ ಹಾಗೆಯೇ ಇಂದು ಅಷ್ಟೇ ಪ್ರಸ್ತುತವಾಗಿರುತ್ತದೆ."[3] (3) 16ನೇ ಅಧ್ಯಾಯದಲ್ಲಿ ಸುರಿಸಲ್ಪಟ್ಟ ರೌದ್ರವು ಭಕ್ತಿಹೀನರ ಮೇಲೆ "ಕಡೇ ದಿನದಲ್ಲಿ" ಸುರಿಸಲ್ಪಡುವ ದೇವರ ರೌದ್ರಕ್ಕೆ ಪೂರ್ವಾಭಾಯೆಯಾಗಿರುತ್ತದೆ (ಯೋಹಾನ 12:48). Edward McDowellನು ಹೀಗೆ ಹೇಳಿದನು,

> ಹೊಸ ಒಡಂಬಡಿಕೆಯಲ್ಲಿ ಭೂಲೋಕದ ಹಾಗೂ ದೇವರ ಅಂತಿಮ ರೌದ್ರವು ವ್ಯಕ್ತಪಡಿಸುವಿಕೆಗಳ ನಡುವೆ ಯಾವದೇ ತೀಕ್ಷ್ಣವಾದ ವ್ಯತ್ಯಾಸವನ್ನು ಮಾಡಕೂಡದು. ಇತಿಹಾಸದಲ್ಲಿ ವ್ಯಕ್ತಪಡಿಸಲ್ಪಟ್ಟಿರುವ ರೌದ್ರವನ್ನು ಅದು ಅಂತಿಮ ನ್ಯಾಯತೀರ್ಪಿನಲ್ಲಿ ಅಂತ್ಯಗೊಳ್ಳುವದೆಂದು ಯೋಚಿಸತಕ್ಕದ್ದು. ಆದದರಿಂದ, ಇತಿಹಾಸದಲ್ಲಿ ತೋರಿ ಬಂದಿರುವ ದೇವರ ರೌದ್ರದ ಪ್ರತಿಯೊಂದು ಘಟನೆಯು ಬರಲಿರುವ ರೌದ್ರಕ್ಕೆ ಒಂದು ಮುನ್‌ರುಚಿಯಾಗಿರುತ್ತದೆ.[4]

ಚೀನಿಯರಲ್ಲಿ ಒಂದು ಗಾದೆಯುಂಟು ಏನೆಂದರೆ "ಯಾವ ಪಕ್ಷಿಯು ಅದರ ಬಾಲವು ಅದನ್ನು ಹಿಂಬಾಲಿಸದಷ್ಟು ದೂರಕ್ಕೆ ಹಾರುವದಕ್ಕೆ ಸಾಧ್ಯವಿಲ್ಲ." ಸರಳವಾಗಿ ಹೇಳುವದಾದರೆ, ತನ್ನ ಕೃತ್ಯಗಳಿಂದಾಗುವ ಪರಿಣಾಮಗಳನ್ನು ತಪ್ಪಿಸಿಕೊಳ್ಳಲು ಯಾವನಿಂದಲೂ ಸಾಧ್ಯವಿಲ್ಲ. ಆ ವಾಸ್ತವಾಂಶವು ಪಾಪದ ವಿಷಯದಲ್ಲಂತೂ ವಿಶೇಷವಾಗಿ ಸತ್ಯವಾದದ್ದು: "ನಿಮ್ಮ ಪಾಪವು ನಿಮ್ಮನ್ನು ಹಿಡಿಯುವ ತನಕ ಹುಡುಕಿಕೊಂಡೇ ಬರುವದು" (ಅರಣ್ಯಕಾಂಡ 32:23). ರೌದ್ರದ ಏಳು ಪಾತ್ರೆಗಳು ಪಾಪದಿಂದಾಗುವ ದುರಂತಕರವಾದ ಪರಿಣಾಮಗಳನ್ನು ತೋರ್ಪಡಿಸುತ್ತವೆ.

# ಮೊದಲನೆಯ ಪಾತ್ರೆ (16:1, 2)

**[1]ಆಗ ಪವಿತ್ರಸ್ಥಾನದಿಂದ ಬಂದ ಮಹಾ ಶಬ್ದವನ್ನು ಕೇಳಿದೆನು. ಅದು ಆ ಏಳು ಮಂದಿ ದೇವದೂತರಿಗೆ - ನೀವು ಹೋಗಿ ಆ ಏಳು ಪಾತ್ರೆಗಳಲ್ಲಿರುವ ದೇವರ ರೌದ್ರವನ್ನು ಭೂಮಿಯ ಮೇಲೆ ಹೊಯ್ಯಿರಿ ಎಂದು ಹೇಳಿತು. [2]ಆಗ ಮೊದಲನೆಯವನು ಹೊರಟು ತನ್ನ ಪಾತ್ರೆಯಲ್ಲಿದ್ದದ್ದನ್ನು ಭೂಮಿಗೆ ಹೊಯ್ದನು; ಕೂಡಲೇ ಮೊದಲನೆಯ ಮೃಗದ ಗುರುತನ್ನು ಹೊಂದಿ ಅದರ ವಿಗ್ರಹಕ್ಕೆ ನಮಸ್ಕಾರಮಾಡುವ ಮನುಷ್ಯರ ಮೈಮೇಲೆ ಕೆಟ್ಟ ಉರಿಹುಣ್ಣು ಎದ್ದಿತು.**

**ವಚನ 1.** ಯೋಹಾನನು **ಪವಿತ್ರಸ್ಥಾನದಿಂದ ಬಂದ ಮಹಾ ಶಬ್ದವನ್ನು ಕೇಳಿದನು**. ದೇವಾಲಯದಲ್ಲಿದ್ದವನು ಕರ್ತನು ಮಾತ್ರವೇ ಆಗಿದ್ದನಾದ್ದರಿಂದ (15:8), ಮಾತಾಡುತ್ತಿರುವವನು ಆತನೇ ಆಗಿದ್ದನು. ಆತನು ಆ **ಏಳು ಮಂದಿ ದೇವದೂತರಿಗೆ - ನೀವು ಹೋಗಿ ಆ ಏಳು ಪಾತ್ರೆಗಳಲ್ಲಿರುವ ದೇವರ ರೌದ್ರವನ್ನು ಭೂಮಿಯ ಮೇಲೆ ಹೊಯ್ಯಿರಿ** ಎಂದು ಆಜ್ಞಾಪಿಸಿದನು. 15:1ರಲ್ಲಿ "ಏಳು ಮಂದಿ ದೇವದೂತರ ಕೈಯಲ್ಲಿ ಏಳು ಉಪದ್ರವಗಳಿದ್ದವು; ಇವು ಕಡೇ ಉಪದ್ರವಗಳು; ಇವುಗಳಲ್ಲಿ ದೇವರ ರೌದ್ರವು ಮುಗಿದಿರುವದು" ಎಂದು ವಾಚಕನಿಗೆ ತಿಳಿಸಲಾಯಿತು. 15:6ರಲ್ಲಿ "ಅದರೊಳಗಿಂದ ಏಳು ಉಪದ್ರವಗಳನ್ನು ಕೈಯಲ್ಲಿ ಹಿಡಿದಿರುವ ಆ ಏಳು ಮಂದಿ ದೇವದೂತರು ಬಂದರು." 15:7ರಲ್ಲಿ "ನಾಲ್ಕು ಜೀವಿಗಳಲ್ಲಿ ಒಂದು ಈ ಏಳು ಮಂದಿ ದೇವದೂತರಿಗೆ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನಾದ ದೇವರ ರೌದ್ರದಿಂದ ತುಂಬಿದ್ದ ಏಳು ಚಿನ್ನದ ಪಾತ್ರೆಗಳನ್ನು ಕೊಟ್ಟಿತು." 16:1ರಲ್ಲಿ, ಏಳು ಪಾತ್ರೆಗಳನ್ನು ಭೂಮಿಯ ಮೇಲೆ ಸುರಿಯಬೇಕೆಂದು ಏಳು ಮಂದಿ ದೇವದೂತರಿಗೆ ಆಜ್ಞಾಪಿಸಲಾಗುತ್ತದೆ. 16ನೇ ಅಧ್ಯಾಯದ ಉಳಿದ ಭಾಗವು ಪಾತ್ರೆಗಳು ಸುರಿಸಲ್ಪಡುವದನ್ನು ಕುರಿತು ಚಿತ್ರಿಸುತ್ತದೆ.

ಈ ವಿಭಾಗವು ದೈವಿಕ ನ್ಯಾಯತೀರ್ಪಿನ ಮೂರನೆಯ ಚಕ್ರವಾಗಿರುತ್ತದೆ: ಮೊದಲು ಏಳು ಮುದ್ರೆಗಳಿದ್ದವು (ಅಧ್ಯಾಯಗಳು 4-7), ಬಳಿಕ ಏಳು ತುತೂರಿಗಳು (ಅಧ್ಯಾಯಗಳು 8:11), ಮತ್ತು ಈಗ ಏಳು ಪಾತ್ರೆಗಳು (ಅಧ್ಯಾಯಗಳು 15, 16). ಇದಕ್ಕೆ ತಿಳಿಸಲ್ಪಟ್ಟಿದ್ದೇನೆಂದರೆ ಏಳನೆಯ ಮುದ್ರೆಯು ಏಳು ತುತೂರಿಗಳನ್ನು ಉಂಟು ಮಾಡಿತ್ತು, ಅದೇ ವೇಳೆ ಏಳನೆಯ ತುತೂರಿಯು ಏಳು ಪಾತ್ರೆಗಳಿಗೆ ವೇದಿಕೆಯನ್ನು ಸಿದ್ಧಗೊಳಿಸಿರುತ್ತದೆ (ಅಧ್ಯಾಯ 8ರ ಮೇಲಿನ ಪರಿಚಯ ವ್ಯಾಖ್ಯೆಗಳನ್ನು ನೋಡಿರಿ). ಈ ಮೂರು ಸರಣಿಗಳು ಹಲವಾರು ಉಪದೇಶಗಳನ್ನು ಸಾಮಾನ್ಯವಾಗಿ ಹೊಂದಿವೆ: (1) ಪ್ರತಿಯೊಂದು ಸರಣಿಯೂ ನಾಲ್ಕು ನಿಕಟವಾಗಿ ಸಂಬಂಧವಿರುವ ದರ್ಶನಗಳ ಮೂಲಕ ಆರಂಭಗೊಳ್ಳುತ್ತದೆ, ನಂತರ ಅಷ್ಟಾಗಿ ಸಂಬಂಧವಿಲ್ಲದ ದರ್ಶನಗಳನ್ನು ಹೊಂದಿರುತ್ತವೆ. (2) ಪ್ರತಿಯೊಂದರಲ್ಲಿಯೂ ರೋಮನ್ ಸಾಮ್ರಾಜ್ಯದ ಫತನಕ್ಕೆ ಕಾರಣವಾಗುವ ಮೂರು ಅಂಶಗಳು ಇರುತ್ತವೆ: ಪ್ರಾಕೃತಿಕ ವಿಕೋಪಗಳು, ಆಂತರೀಕ ಕ್ಷೀಣತೆ, ಮತ್ತು ಬಾಹ್ಯ ಆಕ್ರಮಣ. (3) ಪ್ರತಿಯೊಂದರಲ್ಲಿಯೂ ಆರು ಮತ್ತು ಏಳನೆಯ ದರ್ಶನಗಳ ಮಧ್ಯದಲ್ಲಿ ಒಂದು ಭಂಗ ಇರುತ್ತದೆ. (ಕೆಲವು ಲೇಖಕರು ಆರನೆಯ ಹಾಗೂ ಏಳನೆಯ ಪಾತ್ರೆಗಳ ನಡುವೆ ಯಾವದೇ ಭಂಗವನ್ನಾಗಲಿ ಅಥವಾ ಮಧ್ಯಂತರವನ್ನಾಗಲಿ ಕಾಣುವದಿಲ್ಲ; 16:13-16ರಲ್ಲಿನ ದೃಶ್ಯವು ಆರನೆಯ ಪಾತ್ರೆಯ ಅವಿಭಾಜ್ಯ ಭಾಗವಾಗಿದೆ ಎಂದು ಅವರು ಹೇಳುತ್ತಾರೆ.) (4) ಪ್ರತಿಯೊಂದು ಸರಣಿಯು ದೇವರ ಶಕ್ತಿಯ ಕುರಿತಾದ ಒಂದು ತೋರ್ಪಡಿಸುವಿಕೆಯ ಮೂಲಕ ಮುಕ್ತಾಯಗೊಳ್ಳುತ್ತದೆ.

ಕಡೇ ಎರಡು ಸರಣಿಗಳಾದ, ಏಳು ತುತೂರಿಗಳು ಹಾಗೂ ಏಳು ಪಾತ್ರೆಗಳು

ವಿಶೇಷವಾಗಿ ನಿಕಟವಾದ ಸಂಬಂಧ ಹೊಂದಿವೆ. ಅವುಗಳಲ್ಲಿ ಸಾಮಾನ್ಯವಾಗಿರುವ ಅಂಶಗಳನ್ನು ಗಮನಿಸಿರಿ:

| ತುತೂರಿಗಳು (ಪ್ರಕಟನೆ 8-11) | ಪಾತ್ರೆಗಳು (ಪ್ರಕಟನೆ 16) |
|---|---|
| 1. ಭೂಮಿ | 1. ಭೂಮಿ |
| 2. ಸಮುದ್ರ | 2. ಸಮುದ್ರ |
| 3. ನದಿಗಳು ಮತ್ತು ಒರತೆಗಳು | 3. ನದಿಗಳು ಮತ್ತು ಒರತೆಗಳು |
| 4. ಸೂರ್ಯ/ಆಕಾಶಕಾಯಗಳು | 4. ಸೂರ್ಯ |
| 5. ಪೀಡೆ | 5. ನೋವು |
| 6. ಯೂಫ್ರೇಟಿಸ್ ಮತ್ತು ಸೈನ್ಯ | 6. ಯೂಫ್ರೇಟಿಸ್ ಮತ್ತು ಸೈನ್ಯ |

ಈ ಸಂಬಂಧದ ಕಾರಣದಿಂದಾಗಿ, ಪಾತ್ರೆಗಳನ್ನು ಅರ್ಥಮಾಡಿಕೊಳ್ಳಬೇಕೆಂದರೆ ನಾವು ತುತೂರಿಗಳನ್ನು ವಿಶ್ಲೇಷಣೆ ಮಾಡಬೇಕು. ತುತೂರಿಗಳ ಕುರಿತ ನಮ್ಮ ಅಧ್ಯಯನದಲ್ಲಿ, ಪ್ರಮುಖ ಒತ್ತು *ಪಾಪದ ಪರಿಣಾಮ*ದ ಕುರಿತಾಗಿರುತ್ತದೆ: ವಿಶ್ವದ ಮೇಲೆ ಪಾಪದ ಪರಿಣಾಮ (ಮೊದಲ ನಾಲ್ಕು ತುತೂರಿಗಳು), ವ್ಯಕ್ತಿಗಳ ಮೇಲೆ (ಐದನೆಯ ತುತೂರಿ), ಮತ್ತು ಬೇರೆಯವರ ಮೇಲೆ (ಆರನೆಯ ತುತೂರಿ). ವಿಶ್ವದ ಮೇಲಾಗುವ ಪಾಪದ ಪರಿಣಾಮಗಳ ವಿಷಯವಾಗಿ, ಪ್ರಾಕೃತಿಕ ವಿಕೋಪಗಳ ಕುರಿತು ಚರ್ಚಿಸಲಾಯಿತು, ಉದಾಹರಣೆಗೆ ಸುಂಟರಗಾಳಿಗಳು, ಚಂಡಮಾರುತಗಳು, ಭೂಕಂಪಗಳು, ಮತ್ತು ಪ್ರವಾಹಗಳು. ವ್ಯಕ್ತಿಗಳ ಮೇಲಾಗುವ ಪಾಪದ ಪರಿಣಾಮದ ವಿಷಯವಾಗಿ, ಚರ್ಚಿಸಲಾದ ಹಲವಾರು ಪರಿಣಾಮಗಳಲ್ಲಿ ಅಪರಾಧದ ಮನಸ್ಸಾಕ್ಷಿಯ ವೇದನೆಯು ಒಂದು ಪರಿಣಾಮವಾಗಿರುತ್ತದೆ. ಬೇರೆಯವರ ಮೇಲಾಗುವ ಪಾಪದ ಪರಿಣಾಮಗಳ ಬಗ್ಗೆ ನೋಡುವದಾದರೆ, ಯುದ್ಧವು ಪಾಪದ ಒಂದು ವ್ಯಾಪಕ ಪರಿಣಾಮಗಳಲ್ಲೊಂದಕ್ಕೆ ಉದಾಹರಣೆಯಾಗಿ ಬಳಸಲ್ಪಟ್ಟಿತು. ದೇವರು ಮಾನವರಿಗೆ *ಎಚ್ಚರಿಸುವದಕ್ಕಾಗಿ*, ಅವರನ್ನು ಪಾಪದಿಂದ ವಿಮುಖರಾಗಿ ತನ್ನ ಕಡೆಗೆ ತಿರುಗಿಸಿಕೊಳ್ಳಲು ಪ್ರಯತ್ನಿಸುವದಕ್ಕಾಗಿ ಈ ಪರಿಣಾಮಗಳನ್ನು ಅನುಮತಿಸುತ್ತಾನೆಂದು ಅಭಿಪ್ರಾಯವನ್ನು ತಿಳಿಸಲಾಯಿತು.

ಅನೇಕ ಸಮಾಂತರತೆಗಳನ್ನು ತುತೂರಿಗಳು ಹಾಗೂ ಪಾತ್ರೆಗಳ ನಡುವೆ ಕಾಣಬಹುದು, ಆದರೆ ನಾವು ಪಾತ್ರೆಗಳನ್ನು ಕೇವಲ ಒಂದು ಮರು-ಪ್ರದರ್ಶನ ಮಾತ್ರವೇ ಆಗಿರುತ್ತದೆಂದು ಭಾವಿಸಿಕೊಳ್ಳಬಾರದು. ಸಾಮ್ಯತೆಗಳು ಮಹತ್ವಪುರ್ಣವಾದವುಗಳು, ಆದರೆ ವ್ಯತ್ಯಾಸಗಳು ಸಹ ಮತಹ್ವವಾಗಿರುತ್ತವೆ.

1. ತುತೂರಿಗಳು ಹಾಗೂ ಪಾತ್ರೆಗಳ ನಡುವೆ ಅವುಗಳ ಕ್ರಿಯೆಯ *ಲಕ್ಷ್ಯದ* ವಿಷಯದಲ್ಲಿ ಭಿನ್ನತೆಯನ್ನು ಹೊಂದಿವೆ. ತುತೂರಿಗಳ ವಿಷಯದಲ್ಲಿ ನೋಡಿದರೆ, ಮಾನವರ ಮೇಲೆ ಅನೇಕ ಸಾರಿ ಪರೋಕ್ಷವಾದ ಪರಿಣಾಮವುಂಟಾಯಿತು; ಮೂರನೆಯ ತುತೂರಿಯ ತನಕವೂ ಮಾನವರ ಬಗ್ಗೆ ಪ್ರಸ್ತಾವನ್ನು ಸಹ ಮಾಡಲಿಲ್ಲ (8:11). ಅದಕ್ಕೆ ತದ್ವಿರುದ್ಧವಾಗಿ, ಮೊದಲನೆಯ ಪಾತ್ರೆಯಿಂದ ಆರಂಭಗೊಂಡು, ಮನುಷ್ಯರ ನೇರವಾದ ಗುರಿಗೆ ತುತ್ತಾಗಿರುತ್ತಾರೆ - ವಿಶೇಷವಾಗಿ "ಮೊದಲನೆಯ ಮೃಗದ ಗುರುತನ್ನು ಹೊಂದಿ ಅದರ ವಿಗ್ರಹಕ್ಕೆ ನಮಸ್ಕಾರಮಾಡುವ ಮನುಷ್ಯರು" ಗುರಿಯಾಗಿದ್ದರು (16:2). ದೇವರ ರೌದ್ರವು

ಸುರಿಸಲ್ಪಡುವಾಗ, ಕರುಣೆಯೇ ಇರುವದಿಲ್ಲ.

2. ತುತೂರಿಗಳು ಹಾಗೂ ಪಾತ್ರೆಗಳ ನಡುವೆ ಅವುಗಳ ಕ್ರಿಯೆಯ ತೀಕ್ಷ್ಣತೆಯ ನಡುವೆ ಭಿನ್ನತೆಯಿರುತ್ತದೆ. ಒಟ್ಟಾರೆಯಾಗಿ, ತುತೂರಿಗಳಿಂದ ಅವುಗಳ ಉದ್ದೇಶಿತ ಲಕ್ಷ್ಯದೊಳಗೆ ಕೇವಲ ಮೂರರಲ್ಲಿ ಒಂದು ಭಾಗದ ಮೇಲೆ ಮಾತ್ರವೇ ಹಾನಿ ಉಂಟಾಗಿತ್ತು (8:7-12; 9:15, 18). ಪಾತ್ರೆಗಳ ವಿಷಯದಲ್ಲಿ ಅಂತಹ ಯಾವದೇ ಮಿತಿಗಳಿರುವದಿಲ್ಲ (ನೋಡಿರಿ 16:3). ದೇವರ ರೌದ್ರವು ಸುರಿಸಲ್ಪಡುವಾಗ, ಯಾವದೇ ನಿರ್ಬಂಧವು ಇರುವದಿಲ್ಲ.

3. ತುತೂರಿಗಳು ಹಾಗೂ ಪಾತ್ರೆಗಳ ನಡುವೆ ಅವುಗಳ ಕ್ರಿಯೆಯಲ್ಲಿನ *ಕ್ಷಿಪ್ರತೆಯಲ್ಲಿ* ಭಿನ್ನತೆಯಿರುತ್ತದೆ. ಪಾತ್ರೆಗಳನ್ನು ಹಿಡಿದುಕೊಂಡಿದ್ದ ದೇವದೂತರಿಗೆ ಒಂದೇ ಆಜ್ಞೆಯು ಕೊಡಲ್ಪಡುತ್ತದೆ (16:1), ಅದಾದ ಬಳಿಕ ಅವರು ಪಾತ್ರೆಗಳನ್ನು ಒಂದಾದ ಮೇಲೊಂದರಂತೆ ವೇಗವಾಗಿ ಸುರಿದರೆಂದು ಕಾಣಿಸುತ್ತದೆ. ಐದನೆಯ ಪಾತ್ರೆಯು ಸುರಿಸಲ್ಪಟ್ಟಾಗ (16:10), ಮನುಷ್ಯರ ಮೇಲೆ ಮೊದಲನೆಯ ಪಾತ್ರೆಯು ಸುರಿಸಲ್ಪಟ್ಟ ಪರಿಣಾಮವಾಗಿ ಉಂಟಾಗಿದ್ದ ಹುಣ್ಣುಗಳು ಈಗಲೂ ಇದ್ದವು (16:2, 11). ದೇವರ ರೌದ್ರವು ಸುರಿಸಲ್ಪಡುವಾಗ, ಅಲ್ಲಿ ವಿಳಂಬವು ಇರುವದಿಲ್ಲ.

4. ತುತೂರಿಗಳು ಹಾಗೂ ಪಾತ್ರೆಗಳ ನಡುವೆ ಅವುಗಳ ಕ್ರಿಯೆಯ *ಉದ್ದೇಶದಲ್ಲಿ* ಭಿನ್ನತೆಯಿತ್ತು. ಈಗಾಗಲೇ ಗಮನಿಸಿರುವ ಪ್ರಕಾರ, ತುತೂರಿಗಳು ನೋವು ಹಾಗೂ ರೋದನೆಯನ್ನು - ಮತ್ತು ಸ್ವಲ್ಪ ಮಟ್ಟಿಗೆ ಮರಣವನ್ನು - ಉಂಟು ಮಾಡಿದವಾದರೂ, ಅವುಗಳ ಪ್ರಾಥಮಿಕ ಉದ್ದೇಶವು *ಎಚ್ಚರಿಕೆ ನೀಡುವದು* ಆಗಿತ್ತು (15:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು ಪಾಪಿಯಾಗಿರುವ ಮನುಷ್ಯನ ಗಮನವನ್ನು ತನ್ನ ಕಡೆಗೆ ಸೆಳೆಯುವದಕ್ಕೆ ಪ್ರಯತ್ನಿಸುತ್ತಿದ್ದಾನೆ. ತುತೂರಿಗಳ ಉದ್ದೇಶವು ಪೇತ್ರನ ಮಾತುಗಳನ್ನು ಸಾರಾಂಶಗೊಳಿಸಲ್ಪಡಬಹುದಾಗಿದೆ: "ಕರ್ತನು ... ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ" (2 ಪೇತ್ರ 3:9). ಇನ್ನೊಂದು ಕಡೆಯಲ್ಲಿ, ಪಾತ್ರೆಗಳ ಪ್ರಾಥಮಿಕ ಉದ್ದೇಶವು ಎಚ್ಚರಿಸುವದು ಆಗಿರಲಿಲ್ಲ, ಆದರೆ *ದಂಡಿಸುವದು* ಆಗಿತ್ತು. ಅವರು "ಮಾನಸಾಂತರಮಾಡಿಕೊಳ್ಳದೆ" (16:9, 11) ಎಂಬುದು ಅವರು ಪಶ್ಚಾತ್ತಾಪ ಪಟ್ಟಿರ*ಬಹುದಿತ್ತು* ಎಂಬುದನ್ನು ಸೂಚಿಸುವ ಸಾಧ್ಯತೆಯಿರುವದರಿಂದ "*ಪ್ರಾಥಮಿಕ* ಉದ್ದೇಶ" ಎಂಬ ಪದವು ಬಳಸಲ್ಪಟ್ಟಿದೆ. ಪಾತ್ರೆಗಳು (ರೋಮನ್ ಸಾಮ್ರಾಜ್ಯದ ಮೇಲಿನ) ತಾತ್ಕಾಲಿಕ ನ್ಯಾಯತೀರ್ಪನ್ನು ಸೂಚಿಸುವದಾದರೆ, ನೇರವಾಗಿ ಬಾಧಿಸಲ್ಪಡದಂಥ ಮನುಷ್ಯರು ರೋಮನ್ ಸಾಮ್ರಾಜ್ಯಕ್ಕಾದ ಗತಿಯನ್ನು ನೋಡಿ ಕಲಿತುಕೊಂಡು ದೇವರ ಕಡೆಗೆ ತಿರಿಗಿಕೊಂಡಿರಬಹುದಿತ್ತು. ಹೀಗೆ ಎರಡನೆಯ ಉದ್ದೇಶವು ಕೆಲವರನ್ನು ಎಚ್ಚರಿಸಿ ಪಶ್ಚಾತ್ತಾಪಕ್ಕೆ ನಡಿಸುವದಾಗಿರಬಹುದಾದ ಸಾಧ್ಯತೆಯು ಇರುತ್ತದೆ. ಹೇಗೂ, ಪ್ರಾಥಮಿಕ ಉದ್ದೇಶವು ಪಶ್ಚಾತ್ತಾಪವಿಲ್ಲದ ಕಠಿನ ಹೃದಯದ ಮನುಷ್ಯರನ್ನು *ದಂಡಿಸುವದೇ* ಆಗಿತ್ತು.

ಪುನಃ, ಪಾತ್ರೆಗಳು ಮೂಲತಃ ತುತೂರಿಗಳೊಂದಿಗೆ ಸಮಾಂತರತೆಯಲ್ಲಿದ್ದವಾದರೂ, ಬಹುಪಾಲು ಚಿತ್ರಣವು ವ್ಯತ್ಯಾಸವಾಗಿರುತ್ತದೆ. ಒಂದು ಕಾರಣವು ಏನೆಂದರೆ ಪಾತ್ರೆಗಳ ಸಾಂಕೇತಿಕತೆಯು ಐಗುಪ್ತದ ಮೇಲೆ ಬಂದ ಉಪದ್ರವಗಳಿಂದ ಬಹುವಾಗಿ ಸ್ಪೂರ್ತಿಗೊಂಡಿರುತ್ತದೆ (15:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 2. ಆಗ ಮೊದಲನೆಯವನು ಹೊರಟು ತನ್ನ ಪಾತ್ರೆಯಲ್ಲಿದ್ದದ್ದನ್ನು ಭೂಮಿಗೆ ಹೊಯ್ದನು; ಕೂಡಲೇ ... ಮನುಷ್ಯರ ಮೈಮೇಲೆ ಕೆಟ್ಟ ಉರಿಹುಣ್ಣು ಎದ್ದಿತು. ಉರಿಹುಣ್ಣು**

ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ἕλκος (*helkos*) ಎಂದಾಗಿದ್ದು, ಐಗುಪ್ತ್ಯರಿಗೆ ಬಾಧಿಸಿ ಉಪದ್ರವದಿಂದಾದ ಬೊಕ್ಕೆಗಳು ಎಂಬುದಕ್ಕೆ ಸೆಪ್ಟುಜಿಂಟ್‌ನಲ್ಲಿ ಇದೇ ಪದವು ಬಳಸಲ್ಪಟ್ಟಿರುತ್ತದೆ (ವಿಮೋಚನಕಾಂಡ 9:9-11). ಕೆಲವು ಜನರು ಒಂದು ಜೋರಾಗಿ ತುಡಿಯುವ, ಜ್ವರ ಬಂದಂತೆ ಅನ್ನಿಸುವ ಹಾಗೂ ನೋವುಕರವಾದ ಹುಣ್ಣನ್ನು ಹೊಂದಿರುವದೆಂದರೆ ಹೇಗಿರುತ್ತದೆಂಬುದನ್ನು ಜ್ಞಾಪಿಸಿಕೊಳ್ಳಬಹುದಾಗಿದೆ. ಅವುಗಳನ್ನು ದೇಹದ ತುಂಬೆಲ್ಲಾ ಹೊಂದಿರುವದು ಹೇಗಿರುತ್ತದೆಂಬುದನ್ನು ನಾವು ಕೇವಲ ಊಹೆ ಮಾತ್ರವೇ ಮಾಡಬಲ್ಲೆವು. ಹೇಗೂ *helkos* ಎಂಬ ಪದವು ವಿವಿಧ ಚರ್ಮ ಕಾಯಿಲೆಗಳನ್ನು ಸೂಚಿಸಬಹುದಾಗಿದೆ, ಅವುಗಳಲ್ಲಿ ಚರ್ಮದ ಬೊಕ್ಕೆಗಳು, ಚರ್ಮ ಕ್ಯಾನ್ಸರ್, ಮತ್ತು ಕುಷ್ಠರೋಗ ಸಹ ಸೇರಿರಬಹುದು.

ಪಾತ್ರೆಗಳನ್ನು ಅಕ್ಷರಶಃ ಅರ್ಥೈಸಿಕೊಳ್ಳಬೇಕೆಂಬ ಉದ್ದೇಶವಿರುವದಿಲ್ಲ. ಹುಣ್ಣುಗಳು ತಮ್ಮ ಪಾಪದ ನಿಮಿತ್ತವಾಗಿ ಮನುಷ್ಯರು ತಮ್ಮ ಮೇಲೆ ತಂದುಕೊಳ್ಳುವ ನೋವು ಹಾಗೂ ಕಡುಸಂಕಟಗಳಿಗೆ *ಸಂಕೇತಗಳಾಗಿವೆ.* ಇವುಗಳಲ್ಲಿ ದೈಹಿಕ ವ್ಯಾಧಿಗಳು ಸೇರಿರಬಹುದು, ಆದರೆ ಅದರಲ್ಲಿ ಇನ್ನು ಎಷ್ಟೋ ಅಧಿಕವಾದದ್ದು ಸಹ ಸೇರಿರುತ್ತದೆ.

ಈ **ಕೆಟ್ಟ ಉರಿಹುಣ್ಣು**ಗಳಿಂದ ಬಾಧಿಸಲ್ಪಟ್ಟವರು ಯಾರೆಂದರೆ **ಮೊದಲನೆಯ ಮೃಗದ ಗುರುತನ್ನು ಹೊಂದಿ ಅದರ ವಿಗ್ರಹಕ್ಕೆ ನಮಸ್ಕಾರ**ಮಾಡಿದವರೇ - ಸರಳವಾಗಿ ಹೇಳುವದಾದರೆ, ಚಕ್ರವರ್ತಿಯ ಆರಾಧನೆಯನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲವನ್ನೂ ಅಂಗೀಕರಿಸಿಕೊಂಡು ಸಾಗಿದವರು. ಇಂದು, ಈ ಬಣ್ಣನೆಯೊಳಗೆ ಕರ್ತನಿಗಿಂತಲೂ ಮುಂದಾಗಿ ಬೇರೆ ದೇವರುಗಳಿಗೆ, ಬೇರೆ ಜನರಿಗೆ, ಬೇರೆ ಸಂಗತಿಗಳಿಗೆ ಮುಖ್ಯತ್ವವನ್ನು ಕೊಟ್ಟವರು ಸೇರಿರಬಹುದಾಗಿದೆ (ನೋಡಿರಿ ವಿಮೋಚನಕಾಂಡ 20:3).

## ಎರಡನೆಯ ಪಾತ್ರೆ (16:3)

**3ಎರಡನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ಸಮುದ್ರದ ಮೇಲೆ ಹೊಯಿದನು. ಅದರ ನೀರು ಸತ್ತವನ ರಕ್ತದ ಹಾಗಾಯಿತು; ಮತ್ತು ಸಮುದ್ರದಲ್ಲಿದ್ದ ಜೀವಜಂತುಗಳೆಲ್ಲವು ಸತ್ತುಹೋದವು.**

**ವಚನ 3.** ಎರಡನೆಯ ತುತೂರಿಯು ಊದಲ್ಪಟ್ಟಾಗ, ಸಮುದ್ರದೊಳಗೆ *ಮೂರರಲ್ಲಿ* ಒಂದು ಭಾಗವು ರಕ್ತವಾಗಿ ಮಾರ್ಪಟ್ಟಿತು (8:8), ಆದರೆ ಈಗ **ಸಮುದ್ರ** *ಪೂರ್ತಿಯಾಗಿ* **ಸತ್ತವನ ರಕ್ತದ ಹಾಗಾಯಿತು** - ಹೆಪ್ಪುಗಟ್ಟಿದ ಹಾಗೂ ಕೊಳೆಯುತ್ತಿರುವ ರಕ್ತ. ನಾವು ಹೆಪ್ಪುಗಟ್ಟಿದ ರಕ್ತ ಹಾಗೂ ಮೀನುಗಳ ಮತ್ತು ಇತರ ಸಮುದ್ರ ಜೀವಿಗಳ ಮೃತ ದೇಹಗಳಿಂದ ಆವರಿಸಲ್ಪಟ್ಟು ಹೊಲಸಾಗಿರುವ ಸಮುದ್ರ ದಡಗಳನ್ನು ಊಹಿಸಿಕೊಳ್ಳಬಹುದು. ದುರ್ವಾಸನೆಯು ಸಹಿಸಲಾಗದಷ್ಟು ದಟ್ಟವಾಗಿರಬಹುದಾಗಿದೆ.

ಪುನಃ, ಈ ದೃಶ್ಯವನ್ನು ಅಕ್ಷರಶಃವಾಗಿ ಭಾವಿಸಿಕೊಳ್ಳಬಾರದೆಂದು ನಾವು ನೆನಪಿಟ್ಟುಕೊಳ್ಳತಕ್ಕದ್ದು. ಯಾವ ಕಾಲದಲ್ಲಿಯೂ ಸಮುದ್ರದ ನೀರೆಲ್ಲಾ ರಕ್ತಮಯವಾಗಿ ಮಾರ್ಪಡುವದಕ್ಕೆ ಸಾಧ್ಯವೇ ಇರುವದಿಲ್ಲ; ಈ ಭಾಷೆಯು ಸಾಂಕೇತಿಕವಾಗಿರುತ್ತದೆ. ಆ ದಿನಗಳಲ್ಲಿ, ದೇಶಗಳು ವಾಣಿಜ್ಯಕ್ಕಾಗಿ ಸಮುದ್ರವನ್ನೇ ಆಧಾರ ಮಾಡಿಕೊಂಡಿದ್ದವು, ಮತ್ತು ಮೀನಿನ ಉದ್ಯಮವು ಆಹಾರದ ಪ್ರಮುಖ ಮೂಲವಾಗಿತ್ತು. ಈ ದೃಶ್ಯವು ಹೀಗೆ ಪಾಪದಿಂದಾಗುವ ಭಯಂಕರವಾದ ಪರಿಣಾಮಗಳ ಕುರಿತು ಒತ್ತಿ ಹೇಳುವದನ್ನು

ಮುಂದುವರೆಸುತ್ತದೆ: ಪಾಪವು ಜೀವಿತಕ್ಕೆ ಭಂಗವನ್ನುಂಟು ಮಾಡುತ್ತದೆ. ಪಾಪವು ತಾನು ಮುಟ್ಟಿದ್ದೆಲ್ಲವನ್ನೂ ಭ್ರಷ್ಟಗೊಳಿಸುತ್ತದೆ.

## ಮೂರನೆಯ ಪಾತ್ರೆ (16:4-7)

**4ಮೂರನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ನದಿಗಳ ಮೇಲೆಯೂ ನೀರಿನ ಬುಗ್ಗೆಗಳ ಮೇಲೆಯೂ ಹೊಯಿದನು; ಅವುಗಳ ನೀರು ರಕ್ತವಾಯಿತು. 5ಆಮೇಲೆ ಜಲಾಧಿಪತಿಯಾದ ದೂತನು - ಸದಾ ಇರುವಾತನೇ, ಪರಿಶುದ್ಧನೇ, ನೀನು ಹೀಗೆ ತೀರ್ಪುಮಾಡಿದ್ದರಲ್ಲಿ ನೀತಿಸ್ವರೂಪನಾಗಿದ್ದೀ. 6ಅವರು ದೇವಜನರ ಮತ್ತು ಪ್ರವಾದಿಗಳ ರಕ್ತವನ್ನು ಸುರಿಸಿದರು; ನೀನು ಅವರಿಗೆ ರಕ್ತವನ್ನೇ ಕುಡಿಯುವದಕ್ಕೆ ಕೊಟ್ಟಿದ್ದೀ; ಇದಕ್ಕೆ ಅವರು ಪಾತ್ರರು ಎಂದು ಹೇಳುವದನ್ನು ಕೇಳಿದೆನು. 7ಆಮೇಲೆ ಯಜ್ಞವೇದಿಯು ಮಾತಾಡುತ್ತಾ - ದೇವರಾದ ಕರ್ತನೇ, ಸರ್ವಶಕ್ತನೇ, ನಿನ್ನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿವೆ ನಿಜ ಎಂದು ಹೇಳುವದನ್ನು ಕೇಳಿದೆನು.**

**ವಚನ 4. ಮೂರನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ನದಿಗಳ ಮೇಲೆಯೂ ನೀರಿನ ಬುಗ್ಗೆಗಳ ಮೇಲೆಯೂ ಹೊಯಿದನು; ಅವುಗಳ ನೀರು ರಕ್ತವಾಯಿತು**. ನೈಲ್ ನದಿಯು ರಕ್ತವಾಗಿ ಮಾರ್ಪಟ್ಟ ವೇಳೆ, ಐಗುಪ್ತ್ಯರು ನೀರಿಗೋಸ್ಕರ ಬಾವಿಗಳನ್ನು ಅಗೆದರು (ವಿಮೋಚನಕಾಂಡ 7:24), ಆದರೆ ಪ್ರಕಟನೆ 16ರಲ್ಲಿನ ಉಪದ್ರವದ ವೇಳೆ, ಒರತೆಗಳು ಸಹ – ನೀರಿನ ಮೂಲಗಳು – ರಕ್ತವಾಗಿ ಮಾರ್ಪಟ್ಟವು. ಎಲ್ಲಿಯೂ ನೀರು ಸಿಕ್ಕಲಿಲ್ಲ. Leon Morrisನು ಗಮನಕ್ಕೆ ತರುವದೇನೆಂದರೆ, "ಕುಡಿಯುವದಕ್ಕೆ ನೀರು ಇಲ್ಲವಾದರೆ ಮಾನವ ಜನಾಂಗಕ್ಕೆ ಭವಿಷ್ಯವೇ ಇರುವದಿಲ್ಲ."[6] James Straussನು ತಿಳಿಸುವದೇನೆಂದರೆ, "ನೀರಿನ ಕೊರತೆಯಿಂದಾದ ಕಡುಸಂಕಟವು ಮಾನವ ಬಾಧೆಗಳಲ್ಲಿಯೇ ಅತ್ಯಂಥ ಭಯಂಕರವಾದ ಯಾತನೆ ಆಗಿರುತ್ತದೆ."[7]

ಇದರ ಅರ್ಥವು ಒಂದು ದಿನ ಸಮುದ್ರದ ನೀರೆಲ್ಲಾ ರಕ್ತವಾಗಿ ಮಾರ್ಪಡುವದು ಎಂದಾಗಿದೆಯೋ? ಅಕ್ಷರಶಃವಾದಿಗಳು ಹಾಗೆಯೇ ಯೋಚಿಸುತ್ತಾರೆ. ಒಬ್ಬ ಲೇಖಕನು ಈ ರೀತಿಯಾಗಿ ಸಹ ಅಭಿಪ್ರಾಯಪಟ್ಟವು, ಏನೆಂದರೆ "ಮುಂದೊಂದು ದಿನ ಕೊಕಾ-ಕೊಲಾ ಪಾನಿಯಕ್ಕೆ ದೊಡ್ಡ ಬೇಡಿಕೆಯಿರಲಿದೆ."[8] ಖಡಾಖಂಡಿತವಾದ ಉತ್ತರವು ಈಗಲೂ "ಇಲ್ಲ, ಇದನ್ನು ಅಕ್ಷರಶಃ ತೆಗೆದುಕೊಳ್ಳ*ಬಾರದು*. ಇವುಗಳು ಸಂಕೇತಗಳಷ್ಟೆ!" ರಕ್ತದ ಸಾದೃಶ್ಯವು ಎರಡನೆಯ ಹಾಗೂ ಮೂರನೆಯ ಪಾತ್ರೆಗಳಿಗೆ ಸಂಬಂಧಪಟ್ಟಂತೆ ಬಳಸಲಾಗಿರುತ್ತದೆ ಯಾಕೆಂದರೆ ಪವಿತ್ರಾತ್ಮನು ಇಲ್ಲಿ ನಮಗೊಂದು ವಿಷಯವನ್ನು ತಿಳಿಸಲಿರುವನು, ಅದು 6 ಮತ್ತು 7 ವಚನಗಳನ್ನು ಒತ್ತಿ ಹೇಳಲಾಗಿರುವ ಅಂಶವಾಗಿದೆ. ಮೂರನೆಯ ತುತೂರಿಯು ಊದಲ್ಪಡುವಾಗ, ಭೂಮಿಯಲ್ಲಿನ ನೀರು ಸಹ ಕುಡಿಯುವದಕ್ಕೆ ಯೋಗ್ಯವಲ್ಲದ್ದಾಗುತ್ತದೆ - ಆದರೆ ಆ ಸಂದರ್ಭದಲ್ಲಿ ಅದಕ್ಕೆ ಕಾರಣವು ನೀರು ವಿಷವಾಗಿ ಮಾರ್ಪಡಿಸಲ್ಪಟ್ಟಿದ್ದೇ ಆಗಿತ್ತು (8:11). ಮೂರನೆಯ ಪಾತ್ರೆಗೆ ಸಂಬಂಧಪಟ್ಟಂತೆ "ದಂಡನೆಯು ಮಾಡಿದ ಅಪರಾಧಕ್ಕೆ ತಕ್ಕಂತೆ ಇರುತ್ತದೆ" ಎಂಬುದನ್ನು ಒತ್ತಿ ಹೇಳುವದಕ್ಕಾಗಿ ರಕ್ತದ ಸಾದೃಶ್ಯವು ಬಳಸಲ್ಪಟ್ಟಿದೆ (ವ. 6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 5. ಆಮೇಲೆ ಜಲಾಧಿಪತಿಯಾದ ದೂತನು - ಸದಾ ಇರುವಾತನೇ, ಪರಿಶುದ್ಧನೇ, ನೀನು ಹೀಗೆ ತೀರ್ಪುಮಾಡಿದ್ದರಲ್ಲಿ ನೀತಿಸ್ವರೂಪನಾಗಿದ್ದೀ. ಜಲಾಧಿಪತಿ** ಎಂಬ ಪದಗುಚ್ಛವು ಬೈಬಲಿನೊಳಗೆ ಬೇರೆ ಎಲ್ಲೂ ಸಿಕ್ಕುವದಿಲ್ಲ. ಈ ದೇವದೂತನು ಭೂಮಿಯ ಮೇಲಿನ ನೀರಿನ

ಮೇಲೆ ಜವಾಬ್ದಾರಿಯುಳ್ಳವನು ಆಗಿರಬಹುದು, ಅಥವಾ ಅವನು ಭೂಮಿಯ ನೀರುಗಳ ಮೇಲೆ ತನ್ನ ಪಾತ್ರೆಯನ್ನು ಸುರಿದ ದೇವದೂತನಾಗಿರಬಹುದು (ವ. 4). ಈ ನಾಟಕದಲ್ಲಿ ಆತನ ಉದ್ದೇಶವು ದೇವರು ತನ್ನ ರೌದ್ರವನ್ನು ಸುರಿಸುವದು ಸರಿ ಮತ್ತು ನ್ಯಾಯವಾದದ್ದು ಎಂಬುದನ್ನು ವಾದಿಸುವದು ಆಗಿರಬಹುದು (ನೋಡಿರಿ ನೆಹಮೀಯ 9:33). NIVಯಲ್ಲಿ "ಈ ನ್ಯಾಯತೀರ್ಪುಗಳನ್ನು ಮಾಡಿದ್ದರಲ್ಲಿ ನೀತಿಯುಳ್ಳವನಾಗಿದ್ದೀ" ಎಂದಿರುತ್ತದೆ.

11:17ರಲ್ಲಿರುವ ಪ್ರಕಾರ, ಮೂರನೆಯ ಪದವಾದ "ಬರುವಾತನು [ಇರುವಾತನು]" ಎಂಬುದು - ಕರ್ತನು ನ್ಯಾಯತೀರ್ಪಿನಲ್ಲಿ ಇಳಿದು ಬಂದಿದ್ದಾನೆಂಬುದಕ್ಕಾಗಿ ಬಳಸಲ್ಪಟ್ಟಿಲ್ಲ (11:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವದೂತನ ಮಾತುಗಳು 15ನೇ ಅಧ್ಯಾಯದಲ್ಲಿರುವ ಮೋಶೆಯ ಹಾಗೂ ಯಜ್ಞದ ಕುರಿಯಾದಾತನ ಹಾಡಿನಲ್ಲಿರುವ ಪದಗಳಂತೆಯೇ ಇರುತ್ತವೆ. ದೇವರು ಪುನಃ **ಪರಿಶುದ್ಧನೇ** ಎಂದು ಕರೆಯಲ್ಪಟ್ಟಿದ್ದಾನೆ (ನೋಡಿರಿ 15:4).

**ವಚನ 6.** ದೇವರ ಕೃತ್ಯದ ನ್ಯಾಯವು ಈ ಮನಸೆಳೆಯುವ ಮಾತುಗಳಲ್ಲಿ ಒತ್ತಿ ಹೇಳಲ್ಪಟ್ಟಿದೆ: **ಅವರು ದೇವಜನರ ಮತ್ತು ಪ್ರವಾದಿಗಳ ರಕ್ತವನ್ನು ಸುರಿಸಿದರು; ನೀನು ಅವರಿಗೆ ರಕ್ತವನ್ನೇ ಕುಡಿಯುವದಕ್ಕೆ ಕೊಟ್ಟಿದ್ದೀ; ಇದಕ್ಕೆ ಅವರು ಪಾತ್ರರು. ದೇವಜನರ ಮತ್ತು ಪ್ರವಾದಿಗಳ** ಎಂಬ ಪದಗುಚ್ಛವು ಕ್ರೈಸ್ತರಲ್ಲಿರುವ ಎರಡು ವರ್ಗಗಳ ಪಟ್ಟಿ ಮಾಡುವಿಕೆಯಲ್ಲ, ಆದರೆ ಅದು "ಅವರನ್ನು ನಡಿಸುವವರೂ ಸೇರಿದಂತೆ, *ಎಲ್ಲಾ* ಕ್ರೈಸ್ತರು" ಎಂದು ಹೇಳುವ ರೀತಿಯಾಗಿರುತ್ತದೆ. ಪ್ರವಾದಿಗಳು ಸಭೆಯಲ್ಲಿದ್ದ ಆದಿ ನಾಯಕರೊಳಗೆ ಸೇರಿದ್ದರು (ನೋಡಿರಿ ಎಫೆಸ 4:11). **ಇದಕ್ಕೆ ಅವರು ಪಾತ್ರರು** ಎಂಬ ಪದಗುಚ್ಛವು "ಅವರು ಅದಕ್ಕೆ ಯೋಗ್ಯರು" (KJV) ಎಂದು ಸಹ ಅನುವಾದಿಸಬಹುದು. ಪೌಲನು "ಯೋಗ್ಯರು" (ἄξιος, *axios*) ಎಂಬ ಪದವನ್ನು ರೋಮಾ 1:32ರಲ್ಲಿ ಕೆಲವರು "ಮರಣಕ್ಕೆ ಪಾತ್ರರಾಗಿದ್ದಾರೆ" ಎಂದು ಹೇಳುವಾಗ ಅದೇ ಅರ್ಥದಲ್ಲಿ ಬಳಸಿದನು.

ತತ್ಪರಿಣಾಮವಾಗಿ, ದೇವರು ಕ್ರೈಸ್ತರ ರಕ್ತವನ್ನು ಸುರಿಸಿದ್ದವರಿಗೆ ಹೀಗೆ ಹೇಳುತ್ತಿದ್ದಾರೆ, "ನಿಮಗೆ ರಕ್ತ ಬೇಕಲ್ಲವೇ; ನಿಮಗೆ ರಕ್ತವು ಸಿಕ್ಕುವದು - ರಕ್ತವು ನಿಮ್ಮ ಬಾಯಿಗಳಲ್ಲಿ ತುಂಬುವದು, ನಿಮ್ಮ ಹೊಟ್ಟೆಗಳಲ್ಲಿ ರಕ್ತವು ತುಂಬಿಕೊಳ್ಳುವದು, ರಕ್ತವು ನಿಮ್ಮ ಮೂಗಿನ ಹೊಳ್ಳೆಗಳಲ್ಲಿ ತುಂಬಿಕೊಳ್ಳುವದು!" ರೋಮ್ ಸಾಮ್ರಾಜ್ಯಕ್ಕೆ ಆತನ ಸಂದೇಶವು ಆತನು ಎದೋಮಿಗೆ ನೀಡಿದ ಸಂದೇಶದಂತೆಯೇ ಆಗಿತ್ತು: "ಯೆಹೋವನ ದಿನವು ಸಮಸ್ತ ಜನಾಂಗಗಳಿಗೆ ಸಮೀಪಿಸಿದೆ; ನೀನು ಮಾಡಿದ್ದೇ ನಿನಗಾಗುವದು; ನಿನ್ನ ಕೃತ್ಯವೇ ನಿನ್ನ ತಲೆಗೆ ಬರುವದು" (ಓಬದ್ಯ 15).

6ನೇ ವಚನದಲ್ಲಿ ಎರಡು ಶ್ರೇಷ್ಠ ಸತ್ಯಗಳು ಪ್ರತಿಫಲನಗೊಂಡಿರುತ್ತವೆ. ಮೊದಲನೆಯದು ಯಾವದೆಂದರೆ ದೇವರ ರೌದ್ರವನ್ನು ಅನುಭವಿಸಿದವರು ತಮ್ಮ ಸಮಸ್ಯೆಗಳನ್ನೇ ತಮ್ಮ ಮೇಲೆ ತಂದುಕೊಳ್ಳುವರು. ದೇವರು ಮನುಷ್ಯರನ್ನು ತನ್ನ ಕಡೆಗೆ ಪುನಃ ಕರೆ ತರುವದರಲ್ಲಿ ತನ್ನ ಪಾತ್ರವನ್ನು ಮಾಡಿ ಮುಗಿಸಿದ್ದನು. ವ್ಯಕ್ತಿಗಳು ದೇವರ ಪ್ರೀತಿಯ ವ್ಯಕ್ತಪಡಿಸುವಿಕೆಗಳನ್ನು ತಿರಸ್ಕರಿಸುವದಾದರೆ ಮತ್ತು ಆತನ ಎಚ್ಚರಿಕೆಗಳನ್ನು ನಿರ್ಲಕ್ಷ್ಯ ಮಾಡುವದಾದರೆ, ಅವರು ತಮ್ಮ ಮೇಲೆ ನ್ಯಾಯತೀರ್ಪನ್ನು ತಂದುಕೊಳ್ಳುತ್ತಾರೆ. ಬಹಳ ಕಾಲದ ಹಿಂದೆ, ದೇವರು ಇಸ್ರಾಯೇಲ್ಯರಿಗೆ ಹೀಗೆ ಹೇಳಿದನು,

> ಆದರೆ ನೀವು ನಿಮ್ಮ ದೇವರಾದ ಯೆಹೋವನ ಮಾತಿಗೆ ಕಿವಿಗೊಡದೆ ನಾನು ಈಗ ನಿಮಗೆ ಬೋಧಿಸುವ ಆತನ ಆಜ್ಞಾವಿಧಿಗಳನ್ನು ಅನುಸರಿಸದೆ ಹೋದರೆ ಈ ಅಶುಭಗಳು

> ನಿಮಗೆ ಪ್ರಾಪ್ತವಾಗುವವು ... ನೀವು ದುರ್ನಡತೆಯುಳ್ಳವರಾಗಿ ಯೆಹೋವನನ್ನು ಬಿಟ್ಟದ್ದರಿಂದ ಆತನು ನಿಮ್ಮ ಎಲ್ಲಾ ಪ್ರಯತ್ನಗಳಲ್ಲಿಯೂ ವಿಪತ್ತು, ಕಳವಳ, ಶಾಪ ಇವುಗಳನ್ನುಂಟುಮಾಡುತ್ತಾ ನಿಮ್ಮನ್ನು ಬೇಗನೆ ನಾಶಮಾಡುವನು (ಧರ್ಮೋಪದೇಶಕಾಂಡ 28:15, 20).

ಎರಡನೆಯ ಸತ್ಯವೆಂದರೆ, ದೇವರ ವ್ಯವಸ್ಥೆಯಲ್ಲಿ, ದಂಡನೆಯು ಅನೇಕ ಸಾರಿ "ಅಪರಾಧಕ್ಕೆ ತಕ್ಕಂತೆ ಇರುತ್ತದೆ." ಈ ವಾಸ್ತವಾಂಶದ ಕುರಿತು ಬೈಬಲಿನಲ್ಲಿ ಅನೇಕ ದೃಷ್ಟಾಂತಗಳಿರುತ್ತವೆ:

> ಫರೋಹನು ಯೆಹೂದಿ ಕೂಸುಗಳನ್ನು ನದಿಯಲ್ಲಿ ಮುಳುಗಿಸುವದಕ್ಕೆ ಪ್ರಯತ್ನಿಸಿದನು, ಆದರೆ ಕ್ರಮೇಣದಲ್ಲಿ ಆತನ ಸ್ವಂತ ಸೈನ್ಯವೇ ಕೆಂಪು ಸಮುದ್ರದಲ್ಲಿ ಮುಳುಗಿ ಹೋಯಿತು. ಹಾಮಾನನು ಮೊರ್ದೆಕೈಯನ್ನು ಗಲ್ಲಿಗೆ ಹಾಕಿಸಿಬೇಕೆಂದು ಮತ್ತು ಯೆಹೂದ್ಯರನ್ನು ಸರ್ವನಾಶನ ಮಾಡುವದಕ್ಕೆ ಸಂಚು ರೂಪಿಸಿದ್ದನು; ಆದರೆ ಆತನೇ ಸ್ವತಃ ಗಲ್ಲಿಗೆ ಹಾಕಲ್ಪಟ್ಟನು, ಮತ್ತು ಆತನ ಕುಟುಂಬವು ಸರ್ವನಾಶನಕ್ಕೊಳಗಾಯಿತು (ಎಸ್ತೇರಳು 7:10; 9:10). ಅರಸನಾದ ಸೌಲನು ದೇವರಿಗೆ ವಿಧೇಯನಾಗಲು ಮತ್ತು ಅಮಾಲೇಕ್ಯರನ್ನು ಕೊಲ್ಲುವದಕ್ಕೆ ನಿರಾಕರಿಸಿದನು, ಆದ್ದರಿಂದ ಆತನು ಒಬ್ಬ ಅಮಾಲೇಕ್ಯನ ಕೈಯಲ್ಲಿ ಹತನಾದನು (2 ಸಮು 1:1-16).[9]

**ವಚನ 7.** ದೇವದೂತನು ಮಾತಾಡುವದನ್ನು ಮುಗಿಸಿದ ಬಳಿಕ, ಯೋಹಾನನು ಇನ್ನೊಂದು ಶಬ್ದವು ಎದುರು ನೋಡಿರದ ಮೂಲದಿಂದ ಬರುವದನ್ನು ಕೇಳಿಸಿಕೊಂಡನು: *ಯಜ್ಞವೇದಿ.* **ಆಮೇಲೆ ಯಜ್ಞವೇದಿಯು ಮಾತಾಡುತ್ತಾ - ದೇವರಾದ ಕರ್ತನೇ, ಸರ್ವಶಕ್ತನೇ, ನಿನ್ನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿವೆ ನಿಜ ಎಂದು ಹೇಳುವದನ್ನು ಕೇಳಿದೆನು.** ಈ ಹಂದರವು ಈ ಮುಂಚೆ ನೋಡಿರುವಂಥ ಯಜ್ಞವೇದಿಯನ್ನೊಳಗೊಂಡಿತ್ತು: ರಕ್ತಸಾಕ್ಷಿಗಳ ರಕ್ತವು ಇದ್ದ ಯಜ್ಞವೇದಿ (6:9), ದೇವಜನರ ಪ್ರಾರ್ಥನೆಗಳೊಂದಿಗೆ ಸಂಬಂಧ ಹೊಂದಿದ್ದ ಯಜ್ಞವೇದಿ (8:3). ಈ ಮುಂಚೆ, ಯಜ್ಞವೇದಿಯ ಕೊಂಬುಗಳಿಂದ ಶಬ್ದವು ಬಂದಿತು (9:13); ಈಗ ಶಬ್ದವು ಸ್ವತಃ ಯಜ್ಞವೇದಿಯಿಂದಲೇ ಬಂದಿತ್ತು (6:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸಾಮಾನ್ಯವಾಗಿ, ಯಜ್ಞವೇದಿಗಳು ಮಾತಾಡುವದಿಲ್ಲ, ಆದರೆ ಒಂದು ದರ್ಶನದಲ್ಲಿ ಏನೂ ಬೇಕಾದರೂ ಸಂಭವಿಸುತ್ತದೆ. ಯಜ್ಞವೇದಿಯು ಏಕಾಏಕಿ ಮಾತಾಡಿದ್ದು ದೇವದೂತನ ಹೇಳಿಕೆಗೆ ಪ್ರಾಮುಖ್ಯತೆಯನ್ನು ಹೆಚ್ಚಿಸುವ ಉದ್ದೇಶವಾಗಿತ್ತು: ದೇವರು ತನ್ನ ರೌದ್ರವನ್ನು ಸುರಿಸಿದ್ದರಲ್ಲಿ ನ್ಯಾಯವಾದದ್ದನ್ನೇ ಮಾಡಿದ್ದನು.

## ನಾಲ್ಕನೆಯ ಪಾತ್ರೆ (16:8, 9)

**8ನಾಲ್ಕನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ಸೂರ್ಯನ ಮೇಲೆ ಹೊಯ್ದನು; ಆಗ ಸೂರ್ಯನಿಗೆ ಕಡುಬಿಸಿಲಿನಿಂದ ಮನುಷ್ಯರನ್ನು ಕಂದಿಸುವ ಶಕ್ತಿಯು ಕೊಡಲ್ಪಟ್ಟಿತು. 9ಮನುಷ್ಯರು ಬಲವಾದ ಕಾವಿನಿಂದ ಕಂದಿಹೋದರೂ ಅವರು ದೇವರನ್ನು ಘನಪಡಿಸುವ ಹಾಗೆ ಮಾನಸಾಂತರಮಾಡಿಕೊಳ್ಳದೆ ಈ ಉಪದ್ರವಗಳ ಮೇಲೆ ಅಧಿಕಾರವುಳ್ಳ ದೇವರ ನಾಮವನ್ನು ದೂಷಿಸಿದರು.**

**ವಚನ 8.** ಈಗ ನಾಲ್ಕನೆಯ ಪಾತ್ರೆಯನ್ನು ಬರಿದು ಮಾಡುವದಕ್ಕೆ ಸಮಯ ಬಂದಿತ್ತು. **ನಾಲ್ಕನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ಸೂರ್ಯನ ಮೇಲೆ ಹೊಯ್ದನು.** ನಾಲ್ಕನೆಯ

ತುತೂರಿಯು ಊದಲ್ಪಟ್ಟಾಗ, ಸೂರ್ಯ ಮತ್ತು ಇತರ ಆಕಾಶಕಾಯಗಳು *ಕತ್ತಲಾಯಿತು* (8:12). ಈಗ ಸೂರ್ಯನ ಕಿರಣಗಳು *ತೀಕ್ಷ್ಣಗೊಂಡವು*: **ಆಗ ಸೂರ್ಯನಿಗೆ ಕಡುಬಿಸಿಲಿನಿಂದ ಮನುಷ್ಯರನ್ನು ಕಂದಿಸುವ ಶಕ್ತಿಯು ಕೊಡಲ್ಪಟ್ಟಿತು. ಕೊಡಲ್ಪಟ್ಟಿತು** ಎಂಬ ಪದಗುಚ್ಛವು *ದೇವರು* ಅಧಿಕಾರದಲ್ಲಿದ್ದಾನೆಂಬುದನ್ನು ಪುನರ್ದೃಢೀಕರಿಸಲ್ಪಟ್ಟಿತು. ಈ ಪಾತ್ರೆಯು ಐಗುಪ್ತ್ಯದಲ್ಲಿ ಸಂಭವಿಸಿದ ಉಪದ್ರವಗಳೊಂದಿಗೆ ಸಮಾಂತರತೆಯಲ್ಲಿರುವದಿಲ್ಲ. ಯೆಶಾಯ 49:8-10 ವಚನಗಳು ಹಳೆಯ ಒಡಂಬಡಿಕೆಯ ಹಿನ್ನಲೆಯನ್ನು ಇದಕ್ಕೆ ಒದಗಿಸಬಹುದಾಗಿದೆ. ಶಾಸ್ತ್ರಗಳಲ್ಲಿ ಅನೇಕ ಸಾರಿ ಬೆಂಕಿಯನ್ನು ದೇವರ ನ್ಯಾಯವನ್ನು ಸೂಚಿಸುವ ಸಂಕೇತವಾಗಿ ಬಳಸಲ್ಪಡುತ್ತದೆ (ನೋಡಿರಿ ಕೀರ್ತನೆ 97:3-7; 104:4; ಯೆಶಾಯ 47:13, 14; 50:11).

**ವಚನ 9.** ನಾಲ್ಕನೆಯ ಪಾತ್ರೆಯ ಪಾತ್ರೆಯ ಫಲಿತವಾಗಿ, **ಮನುಷ್ಯರು ಬಲವಾದ ಕಾವಿನಿಂದ ಕುಂದಿಹೋದರು.** ಗ್ರೀಕ್ ವಾಕ್ಯವು **ಕುಂದಿಹೋದರು** (ἐκαυματίσθησαν, *ekaumatisthēsan*) ಮತ್ತು **ಕಾವಿನಿಂದ** (καῦμα, *kauma*) ಎಂಬುದರೊಂದಿಗೆ ಶಬ್ದಾಡಂಬರವನ್ನು ಬಳಸುತ್ತದೆ. ಈ ಪುನರಾವರ್ತನೆಯು *ತೀವ್ರವಾದ* ಬಿಸಿಯನ್ನು ಸೂಚಿಸುತ್ತದೆ. ಮತ್ತೊಂದಾವರ್ತಿ, ಇದು ಭವಿಷ್ಯದಲ್ಲಿ ಸಂಭವಿಸುವದಕ್ಕೆ ನೇಮಿಸಲ್ಪಟ್ಟಿರುವ ಒಂದು ಅಕ್ಷರಶಃ ಘಟನೆಯಲ್ಲ. ಬದಲಾಗಿ, ಪವಿತ್ರಾತ್ಮನು ಪಾಪದ ಭಯಂಕರ ಪರಿಣಾಮಗಳನ್ನು ನಾಟಕೀಯಗೊಳಿಸುವದನ್ನು ಮುಂದುವರೆಸುತ್ತಾನೆ. ಅವಿಧೇಯತೆಯ ಉರಿಯುವ ಮತ್ತು ಅವಮಾನಪಡಿಸುವದನ್ನು ತಿಳಿಯದವರು ಯಾರಿದ್ದಾರೆ?

ಮೊದಲ ನಾಲ್ಕು ಪಾತ್ರೆಗಳ ಕುರಿತು ಕ್ಲುಪ್ತವಾಗಿ ನೆನಪಿಸಿಕೊಳ್ಳುವದಾದರೆ, ಈ ಭಯಾನಕತೆಗಳಿಗೆ ಒಳಗಾಗಿರುವವರು ತಮ್ಮ ಕೈಗಳನ್ನು ಮೇಲಕ್ಕೆ ಕರ್ತನ ಮುಂದೆ ಶರಣಾಗುವದಕ್ಕೆ ಸಿದ್ಧರಿದ್ದಾರೆಂದು ನಾವು ನಿರೀಕ್ಷಿಸಬಹುದು. ಹೇಗೂ, 9ನೇ ವಚನವು ಅವರ ದುರಂತಕರ ಪ್ರತಿಕ್ರಿಯೆಯ ಬಗ್ಗೆ ಚಿತ್ರಿಸುತ್ತದೆ: **ಅವರು ದೇವರನ್ನು ಘನಪಡಿಸುವ ಹಾಗೆ ಮಾನಸಾಂತರಮಾಡಿಕೊಳ್ಳದೆ ಈ ಉಪದ್ರವಗಳ ಮೇಲೆ ಅಧಿಕಾರವುಳ್ಳ ದೇವರ ನಾಮವನ್ನು ದೂಷಿಸಿದರು.** 15 ಮತ್ತು 16ರಲ್ಲಿ ಬಳಸಲ್ಪಟ್ಟಿರುವ ವಿಮೋಚನಕಾಂಡದ ಚಿತ್ರಣವನ್ನು ಮನಸ್ಸಿನಲ್ಲಿಟ್ಟುಕೊಳ್ಳುವವರಾಗಿ, ಆ ಮೊದಲ ಉಪದ್ರವಗಳಿಗೆ ಫರೋಹನು ತೋರಿಸಿದ ಪ್ರತಿಕ್ರಿಯೆಯು ಜ್ಞಾಪಕಕ್ಕೆ ಬರುತ್ತದೆ. ಪುನಃ ಪುನಃ, ಫರೋಹನು ತನ್ನ "ಹೃದಯವನ್ನು ಮೊಂಡು ಮಾಡಿಕೊಂಡನು" (ವಿಮೋಚನಕಾಂಡ 8:15, 32; ನೋಡಿರಿ 7:13; 8:19). (ಇನ್ನೊಂದು ಹಳೆಯ ಒಡಂಬಡಿಕೆಯ ಸಮಾಂತರತೆಗಾಗಿ, ನೋಡಿರಿ ಆಮೋಸ 4:9.) ಯಾರ ಮೇಲೆ ಪಾತ್ರೆಗಳು ಸುರಿಸಲ್ಪಟ್ಟವೋ ಅವರು ಸ್ವತಃ ತಾವೇ ತಮ್ಮ ಮೇಲೆ ಸಮಸ್ಯೆಗಳನ್ನು ತಂದುಕೊಂಡರು, ಆದರೆ ಹಾಗಿದ್ದರೂ ಅವರು ದೇವರನ್ನು ದೂಷಿಸುತ್ತಾರೆ. ಈ ಪ್ರತಿಕ್ರಿಯೆಯು ಆಶ್ಚರ್ಯಕರವಾಗಿದೆ, ಆದರೆ ಅದು ಇಂದಿಗೂ ಪದೇ ಪದೇ ಪುನರಾವರ್ತಿಸಲ್ಪಡುತ್ತದೆ (ವ. 11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ತುತೂರಿಗಳ ಬಗ್ಗೆ ಅಧ್ಯಯನ ಮಾಡಿದ ವೇಳೆ, ಮೊದಲ ನಾಲ್ಕು ತುತೂರಿಗಳು ಪ್ರಾಕೃತಿಕ ವಿಕೋಪಗಳೊಂದಿಗೆ ಗುರುತಿಸಲ್ಪಟ್ಟವು. ಪುನಃ, ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದೇನೆಂದರೆ ರೋಮನ್ ಸಾಮ್ರಾಜ್ಯದ ಬೀಳುವಿಕೆಗೆ ಕಾರಣವಾದ ಅಂಶಗಳಲ್ಲೊಂದು ಪ್ರಾಕೃತಿಕ ವಿಕೋಪವೇ ಆಗಿತ್ತು. ಮೊದಲ ನಾಲ್ಕು ಪಾತ್ರೆಗಳ ವಿಷಯದಲ್ಲಿ ಅದೇ ರೀತಿಯ ಅನ್ವಯಿಕೆಯನ್ನು ಮಾಡಬಹುದಾಗಿದೆ - ವಿಶೇಷವಾಗಿ ಪಾಪದ ಫಲಿತದಿಂದಾದ ಆ ವಿನಾಶಗಳು. ಇದನ್ನು ಸತ್ಯವೆಂದು ಭಾವಿಸಿಕೊಳ್ಳುವವರಾಗಿ (ಕನಿಷ್ಠ ಒಂದು ಸಾಮಾನ್ಯವಾದ ವಿಧದಲ್ಲಿ), ನಾವು ಒಂದು ನಿರ್ದಿಷ್ಟವಾದ ಆಧುನಿಕ ಕಾಲದ

ವಿನಾಶದ ಕುರಿತು ಹೀಗೆ ಪ್ರಶ್ನಿಸಬಹುದು, "ಇದು ಒಂದು ತುತೂರಿಯೋ (ಒಂದು ಎಚ್ಚರಿಕೆ) ಅಥವಾ ಒಂದು ಪಾತ್ರೆಯೋ (ದಂಡನೆ)?" ಯಾರಿಗೂ ತಿಳಿಯದು, William Hendriksenನು ಈ ಅಭಿಪ್ರಾಯವನ್ನು ತಿಳಿಸುತ್ತಾನೆ: "ಒಬ್ಬ ವ್ಯಕ್ತಿಗಾದರೋ ಒಂದು ನಿರ್ದಿಷ್ಟವಾದ ವಿನಾಶವು ನ್ಯಾಯತೀರ್ಪಿನ ತುತೂರಿಯಂತಿದ್ದರೆ, ಮತ್ತೊಬ್ಬನಿಗೆ ಅದೇ ಘಟನೆಯು ರೌದ್ರದ ಪಾತ್ರೆಯಾಗಿರಬಹುದಾಗಿದೆ. ಹೀಗೆ ಅರಸನಾದ 1ನೇ ಹೆರೋದ ಅಗ್ರಿಪ್ಪನನ್ನು ನರಕಕ್ಕೆ ತಳ್ಳಿದ ವ್ಯಾಧಿಯು ಬೇರೆಯವರಿಗೆ ಒಂದು ಎಚ್ಚರಿಕೆಯಾಗಿತ್ತು."[10] ಇಲ್ಲಿ ಸೇರ್ಪಡೆಗೊಳಿಸಿ ಹೇಳತಕ್ಕದ್ದೇನೆಂದರೆ ಕ್ರೈಸ್ತರಿಗಾದರೋ, ಅದೇ ವಿನಾಶತೆಯು ಅವರಿಗೆ ಕರ್ತನಲ್ಲಿ ಬೆಳೆಯುವದಕ್ಕೆ ಒಂದು ಸದವಕಾಶವಾಗಿರಬಹುದಾಗಿದೆ.

ಪ್ರತಿಯೊಂದು ದುರಂತಕರ ಘಟನೆಯನ್ನು ಒಂದು ಎಚ್ಚರಿಕೆ ಅಥವಾ ಒಂದು ದಂಡನೆ ಎಂಬುದಾಗಿ ವರ್ಗೀಕರಿಸುವದಕ್ಕೆ ಪ್ರಯತ್ನ ಮಾಡುವದಾದರೆ ಮೊದಲ ನಾಲ್ಕು ಪಾತ್ರೆಗಳು ತಿಳಿಸಲಿಚ್ಛಿಸುವ ಅಂಶವನ್ನು ತಪ್ಪಿಸಿಕೊಂಡ ಹಾಗಾಗುತ್ತದೆ. ದೇವರು ಅಂಥ ಘಟನೆಗಳನ್ನು ಒಂದು ಸಾಮಾನ್ಯ ವಿಧದಲ್ಲಿ ಬಳಸಿಕೊಂಡು ಜ್ಞಾನೋಕ್ತಿ 13:15ರಂತಹ ವಾಕ್ಯಭಾಗಗಳನ್ನು ಪುನರ್ದೃಢೀಕರಿಸುವವನಾಗಿದ್ದಾನೆ: "... ದೋಷಕರ ಮಾರ್ಗವು ಕಠಿಣವಾಗಿದೆ" (KJV). ನಿರ್ದಿಷ್ಟವಾಗಿ, ಒಂದು ದಿನವು ಬರುವಾಗ ಆತನು ಪಾಪಗಳನ್ನು ಜ್ಞಾಪಿಸಿಕೊಳ್ಳುವನು ಎಂಬ ಸತ್ಯವನ್ನು ಬಲಪಡಿಸುವದಕ್ಕೆ ಅವುಗಳನ್ನು ಬಳಸುತ್ತಾನೆ.

## ಐದನೆಯ ಪಾತ್ರೆ (16:10, 11)

**[10]ಐದನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ಮೊದಲನೆಯ ಮೃಗದ ಸಿಂಹಾಸನದ ಮೇಲೆ ಹೊಯ್ಯಲು ಅದರ ರಾಜ್ಯವು ಕತ್ತಲಾಯಿತು. ಜನರು ತಮಗಾದ ಕಷ್ಟದ ದೆಸೆಯಿಂದ ತಮ್ಮ ನಾಲಿಗೆಗಳನ್ನು ಕಚ್ಚಿಕೊಂಡು [11]ತಮ್ಮ ಕೃತ್ಯಗಳ ವಿಷಯದಲ್ಲಿ ಮಾನಸಾಂತರಮಾಡಿಕೊಳ್ಳದೆ ತಮ್ಮ ಕಷ್ಟಗಳ ದೆಸೆಯಿಂದಲೂ ಹುಣ್ಣುಗಳ ದೆಸೆಯಿಂದಲೂ ಪರಲೋಕ ದೇವರನ್ನು ದೂಷಿಸಿದರು.**

**ವಚನ 10.** Michael Wilcockನು ಮನವರಿಕೆ ಹೊಂದಿದ್ದೇನೆಂದರೆ "ಪ್ರಕಟನೆ ಪುಸ್ತಕದಲ್ಲಿ ಕೆಲವು ದರ್ಶನಗಳು ಐದನೆಯ ಪಾತ್ರೆಗಿಂತಲೂ ಅಧಿಕವಾದ ಭಯದಿಂದ ಕೂಡಿದ ಭಕ್ತಿಯನ್ನುಂಟು ಮಾಡುವಂಥವು[ಗಳಾಗಿವೆ]."[11] ವಾಕ್ಯಭಾಗವು ಈ ಪಾತ್ರೆಯು ಆರಂಭಗೊಳ್ಳುವದನ್ನು ತಿಳಿಸುತ್ತದೆ, **ಐದನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ಮೊದಲನೆಯ ಮೃಗದ ಸಿಂಹಾಸನದ ಮೇಲೆ ಹೊಯ್ಯಲು ಅದರ ರಾಜ್ಯವು ಕತ್ತಲಾಯಿತು.**

ಐದನೆಯ *ತುತೂರಿ*ಯು ಊದಲ್ಪಡುವಾಗ, ಪೈಶಾಚಿಕ ಮಿಡತೆಗಳು ಅಧೋಲೋಕದಿಂದ ಹಿಂಡುಹಿಂಡಾಗಿ ಹಾರಿ ಬಂದು ಮನುಷ್ಯರನ್ನು ಪೀಡಿಸಿದ್ದವು. ಇವುಗಳನ್ನು ವ್ಯಕ್ತಿಗಳ ಮೇಲೆ ಪಾಪದಿಂದುಂಟಾಗುವ ಪರಿಣಾಮವೆಂಬುದಾಗಿ ನೋಡಲಾಗಿತ್ತು, ಅದರಲ್ಲಿ ಅಪರಾಧ ಮನಸ್ಸಾಕ್ಷಿಯ ವೇದನೆಯು ಸಹ ಸೇರಿತ್ತು (9:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪಾಪದ ದುಷ್ಪರಿಣಾಮವು ನೈತಿಕವಾಗಿ ಕೀಳುಸ್ಥಿತಿಗೆ ಬರುವದೇ ಆಗಿರುತ್ತದೆಂದು ಒತ್ತಿ ಹೇಳಲಾಗಿತ್ತು. ಐದನೆಯ *ಪಾತ್ರೆ*ಯು ಸಹ ಪಾಪದಿಂದಾಗುವ ನೋವುಕರವಾದ ಪರಿಣಾಮಗಳನ್ನು ತೋರ್ಪಡಿಸುತ್ತದೆ, ಆದರೆ ಅಷ್ಟಾಗಿ ಬಾಧಿಸಲ್ಪಟ್ಟವರು ವ್ಯಕ್ತಿಗಳಾಗಿರದೆ ಇಡೀ ಪ್ರಪಂಚ ವ್ಯವಸ್ಥೆಯೇ ಬಾಧಿಸಲ್ಪಟ್ಟಿತ್ತು: ಪಾತ್ರೆಯು **ಮೃಗದ ಸಿಂಹಾಸನದ ಮೇಲೆ** ಮತ್ತು ಆತನ **ರಾಜ್ಯದ ಹೊಯ್ಯ**ಲ್ಪಟ್ಟಿತು. ತುತೂರಿಗಳು ಹಾಗೂ ಪಾತ್ರೆಗಳ ನಡುವೆ ನಿಕಟವಾದ

ಸಂಬಂಧವಿರುವದರ ನಿಮಿತ್ತವಾಗಿ, ರೋಮನ್ ಸಾಮ್ರಾಜ್ಯದಲ್ಲಿ ನೈತಿಕತೆಯು ಕೀಳು ಸ್ಥಿತಿಗೆ ಬಂದದ್ದೇ ದೇಶದಲ್ಲೆಲ್ಲಾ ಆತ್ಮೀಕ ಹಾಗೂ ನೈತಿಕ ಕತ್ತಲು ಕವಿಯುವಂತಾಗುವದರಲ್ಲಿ ಪ್ರಮುಖ ಕಾರಣಾಂಶವಾಗಿತ್ತು, ಮತ್ತು ಅಂತಿಮವಾಗಿ ರೋಮನ್ ಸಾಮ್ರಾಜ್ಯದ ಪತನದಲ್ಲಿ ಫಲಿತಗೊಂಡಿತೆಂಬ ಅಂಶವನ್ನು ಇಲ್ಲಿ ಹೇಳಬಹುದಾಗಿದೆ.

13ನೇ ಅಧ್ಯಾಯದಲ್ಲಿ ಘಟಸರ್ಪನು ಮೃಗಕ್ಕೆ ತನ್ನ ಸಿಂಹಾಸನವನ್ನು ಕೊಟ್ಟಿದ್ದನು (13:2). ಮೃಗಕ್ಕೆ ಒಂದು ರಾಜ್ಯವಿತ್ತೆಂಬುದು ಅದರಲ್ಲಿ ಸೂಚ್ಯಾರ್ಥವಾಗಿ ಕಂಡಿತ್ತು: ಆತನು ಈ ಮುಂಚೆ "ಲೋಕದ ರಾಜ್ಯಾಧಿಕಾರ" ಎಂದು ಕರೆಯಲ್ಪಡುವ ಮಂಡಲದ ಮೇಲೆ ಆಳ್ವಿಕೆ ಮಾಡುತ್ತಿದ್ದನು (11:15). ಯೋಹಾನನ ದಿನದಲ್ಲಿ, ಮೃಗವು ಚಕ್ರವರ್ತಿಯಾದ Domitianನ ನಾಯಕತ್ವದಲ್ಲಿರುವ ರೋಮನ್ ಸಾಮ್ರಾಜ್ಯವೆಂದು ಸಲಹೆಯನ್ನು ನೀಡಲಾಗಿತ್ತು. ಆದದರಿಂದ, 16ನೇ ಅಧ್ಯಾಯದಲ್ಲಿ "ಸಿಂಹಾಸನ" ಹಾಗೂ "ರಾಜ್ಯ" ಎಂಬ ಪದಗಳು ಸಮಂಜಸವೆಂದು ತೋರುತ್ತವೆ. ರೋಮಾಪುರದಲ್ಲಿರುವ ತನ್ನ ಸಿಂಹಾಸನದಿಂದ, Domitianನು ಭೂಲೋಕದಲ್ಲೆಲ್ಲಾ ಹರಡಿಕೊಂಡಿದ್ದ ಒಂದು ರಾಜ್ಯದ ಮೇಲೆ ಆಳ್ವಿಕೆಮಾಡುತ್ತಿದ್ದನು.

ಅಷ್ಟುಮಾತ್ರವಲ್ಲದೆ, ಐದನೆಯ ಪಾತ್ರೆಯ *ಕ್ರಿಯೆಯು* ಅನಂತರದಲ್ಲಾದ ರೋಮನ್ ಇತಿಹಾಸದ ಬೆಳಕಿನಲ್ಲಿ ಸಮರ್ಪಕವೆಂಬಂತೆ ಕಾಣಿಸುತ್ತದೆ. ಐಗುಪ್ತದೇಶದ ಮೇಲೆಲ್ಲಾ ಕತ್ತಲೆಯು ಕವಿದುಕೊಂಡ ವೇಳೆ, ಸಕಲ ಚಟುವಟಿಕೆಯು ಸ್ಥಗಿತಗೊಂಡು ಬಿಟ್ಟಿತ್ತು (ವಿಮೋಚನಕಾಂಡ 10:21–29). ಅದೇ ರೀತಿಯಲ್ಲಿಯೇ, ಮೃಗದ ಸಿಂಹಾಸನ ಹಾಗೂ ರಾಜ್ಯದ ಮೇಲೆ ಕವಿದ ಕತ್ತಲೆಯು ಬಹುಶಃ ರೋಮನ್ ಸಾಮ್ರಾಜ್ಯದಲ್ಲಾದ ಅಡಚಣೆಯನ್ನು ಸಂಕೇತಿಸಬಹುದಾಗಿದೆ.

ಕತ್ತಲೆಯ ವಿಷಯವಾಗಿ ಒಂದು ಸಾಮಾನ್ಯವಾದ ಅನ್ವಯಿಕೆಯನ್ನು ಸಹ ಮಾಡಬಹುದಾಗಿದೆ. ಇದು ಪಾಪದಲ್ಲಿ ಮುಂದುವರೆಯುವವರ ಹೃದಯಗಳಲ್ಲಿಯೂ ಜೀವಿತಗಳಲ್ಲಿಯೂ ವ್ಯಾಪಿಸಿಕೊಂಡಿರುವ ಕತ್ತಲೆಗೆ ಸಂಕೇತವಾಗಿರುತ್ತದೆ (ನೋಡಿರಿ ಯೋಹಾನ 8:12; 12:46; ರೋಮಾ 2:19; 13:12; 1 ಕೊರಿಂಥ 4:5; 2 ಕೊರಿಂಥ 6:14; ಎಫೆಸ 5:8, 11; 6:12; 1 ಥೆಸಲೋನಿಕ. 5:5; 1 ಯೋಹಾನ 1:6; 2:11). ಯೇಸುವು "ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು" ಎಂದು ಹೇಳಿದನು (ಯೋಹಾನ 3:19). ಸೈತಾನನ ರಾಜ್ಯವು "ಅಂಧಕಾರದ ದೊರೆತನ" ಆಗಿರುತ್ತದೆ (ಕೊಲೊಸ್ಸೆ 1:13; ನೋಡಿರಿ ಅಪೊಸ್ತಲರ ಕೃತ್ಯಗಳು 26:18). ಜನರು ಕ್ರೈಸ್ತರಾಗುವ ವೇಳೆ, ದೇವರು ಅವರನ್ನು "ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸುತ್ತಾನೆ" (1 ಪೇತ್ರ 2:9).

ಅಂತಿಮವಾಗಿ, ಐದನೆಯ ಪಾತ್ರೆಯು ನ್ಯಾಯತೀರ್ಪಿನ ಬಳಿಕ, ನಾಶನದಲ್ಲಿರುವವರನ್ನು "ಹೊರಗೆ ಕತ್ತಲೆಯಲ್ಲಿ" ಹಾಕುವರು (ಮತ್ತಾಯ 22:13) - ಬೆಳಕಾಗಿರುವ ದೇವರಿಂದ ದೂರವಾಗಿ (2 ಥೆಸಲೋನಿಕ 1:9; 1 ಯೋಹಾನ 1:5) - "ಕತ್ತಲೇ ಗುಂಡಿಗಳಲ್ಲಿ," "ಕಾರ್ಗತ್ತಲೆ"ಗೆ ಹಾಕಲ್ಪಡುವರು (2 ಪೇತ್ರ 2:4, 17), ಅಲ್ಲಿ "ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವವು" (ಮತ್ತಾಯ 22:13).

ದೇವರ ನ್ಯಾಯತೀರ್ಪಿನ ಸಮರ್ಪಕತೆಯನ್ನು ಗಮನಿಸಿರಿ: ತತ್ಪರಿಣಾಮವಾಗಿ, ಆತನು ಭಕ್ತಿಹೀನರಿಗೆ ಹೀಗೆ ಹೇಳುವವನಾಗಿದ್ದನು, "ನೀವು ಕತ್ತಲೆಯಲ್ಲೇ ಪ್ರೀತಿಸುತ್ತೀರಲ್ಲವೇ; ಆದದರಿಂದ ನಿಮಗೆ ಕತ್ತಲೆ ಸಿಕ್ಕುವದು - ನಿಮ್ಮನ್ನು ವ್ಯಾಪಿಸಿಕೊಳ್ಳುವಂಥ, ನಿಮ್ಮ ಕಣ್ಣು

ಕಾಣದಂತೆ ಮಾಡುವ, ನಿಮಗೆ ಉಸಿರುಗಟ್ಟಿಸುವಂಥ ಕತ್ತಲೆ, ನಿತ್ಯನಿತ್ಯಕ್ಕೂ ಇರುವಂಥ ಕತ್ತಲೆ!"

ಮೃಗದ ರಾಜ್ಯದಲ್ಲಿರುವವರ ಮೇಲೆ ಕತ್ತಲೆಯು ಹೇಗೆ ಪರಿಣಾಮವನ್ನು ಬೀರಿತು? **ಜನರು ತಮಗಾದ ಕಷ್ಟದ ದೆಸೆಯಿಂದ ತಮ್ಮ ನಾಲಿಗೆಗಳನ್ನು ಕಚ್ಚಿಕೊಂಡರು.** ಬಹುಶಃ ನೋವು ಕತ್ತಲೆಯಿಂದಾದ ನೇರವಾದ ಫಲಿತವಾಗಿರಬಹುದು, ಸಂಭಾವ್ಯವಾಗಿ ತಮ್ಮ ನಾಯಕರು ಅಸಮರ್ಥಗೊಳಿಸಲ್ಪಟ್ಟರಲ್ಲಾ ಎಂಬದನ್ನು ತಿಳಿದದ್ದರಿಂದ ಉಂಟಾದ ವೇದನೆಯಾಗಿರಬಹುದು. ಬಹುಶಃ ಕತ್ತಲೆಯು ಮೊದಲ ಪಾತ್ರೆಯಿಂದ ಉಂಟಾಗಿದ್ದ ಹುಣ್ಣುಗಳೂ ಸೇರಿದಂತೆ ನಾಲ್ಕು ಪಾತ್ರೆಗಳ ಕಾರಣದಿಂದಾಗಿದ್ದ ನೋವನ್ನು ಮತ್ತಷ್ಟು ಉಲ್ಬಣಗೊಳಿಸಿರಬಹುದಾಗಿದೆ (ವಚನಗಳು 2, 11).

"ಜನರು ತನ್ನ ನಾಲಿಗೆಗಳನ್ನು ಕಚ್ಚಿಕೊಂಡರು" ಎಂಬ ಪದಗುಚ್ಛವು ಒಗಟಿನಿಂದ ಕೂಡಿದೆ. ಈ ಮಾತು, ಹೊಸ ಒಡಂಬಡಿಕೆಯಲ್ಲಿ ಬೇರೆ ಎಲ್ಲಿಯೂ ಕಾಣಿಸಿಕೊಳ್ಳದಿರುವಂಥದ್ದಾಗಿದ್ದು, ಬಹುಶಃ ಈಗ ಬಳಕೆಯಲ್ಲಿ ಇಲ್ಲದಂಥ ಒಂದು ಸಾಮಾನ್ಯ ಬಳಕೆಯ ಪದವಾಗಿದ್ದಿರಬಹುದಾಗಿದೆ. ಒಬ್ಬನು ಅಕ್ಷರಶಃ ತನ್ನ ನಾಲಿಗೆಯನ್ನು ಕಚ್ಚಿಕೊಳ್ಳಬಹುದಾದ ಕೆಲವೇ ಕೆಲವು ಸಂದರ್ಭಗಳಲ್ಲೊಂದು ಎಂದರೆ ಆತನಿಗೆ ಸ್ನಾಯು ಸೆಳೆತವುಂಟಾಗುವಾಗಲೇ ಆಗಿದೆ. ಒಂದು ಸ್ನಾಯು ಸೆಳೆತ ಸಂಭವಿಸುವ ವೇಳೆ, ಅದರ ತೊಂದರೆಗೊಳಗಾದವನ ಬಾಯಲ್ಲಿ ಏನಾದರೊಂದು ವಸ್ತುವನ್ನು ಆತನ ದವಡೆಗಳ ನಡುವೆ ತೂರಕಬೇಕಾಗದ ತುರ್ತು ಅಗತ್ಯತೆಯಿರುತ್ತದೆ, ಹೀಗೆ ಆತನು ತನ್ನ ನಾಲಿಗೆಗೆ ಹಾನಿಯನ್ನು ಮಾಡಿಕೊಳ್ಳದಂತೆ ಅಥವಾ ಕಚ್ಚಿಕೊಳ್ಳದಂತೆ ಇರುವನು. ಸ್ನಾಯು ಸೆಳೆತಕ್ಕೊಳಗಾಗಿರುವವನು ತನ್ನ ಕೃತ್ಯಗಳ ಮೇಲೆ ಹಿಡಿತವನ್ನು ಹೊಂದಿರುವದಿಲ್ಲವಾದ್ದರಿಂದ, "ಜನರು ತಮ್ಮ ನಾಲಿಗೆಗಳನ್ನು ಕಚ್ಚಿಕೊಂಡರು" ಎಂಬ ಮಾತು ಕಷ್ಟದ ನಿಮಿತ್ತವಾಗಿ ಅವರು ತಮ್ಮ "ಮನಸ್ಸುಗಳ ಸ್ಥಿಮಿತವನ್ನು ಕಳೆದುಕೊಂಡಿದ್ದರು" ಎಂಬುದನ್ನು ಸೂಚಿಸುತ್ತದೆ. ಯಾವದೇ ರೀತಿಯಿದ್ದರೂ, ನೋವು ಸಹಿಸಲಸಾಧ್ಯವಾಗಿತ್ತೆಂಬುದನ್ನು ಈ ಪದಗಳು ತಿಳಿಸುತ್ತವೆ.

**ವಚನ 11.** ಕತ್ತಲೆಯ ಅತ್ಯಂಥ ಮಹತ್ವಪೂರ್ಣವಾದ ಫಲಿತವೆಂದರೆ ಮೃಗದ ರಾಜ್ಯದಲ್ಲಿರುವವರು **ತಮ್ಮ ಕೃತ್ಯಗಳ ವಿಷಯದಲ್ಲಿ ಮಾನಸಾಂತರಮಾಡಿಕೊಳ್ಳದೆ ತಮ್ಮ ಕಷ್ಟಗಳ ದೆಸೆಯಿಂದಲೂ ಹುಣ್ಣುಗಳ ದೆಸೆಯಿಂದಲೂ ಪರಲೋಕದೇವರನ್ನು ದೂಷಿಸಿದರು.** ಪಶ್ಚಾತ್ತಾಪವಿಲ್ಲದ ಜನರು ಕತ್ತಲೆಯನ್ನು ಆಯ್ಕೆ ಮಾಡಿಕೊಂಡಿದ್ದರು, ಆದರೆ ಆಗಲೂ ಅವರು ಅದರ ನಿಮಿತ್ತವಾಗಿ ದೇವರನ್ನು ಶಪಿಸಿದರು. ಅವರ ವಿವಿಧ **ಕಷ್ಟಗಳಲ್ಲಿ**, ಒಂದೇ ಒಂದನ್ನು ಮಾತ್ರವೇ ಪ್ರತ್ಯೇಕವಾಗಿ ಪ್ರಸ್ತಾಪಿಸಲಾಗಿರುತ್ತದೆ: ಮೊದಲನೆಯ ಪಾತ್ರೆಯು ಸುರಿಸಲ್ಪಟ್ಟ ವೇಳೆ ಸಂಭವಿಸಿದ್ದ (ವ. 2) **ಹುಣ್ಣುಗಳು**. ಬಹುಶಃ ಅವರಿಗೆ ಎರಡನೆಯ, ಮೂರನೆಯ ಹಾಗೂ ನಾಲ್ಕನೆಯ ಪಾತ್ರೆಗಳ ದೆಸೆಯಿಂದ ಸಹ ಕಷ್ಟಗಳು ಉಂಟಾಗಿರಬಹುದು. ಮೃಗ ಮತ್ತು ಸುಳ್ಳುಪ್ರವಾದಿ ಇವರಿಬ್ಬರು ತಮಗಿದ್ದ ಸಕಲ ಶಕ್ತಿಯಿಂದ - ತಮಗೆ ಇದೆ ಎಂದು ಹೇಳಿಕೊಂಡ ಅದ್ಭುತಗಳನ್ನು ಮಾಡುವ ಶಕ್ತಿಯೂ ಸೇರಿದಂತೆ - ಹುಣ್ಣುಗಳನ್ನು ಗುಣಪಡಿಸುವದಕ್ಕೆ ಶಕ್ತರಾಗಲಿಲ್ಲ.

**ದೂಷಿಸಿದರು** ಎಂಬುದು 16ನೇ ವಚನದಲ್ಲಿ ಮುಖ್ಯವಾಗಿರುತ್ತದೆ. ನಾಲ್ಕನೆಯ ಪಾತ್ರೆಯು ಸುರಿಸಲ್ಪಟ್ಟ ವೇಳೆ, ಅವಿಶ್ವಾಸಿಗಳು "ದೇವರನ್ನು ಘನಪಡಿಸುವ ಹಾಗೆ ಮಾನಸಾಂತರಮಾಡಿಕೊಳ್ಳದೆ ಈ ಉಪದ್ರವಗಳ ಮೇಲೆ ಅಧಿಕಾರವುಳ್ಳ ದೇವರ ನಾಮವನ್ನು *ದೂಷಿಸಿದರು"* (ವ. 9; ಒತ್ತಿ ಹೇಳಿದ್ದು ನನ್ನದು). ಐದನೆಯ ಪಾತ್ರೆಯು ಸುರಿಸಲ್ಪಟ್ಟ

ವೇಳೆ, ಫಲಿತವು ಅದೇ ರೀತಿಯೇ ಆಗಿತ್ತು: "ತಮ್ಮ ಕೃತ್ಯಗಳ ವಿಷಯದಲ್ಲಿ ಮಾನಸಾಂತರಮಾಡಿಕೊಳ್ಳದೆ ... ಪರಲೋಕ ದೇವರನ್ನು *ದೂಷಿಸಿದರು"* (ವ. 11; ಒತ್ತಿ ಹೇಳಿದ್ದು ನನ್ನದು). ಅಂತಿಮ ಪಾತ್ರೆಗೆ ಸಿಕ್ಕುವ ಪ್ರತಿಕ್ರಿಯೆಯು ಸಹ ಅದೇ ರೀತಿಯಲ್ಲಿಯೇ ಇರಲಿದೆ: "ಮನುಷ್ಯರು ದೇವರನ್ನು *ದೂಷಿಸಿದರು"* (ವ. 21; ಒತ್ತಿ ಹೇಳಿದ್ದು ನನ್ನದು). ಪ್ರಕಟನೆ ಪುಸ್ತಕದೊಳಗೆ ಬೇರೊಂದು ಕಡೆಯಲ್ಲಿ, ಮೃಗವು ಮಾತ್ರವೇ ದೇವರನ್ನು ದೂಷಿಸುವದೆಂದು ಹೇಳಲ್ಪಟ್ಟಿರುತ್ತದೆ (13:1, 5, 6; 17:3). ಈ ಅವಿಶ್ವಾಸಿಗಳು ಸಹ ದೇವರನ್ನು ದೂಷಿಸಿದರು ಎಂಬ ವಾಸ್ತವಾಂಸವು ಅವರು ಎಷ್ಟರ ಮಟ್ಟಿಗೆ ತಮ್ಮ ಒಡೆಯನ ಆತ್ಮದಿಂದ ಮೈಗೂಡಿಸಿಕೊಂಡಿದ್ದಾರೆಂಬುದನ್ನು ತೋರಿಸಿ ಕೊಡುತ್ತದೆ.

ದೇವರನ್ನು ದೂಷಿಸುವದೆಂದರೆ ಏನು ಅರ್ಥವಾಗಿರುತ್ತದೆ? "ದೂಷಣೆ" ಎಂಬುದು βλασφημέω (*blasphēmeō*) ಎಂಬ ಪದದ ಲಿಪ್ಯಂತರಣವಾಗಿರುತ್ತದೆ, ಇದರ ಅರ್ಥವು "ಮಾತಾಡುವ ಮೂಲಕ ಗಾಯಗೊಳಿಸು" ಎಂದಾಗಿದೆ. ಅದರ ನಾಮಪದದ ರೂಪವು βλασφημία (*blasphēmia*) ಎಂದಾಗಿದ್ದು, ಇಂದು ಗ್ರೀಕ್ ಭಾಷೆಯ ಸಂಯುಕ್ತ ಪದವಾಗಿದೆ, ಇದರಲ್ಲಿ βλάπτω (*blaptō*, "ಗಾಯಗೊಳಿಸು") ಎಂಬದರೊಂದಿಗೆ φήμη (*fēmē*, "ವರದಿಮಾಡು") ಎಂಬ ಪದವು ಸಂಯೋಜಿಸಲ್ಪಟ್ಟಿದೆ. ದೇವರನ್ನು ದೂಷಿಸುವದೆಂದರೆ ದೇವರಿಗೆ ವಿರುದ್ಧವಾಗಿ ಮಾತಾಡುವದು, ಆತನ ಧ್ಯೇಯವನ್ನು ಮತ್ತು ಆತನು ಪ್ರತಿನಿಧಿಸುವಂಥದ್ದೆಲ್ಲವನ್ನು ನಾಶಮಾಡುವದಕ್ಕೆ ಪ್ರಯತ್ನಿಸುವದು ಎಂದಾಗಿರುತ್ತದೆ. ಮೃಗವು ತನ್ನ "ಬಾಯಿದೆರೆದು ದೇವರನ್ನು ದೂಷಿಸಿದ್ದಲ್ಲದೆ ಆತನ ನಾಮವನ್ನೂ ಆತನ ನಿವಾಸವನ್ನೂ ಪರಲೋಕ ನಿವಾಸಿಗಳನ್ನೂ ದೂಷಿಸಿತು" (13:6) ಎಂದು ಹೇಳಲ್ಪಟ್ಟಿತು. ಈ ಹೇಳಿಕೆಗಳು ಸಭೆಯ ವಿಷಯವಾಗಿ ಹರಡಿಸಲಾದ ನಿಂದನಾತ್ಮಕ ಮಾತುಗಳೇ ಆಗಿದ್ದವೆಂದು ಇದು ಸೂಚಿಸುತ್ತದೆಂಬುದಾಗಿ ಅಭಿಪ್ರಾಯ ಪಡಲಾಯಿತು.

ಮೃಗದ ಹಿಂಬಾಲಕರ ದೂಷಣೆಯು ಅದೇ ರೀತಿಯಲ್ಲಿಯೇ ಇತ್ತು. 9ನೇ ವಚನವು ಅವರು "ದೇವರ ನಾಮವನ್ನು ದೂಷಿಸಿದರು" ಎಂದು ಹೇಳುತ್ತದೆ; ಅವರು ಬಹುಶಃ ಮೃಗದ ಅನುಕರಣೆಯನ್ನು ಮಾಡಿದರೆಂದು ತೋರುತ್ತದೆ. ಇದರ ಜೊತೆಗೆ, ಅವರ ದೂಷಣೆಗೆ ಒಂದು ವಿಶಿಷ್ಟ ಕೋನವಿತ್ತು: ವಾಸ್ತವಿಕದಲ್ಲಿ ಅವರು ತಮಗಾದ ಸಮಸ್ಯೆಗಳಿಗಾಗಿ ದೇವರನ್ನೇ ದೂಷಿಸಿದರು. ಅವರು ತಮ್ಮ ಆಧುನಿಕ ಪ್ರತಿರೂಪಗಳಂತೆ ಇದ್ದಿದ್ದರೆ, ಅವರು ದೇವರನ್ನು ಟೀಕಿಸುವದು ಈ ವಿಧದಲ್ಲಿ ಇರುತ್ತಿತ್ತು: "ದೇವರು ಅನ್ಯಾಯಗಾರನು. ನಾವು ಇಂಥ ಕಷ್ಟಕ್ಕೆ ಯೋಗ್ಯರಲ್ಲ." ದೇವರು ಪ್ರೀತಿಸ್ವರೂಪಿ ಎಂದು ಕ್ರೈಸ್ತರು ಹೇಳುತ್ತಾರೆ; ಆದರೆ ಪ್ರೀತಿ ಎಂದರೆ ಇದುವೇ ಆಗಿದ್ದಲ್ಲಿ, ಅಂಥ ಪ್ರೀತಿಯಲ್ಲಿ ನನಗೆ ಯಾವ ಪಾಲೂ ಬೇಕಾಗಿಲ್ಲ." ಅವರು ತಮ್ಮ ಕೃತ್ಯಗಳಿಗೆ ತಕ್ಕ "ನ್ಯಾಯವಾದ ದಂಡನೆ"ಯನ್ನು ಪಡೆದುಕೊಳ್ಳುತ್ತಿರುವಾದರೂ ದೇವರನ್ನು ಹೊಣೆಗಾರರನ್ನಾಗಿಸುತ್ತಿದ್ದಾರೆ (ಇಬ್ರಿಯ 2:2).

## ಆರನೆಯ ಪಾತ್ರೆ (16:12-16)

**12ಆರನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ಯೂಫ್ರೇಟೀಸ್ ಎಂಬ ಮಹಾ ನದಿಯ ಮೇಲೆ ಹೊಯ್ಯಲು ಅದರ ನೀರು ಇಂಗಿಹೋಯಿತು; ಇದರಿಂದ ಮೂಡಣ ದಿಕ್ಕಿನಿಂದ ಬರುವ ರಾಜರಿಗೆ ಮಾರ್ಗವು ಸಿದ್ಧವಾಯಿತು. 13ಮತ್ತು ಘಟಸರ್ಪ ಮೃಗ ಸುಳ್ಳುಪ್ರವಾದಿ ಇವರ ಬಾಯಿಗಳಿಂದ ಕಪ್ಪೆಗಳಂತಿದ್ದ ಮೂರು ಅಶುದ್ಧಾತ್ಮಗಳು ಬರುವದನ್ನು ಕಂಡೆನು. 14ಇವು ಮಹತ್ಕಾರ್ಯಗಳನ್ನು ಮಾಡುವ ದೆವ್ವಗಳು; ಭೂಲೋಕದಲ್ಲೆಲ್ಲಿಯೂ ಇರುವ ರಾಜರ ಬಳಿಗೆ ಹೋಗಿ ಸರ್ವಶಕ್ತನಾದ**

**ದೇವರ ಮಹಾದಿನದಲ್ಲಾಗುವ ಯುದ್ಧಕ್ಕೆ ಅವರನ್ನು ಕೂಡಿಸುವವು. [15](ಇಗೋ, ಕಳ್ಳನು ಬರುವಂತೆ ಬರುತ್ತೇನೆ; ತಾನು ನಿರ್ವಾಣನಾಗಿ ತಿರುಗಾಡಿ ಅವಮಾನಕ್ಕೆ ಗುರಿಯಾದೇನೆಂದು ಎಚ್ಚರವಾಗಿದ್ದು ತನ್ನ ವಸ್ತ್ರಗಳನ್ನು ಕಾಪಾಡಿಕೊಳ್ಳುವವನು ಧನ್ಯನು.) [16]ಆ ದೆವ್ವಗಳು ಭೂರಾಜರನ್ನು ಇಬ್ರಿಯ ಭಾಷೆಯಲ್ಲಿ ಹರ್ಮಗೆದೋನ್ ಎಂಬ ಹೆಸರುಳ್ಳ ಸ್ಥಳಕ್ಕೆ ಕೂಡಿಸಿದವು.**

ಗರ್ಜಿಸುವ ಫಿರಂಗಿಗಳು, ಸ್ಫೋಟಿಸುತ್ತಿರುವ ಸ್ಫೋಟಕಗಳು, ಗಾಳಿಯೆಲ್ಲಾ ಸ್ಫೋಟಕದ ಪುಡಿಯ ಹಾಗೂ ಮರಣದ ವಾಸನೆಯಿಂದ ತುಂಬಿರುವದು, ಬೃಹತ್ ಸೇನೆಗಳು, ಆಕ್ರಮಣ ಹಾಗೂ ಪ್ರತ್ಯಾಕ್ರಮಣಗಳು, ಮೊದಲು ಒಂದು ಪಕ್ಷದವರು ಗೆಲ್ಲುತ್ತಿರುತ್ತಾರೆ ಮತ್ತು ನಂತರ ಇನ್ನೊಂದು ಪಕ್ಷದವರು ಗೆಲ್ಲುತ್ತಿರುವತ್ತಾರೆ - ಅನೇಕರು "ಹರ್ಮಗೆದೋನ್ ಯುದ್ಧ"ವನ್ನು ಕಲ್ಪಿಸಿಕೊಳ್ಳುತ್ತಾರೆ. "ಹರ್ಮಗೆದೋನ್ ಯುದ್ಧದ" ಭಾವನೆಯು ಎಷ್ಟೊಂದು ಜನಪ್ರಿಯ ಹಾಗೂ ಎಷ್ಟೊಂದು ಹೃದಯಗಳನ್ನು ಬಲವಾಗಿ ಬಡಿದುಕೊಳ್ಳುವಂತೆ ಮಾಡುತ್ತದೆಂದರೆ, ಹೀಗೆ ಹೇಳುವದು ಹೆಚ್ಚುಕಡಿಮೆ ವಿಷಾದಕರವಾಗಿರುತ್ತದೆ: *ಹರ್ಮಗೆದೋನ್ ಯುದ್ಧ ಎಂಬುದು ಇರುವದೇ ಇಲ್ಲ.* "ಯುದ್ಧ" ಎಂಬ ಪದದ ಕುರಿತು ಸಾಮಾನ್ಯವಾಗಿ ಸ್ವೀಕೃತವಾಗಿರುವ ಯಾವದೇ ಅರ್ಥನಿರೂಪಣೆಗಳಲ್ಲಿ ನೋಡುವದಾದರೆ, ಅಕ್ಷರಶಃ ಹರ್ಮಗೆದೋನ್ ಯುದ್ಧವು ಇರುವದಿಲ್ಲ. ಪ್ರಕಟನೆ 16ರಲ್ಲಿರುವ ದರ್ಶನದಲ್ಲಿ ಸಹ, ಹರ್ಮಗೆದೋನ್ ಯುದ್ಧವೆಂಬುದು ಸಂಭವಿಸಲೇ ಇಲ್ಲ.

ಪ್ರಕಟನೆ ಪುಸ್ತಕವು ಚರ್ಚೆಯಲ್ಲಿರುವ ಯುದ್ಧವನ್ನು ಮೂರು ಸಾರಿ ಪ್ರಸ್ತಾಪಿಸುತ್ತದೆ: 16:14; 19:19; ಮತ್ತು 20:8. ಮುಂದುವರೆದ ಐತಿಹಾಸಿಕ ಅರ್ಥೈಸುವ ದಾರಿಯನ್ನು ಅನುಸರಿಸುವವರು ಇವುಗಳನ್ನು ಇತಿಹಾಸದಲ್ಲಿ ಸಂಭವಿಸಿರುವಂಥ ಮೂರು ಬೇರೆ ಬೇರೆ ಯುದ್ಧಗಳೆಂದು ವ್ಯಾಖ್ಯಾನಿಸುತ್ತಾರೆ. ಆಂಗ್ಲ ಭಾಷೆಯಲ್ಲಿ, ಆ ವಾಕ್ಯಭಾಗಗಳಲ್ಲಿ ವಿವಿಧ ಪದಗಳು ಬಳಸಲ್ಪಟ್ಟಿರುತ್ತದೆ, ಆದರೆ ಗ್ರೀಕ್ ಭಾಷೆಯಲ್ಲಿ, ಈ ಎಲ್ಲಾ ಮೂರು ವಚನಗಳಲ್ಲಿ ಒಂದೇ ಪದಗುಚ್ಛವು ಬಳಸಲ್ಪಟ್ಟಿದೆ - τὸν πόλεμον (*ton polemon*), ಅದರರ್ಥವು "ಯುದ್ಧ" ಅಥವಾ "ಕದನ" ಎಂದಾಗಿರುತ್ತದೆ. ಇಲ್ಲಿ τὸν (*ton*, "the") ಎಂಬ ನಿರ್ದಿಷ್ಟ ಗುಣವಾಚಿಯನ್ನು ಬಳಸಿರುವದು ಒಂದೇ ಯುದ್ಧವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಲಾಗಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಪ್ರಕಟನೆ ಪುಸ್ತಕವು ಒಂದೇ *ಒಂದು* ನಿರ್ಣಾಯಕ "ಯುದ್ಧ"ದ ಕುರಿತು ಮಾತಾಡುತ್ತದೆ. ಈ "ಯುದ್ಧ"ದ ಕುರಿತಾದ ಸಂಪೂರ್ಣ ವಿವರಣೆಯು 19ನೇ ಅಧ್ಯಾಯದಲ್ಲಿ ಕೊಡಲ್ಪಟ್ಟಿರುತ್ತದೆ, ಈ ವಿಷಯದ ಕುರಿತು ಅನಂತರದಲ್ಲಿ ಚರ್ಚಿಸಲಾಗುವದು.

**ವಚನ 12. ಆರನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ಯೂಫ್ರೇಟೀಸ್ ಎಂಬ ಮಹಾ ನದಿಯ ಮೇಲೆ ಹೊಯ್ಯಲು ಅದರ ನೀರು ಇಂಗಿಹೋಯಿತು; ಇದರಿಂದ ಮೂಡಣ ದಿಕ್ಕಿನಿಂದ ಬರುವ ರಾಜರಿಗೆ ಮಾರ್ಗವು ಸಿದ್ಧವಾಯಿತು.** "ಹಳೆಯ ಒಡಂಬಡಿಕೆಯಲ್ಲಿ ದೇವರ ಒಂದು ಪರಾಕ್ರಮದ ಕೃತ್ಯವು ಪದೇ ಪದೇ ನೀರನ್ನು ಇಂಗಿಸುವದರೊಂದಿಗೆ ಸಂಬಂಧಪಡಿಸಲಾಗಿರುತ್ತದೆ, ಉದಾಹರಣೆಗೆ ಕೆಂಪು ಸಮುದ್ರ [ವಿಮೋಚನಕಾಂಡ 14:21], ಯೋರ್ದನ್ ನದಿ [ಯೆಹೋಶುವ 3:16, 17], ಮತ್ತು ಪ್ರವಾದನೆಯಲ್ಲಿ ಹಲವಾರು ಸಾರಿ ನೋಡುತ್ತೇವೆ [ಯೆಶಾಯ 11:15; ಯೆರೆಮೀಯ 51:36; ಜೆಕರ್ಯ 10:11]."[12] ಅನೇಕ ಲೇಖಕರು ಗಮನಕ್ಕೆ ತರುವದೇನೆಂದರೆ ದಾರ್ಯಾವೇಷನು ಬಾಬೆಲ ಪಟ್ಟಣವನ್ನು ವಶಪಡಿಸಿಕೊಂಡ ವೇಳೆ, ಆತನು ಪಟ್ಟಣದ ಮೂಲಕ ಹರಿಯುತ್ತಿದ್ದ ಯೂಫ್ರೇಟಿಸ್ ನದಿಯು "ಇಂಗಿಹೋಗುವಂತೆ" ಅದರ ಒಂದು ಭಾಗವನ್ನು ಬೇರೆ ಕಡೆಗೆ ತಿರುಗಿಸಿ ಬಿಟ್ಟನು. ಹೀಗೆ ಪಟ್ಟಣವು ವೈರಿಯ ದಾಳಿಗೆ ತುತ್ತಾಗುವದಕ್ಕೆ ಸಾಧ್ಯವಾಗಿತ್ತು. 16:12ರ ಚಿತ್ರಣವು ಈ

ಘಟನೆಯಿಂದ ಸ್ಫೂರ್ತಿ ಹೊಂದಿರುತ್ತದೋ ಅಥವಾ ಇಲ್ಲವೋ, ಆಗಲೂ ಇದು ಯೂಫ್ರೇಟಿಸ್ ನದಿಯು ಇಂಗಿಹೋಗುವದರ ಕುರಿತಾದ ಒಂದು ನಾಟಕೀಯ ದೃಷ್ಟಾಂತವಾಗಿರುತ್ತದಷ್ಟೆ.

ಆರನೆಯ *ತುತೂರಿ*ಯು ಊದಲ್ಪಟ್ಟ ಕೂಡಲೆ, ಯೂಫ್ರೇಟಿಸ್ ನದಿಯ ಬಳಿಯಲ್ಲಿ ಕಟ್ಟಿಹಾಕಲ್ಪಟ್ಟಿದ್ದ ನಾಲ್ಕು ಮಂದಿ ದೇವದೂತರು ಬಿಡುಗಡೆಗೊಳಿಸಲ್ಪಟ್ಟರು, ಮತ್ತು ಅವರು ಒಂದು ಬೃಹತ್ ಸೇನೆಯಾಗಿ ಮಾರ್ಪಟ್ಟಿದ್ದರು (9:13-19). ತುತೂರಿಯ ಕುರಿತು ಅಧ್ಯಯನ ಮಾಡಿದ ವೇಳೆ, ಯೂಫ್ರೇಟಿಸ್ ನದಿಯು ರೋಮನ್ನರು ಹಾಗೂ ಪೂರ್ವ ದಿಕ್ಕಿನಲ್ಲಿದ್ದ ಅವರ ವೈರಿಗಳ ನಡುವಿನ ಒಂದು ಸ್ವಾಭಾವಿಕವಾದ ತಡೆಯಾಗಿತ್ತು ಎಂಬುದನ್ನು ಆ ವೇಳೆಯಲ್ಲಿ ಗಮನಕ್ಕೆ ತೆಗೆದುಕೊಂಡೆವು. ಅಲ್ಲದೆ ಯೂಫ್ರೇಟಿಸ್ ನದಿಯು ಯೆಹೂದ್ಯರು ಹಾಗೂ ಅವರ ವೈರಿಗಳ ನಡುವೆ ಇದ್ದ ಸ್ವಾಭಾವಿಕ ತಡೆಗೋಡೆಯಂತಿತ್ತು ಎಂಬುದನ್ನು ಸಹ ತಿಳಿದುಕೊಂಡೆವು. ಆರನೆಯ *ಪಾತ್ರೆ*ಯಲ್ಲಿ ಸಹ ಅದೇ ಸಾಮಾನ್ಯವಾಗಿರುವ ಭಾವನೆಯನ್ನು ಉಳಿಸಿಕೊಳ್ಳಲಾಗಿದೆ: ಯೂಫ್ರೇಟಿಸ್ ನದಿಯು ಇಂಗಿಹೋಯಿತು ಎಂಬುದು ತಡೆಗೋಡೆಯು ತೆಗೆದು ಹಾಕಲ್ಪಟ್ಟಿತು ಎಂದು ಸೂಚಿಸುತ್ತದೆ. ಹೀಗೆ ತಮ್ಮ ಜಯಗೊಳ್ಳುವ ಸೇನೆಗಳೊಂದಿಗೆ ದೇಶವನ್ನು ತುಂಬಿಕೊಳ್ಳುವದಕ್ಕಾಗಿ **ಮೂಡಣ ದಿಕ್ಕಿನಿಂದ ಬರುವ ರಾಜರಿಗೆ** ಮಾರ್ಗವು ತೆರೆಯಲ್ಪಟ್ಟಿತು. "ಮೂಡಣ ದಿಕ್ಕಿನಿಂದ ಬರುವ ರಾಜರು" ಎಂಬ ಪದಗುಚ್ಛವು ಪ್ರಕಟನೆ ಪುಸ್ತಕದೊಳಗೆ ಬೇರೆ ಎಲ್ಲಿಯೂ ಕಂಡು ಬರುವದಿಲ್ಲ, ಮತ್ತು ಪವಿತ್ರಾತ್ಮನು ಈ ಸ್ಥಳದಲ್ಲಿ ಆ ಪದಗುಚ್ಛದ ಅರ್ಥವನ್ನು ವಿವರಿಸುವದಿಲ್ಲ. ಸನ್ನಿವೇಶದಲ್ಲಿ, ಈ ಪದವು ಯೂಫ್ರೇಟಿಸ್ ನದಿಯ ಮೂಡಣ ದಿಕ್ಕಿನಲ್ಲಿರುವ ವೈರಿಗಳನ್ನು ಸೂಚಿಸುವಂತೆ ಕಾಣಿಸುತ್ತದೆ. ಪ್ರಕಟನೆ ಪುಸ್ತಕವು ಬರೆಯಲ್ಪಡುವ ಸಮಯದಲ್ಲಿ, ಯೂಫ್ರೇಟಿಸ್ ನದಿಯು ರೋಮನ್ ಸಾಮ್ರಾಜ್ಯದ ಮೂಡಣ ದಿಕ್ಕಿನ ಗಡಿಯ ಗುರುತಾಗಿತ್ತು; ರೋಮನ್ ಚಕ್ರವರ್ತಿಗಳು ಅದನ್ನು ದಾಟಿ ತಮ್ಮ ಆಳ್ವಿಕೆಯನ್ನು ವಿಸ್ತರಿಸಿಕೊಳ್ಳುವದಕ್ಕೆ ಅಶಕ್ತರಾಗಿದ್ದರು. ಪುನಃ, ರೋಮನ್ ಸಾಮ್ರಾಜ್ಯವನ್ನು ಬೀಳುವಂತೆ ಮಾಡಿದ ಕಾರಣಾಂಶಗಳೊಳಗೆ ಬಾಹ್ಯ ದಾಳಿಯು ಒಂದಾಗಿತ್ತೆಂಬುದು ನಮಗೆ ಇಲ್ಲಿ ಜ್ಞಾಪಿಸಲ್ಪಡುತ್ತದೆ.

ಹೇಗೂ, ವಾಚಕನು ಆರನೆಯ ಪಾತ್ರೆಯ ಅನ್ವಯಿಕೆಯನ್ನು ರೋಮನ್ ಸಾಮ್ರಾಜ್ಯಕ್ಕೆ ಮಾತ್ರವೇ ಸೀಮಿತಗೊಳಿಸಬೇಕಾದ ಅಗತ್ಯವಿಲ್ಲ. ದೇವರು ತನ್ನ ಚಿತ್ತಕ್ಕೆ ಸಮರ್ಪಿತರಾಗಿರುವವರ ಸುತ್ತಲು ಒಂದು ತಡೆಗೋಡೆಯನ್ನು ಯಾವಾಗಲೂ ಇಡುವದಾಗಿ ವಾಗ್ದಾನ ಮಾಡಿದ್ದಾನೆ: ಆತನು "ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸುವದಿಲ್ಲ" (1 ಕೊರಿಂಥ 10:13). ಭಕ್ತಿಹೀನರಿಗಾದರೋ, ಅಂತಹ ಯಾವದೇ ವಾಗ್ದಾನವೂ ಇರುವದಿಲ್ಲ. ಒಬ್ಬ ಮನುಷ್ಯನು ಕರ್ತನನ್ನು ವಿರೋಧಿಸುವಾಗ, ತಡೆಗೋಡೆಯು ಬಿದ್ದು ಹೋಗುವದು, ಮತ್ತು ಫಲಿತಗಳು ದುರಂತಕರವಾಗಿರುತ್ತವೆ. ಆರನೆಯ ತುತೂರಿಯು ಊದಲ್ಪಟ್ಟಾಗ, ಬೇರೆಯವರ ಮೇಲೆ ಉಂಟಾದ ಪಾಪದ ಪರಿಣಾಮಗಳನ್ನು ಒತ್ತಿ ಹೇಳಲಾಗಿರುತ್ತದೆ. ಇಲ್ಲಿ ಒಂದು ವಿಶೇಷ ಅನ್ವಯಿಕೆಯನ್ನು ಮಾಡಬಹುದು: ತಡೆಗೋಡೆಗಳು ಬಿದ್ದು ಹೋಗುವಾಗ, ಪಾಪಿಯು ಬಾಧಿಸಲ್ಪಡುವದು ಮಾತ್ರವಲ್ಲದೆ, ಆತನ ಸುತ್ತಲು ಇರುವ ಪ್ರತಿಯೊಬ್ಬರೂ ಬಾಧಿಸಲ್ಪಡುವರು.

**ವಚನ 13.** ಯೂಫ್ರೇಟಿಸ್ ನದಿಯು "ಇಂಗಿಹೋಯಿತು" ಎಂಬುದು "ಹರ್ಮಗೆದೋನ್ ಯುದ್ಧ" ಎನ್ನುವದರ ವಿವರಣೆಯನ್ನು ಪರಿಚಯಿಸುತ್ತದೆ. ಐದನೆಯ ಪಾತ್ರೆಯ ಬಳಿಕ, ನಾವು ಮಾನವರು ತೋರಿಸಿದ ಪ್ರತಿಕ್ರಿಯೆಯನ್ನು ನೋಡಿದೆವು. ಈಗ, ಆರನೆಯ ಪಾತ್ರೆಯು ಸುರಿಸಲ್ಪಟ್ಟ ಬಳಿಕ, ನಾವು ಸೈತಾನನ ಹಾಗೂ ಆತನ ಮಿತ್ರರ ಪ್ರತಿಕ್ರಿಯೆಯನ್ನು

ಕಾಣುತ್ತೇವೆ. 13, 14, ಮತ್ತು 16 ವಚನಗಳು ಯೋಜಿತವಾಗಿ ಸೈತಾನನ "ಕಾರ್ಯತಂತ್ರ ರೂಪಿಸುವ ಕೋಣೆಯಿಂದ ನಡೆಸಲ್ಪಡುವ ಪ್ರತ್ಯಾಕ್ರಮಣ"[13] ದ ಸಂಕ್ಷಿಪ್ತ ವಿವರಣೆಯನ್ನು ಕೊಡುತ್ತದೆ. ಸೈತಾನನು ದೇವರ ನ್ಯಾಯತೀರ್ಪುಗಳನ್ನು ಎಂದಿಗೂ ಸ್ವೀಕರಿಸಿಕೊಳ್ಳುವದಿಲ್ಲ; ಆತನು "ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬ"ಲ್ಪಡುವ (20:10) ತನಕ ಬಂಡಾಯವೇಳುತ್ತಲೇ ಇರುವನು.

**ಮತ್ತು ಘಟಸರ್ಪ ಮೃಗ ಸುಳ್ಳುಪ್ರವಾದಿ ಇವರ ಬಾಯಿಗಳಿಂದ ಕಪ್ಪೆಗಳಂತಿದ್ದ ಮೂರು ಅಶುದ್ಧಾತ್ಮಗಳು ಬರುವದನ್ನು ಕಂಡೆನು.** ಯೋಹಾನನು ಘಟಸರ್ಪ (12:3, 4), ಮೃಗ (13:1, 2), ಮತ್ತು ಸುಳ್ಳು ಪ್ರವಾದಿ ಇವರೆಲ್ಲರೂ ಒಟ್ಟಾಗಿ ಕೂಡಿಕೊಂಡಿರುವದನ್ನು ಕಂಡನು. ಈ ವಾಕ್ಯಭಾಗದಲ್ಲಿಯೇ **ಸುಳ್ಳುಪ್ರವಾದಿ** ಎಂಬ ಪದವು ಮೊದಲ ಬಾರಿಗೆ ಬಳಸಲ್ಪಟ್ಟಿರುತ್ತದೆ, ಆದರೆ, ಈ ಮುಂಚೆ ತಿಳಿಸಿದ ಹಾಗೆ, ಈತನೇ 13:11ರಲ್ಲಿ ಭೂಮಿಯೊಳಗಿಂದ ಬಂದ ಮೃಗವಾಗಿದ್ದಾನೆ (13:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 13:12-17ರಲ್ಲಿ ಕಂಡು ಬರುವ ಭೂಮಿಯೊಳಗಿಂದ ಬಂದ ಮೃಗದ ಚಟುವಟಿಕೆಗಳನ್ನು 19:20ರಲ್ಲಿ ಸುಳ್ಳು ಪ್ರವಾದಿಯ ಕುರಿತು ಮಾಡಲಾಗಿರುವ ಬಣ್ಣನೆಯೊಂದಿಗೆ ಹೋಲಿಸಿ ನೋಡಿರಿ: "ಇದಲ್ಲದೆ [ಮೃಗದ] ಮುಂದೆ ಮಹತ್ಕಾರ್ಯಗಳನ್ನು ಮಾಡಿ ಮೃಗದ ಗುರುತು ಹಾಕಿಸಿಕೊಂಡವರನ್ನೂ ಅದರ ವಿಗ್ರಹಕ್ಕೆ ನಮಸ್ಕರಿಸಿದವರನ್ನೂ ಮರುಳುಗೊಳಿಸಿದ ಆ ಸುಳ್ಳುಪ್ರವಾದಿ."

ಅಪೊಸ್ತಲನು ನೋಡುತ್ತಿರುವ ವೇಳೆ, ಹೊಲಸಾದ ತ್ರಿಮೂರ್ತಿಗಳ ಬಾಯೊಳಗಿಂದ **ಕಪ್ಪೆಗಳಂತಿದ್ದ** ಮೂರು ಅಶುದ್ಧಾತ್ಮಗಳು ಹೊರ ಬಂದವು. **ಬರುವದನ್ನು** ಎಂಬ ಪದವು ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿರುತ್ತದೆ. ಕೆಲವು ಲೇಖಕರು ಈ ಕಪ್ಪೆಗಳನ್ನು ವಾಂತಿ ಮಾಡಲಾಯಿತು ಎಂಬ ಅಭಿಪ್ರಾಯವನ್ನು ತಿಳಿಸುತ್ತಾರೆ. ಘಟಸರ್ಪ ಮತ್ತು ಮೃಗ ಎರಡಕ್ಕೂ ಏಳು ತಲೆಗಳಿದ್ದವು (12:3; 13:1), ಆದರೆ ಇವರೆಡಕ್ಕೂ ಒಂದು **ಬಾಯಿ** ಇದೆ ಎಂಬಂತೆ ಹೇಳಲಾಗಿರುತ್ತದೆ. ಪುನಃ ನಮಗೆ ಇಲ್ಲಿ ಇದು ದರ್ಶನದ ಒಂದು *ಸಾಂಕೇತಿಕ* ಅಂಶವಾಗಿರುತ್ತದೆಯೇ, ಹೊರತು ಅಕ್ಷರಶಃ ಸತ್ಯವಲ್ಲ ಎಂಬುದಾಗಿ ಜ್ಞಾಪಿಸಲ್ಪಡುತ್ತೇವೆ.

14ನೇ ವಚನದಲ್ಲಿ **ಅಶುದ್ಧಾತ್ಮಗಳು** "ದೆವ್ವಗಳು" ಎಂದು ಕರೆಯಲ್ಪಟ್ಟಿವೆ. ಈ ಸ್ನೇಹಮಯಿ ಜೀವಿಗಳಾಗಿರಲಿಲ್ಲ ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. "ಅಶುದ್ಧಾತ್ಮಗಳು" ಎಂಬ ಪದವು ಸುವಾರ್ತೆ ಕಥನಗಳಲ್ಲಿ ಯೇಸುವು ಓಡಿಸಿದ ದೆವ್ವಗಳನ್ನು ಬಣ್ಣಿಸುವದಕ್ಕೆ ಬಳಸಲ್ಪಟ್ಟಿರುತ್ತದೆ (ಮಾರ್ಕ 9:25; ಲೂಕ 9:42). ಅಶುದ್ಧರಾದ ತ್ರಿಮೂರ್ತಿಗಳ "ಬಾಯಿಗಳಿಂದ" ಹೊರಡುವ ಈ ಅಶುದ್ಧ "ಆತ್ಮಗಳ" ವಿಷಯವಾಗಿ ಶಬ್ದಾಡಂಬರವು ಬಳಸಲ್ಪಟ್ಟಿದೆ: "ಆತ್ಮ" ಎಂಬುದರ ಅನುವಾದಿತ ಪದವಾಗಿರುವ πνεῦμα (*pneuma*) ಎಂಬ ಪದದ ಅರ್ಥವು "ಉಸಿರು" ಎಂದು ಸಹ ಆಗಿರಬಲ್ಲದು (ನೋಡಿರಿ 2 ಥೆಸಲೋನಿಕ 2:8). ಹೀಗಿರುವದರಿಂದ ಅವರು ಮೂರು ಕಪ್ಪೆಗಳು ಈ ಲೋಕದಲ್ಲಿ ಸೈತಾನನು ಕಳುಹಿಸಿ ಕೊಡುವ ಭಕ್ತಿಹೀನ ಹಾಗೂ ಸುಳ್ಳು *ಮಾತುಗಳಿಗೆ* ಸಂಕೇತವಾಗಿರುತ್ತವೆಂದು ಅವರು ನಂಬುತ್ತಾರೆ. ಸೈತಾನನ್ನು ತನ್ನ ಹಿಂಬಾಲಕರನ್ನು ಕೆಲಸಕ್ಕೆ ನೇಮಿಸುವ ಮೂಲಭೂತ ದಾರಿಯೆಂದರೆ ಅದು ಸುಳ್ಳಾಡುವ ಮಾತುಗಳಿಂದಲೇ ಎಂಬುದು ಸತ್ಯವಾದದ್ದು (ನೋಡಿರಿ ಯೋಹಾನ 8:44).

ಈ ಆತ್ಮಗಳು ಏಕೆ "ಕಪ್ಪೆಗಳಂತೆ" ಎಂಬುದಾಗಿ ಬಣ್ಣಿಸಲ್ಪಟ್ಟಿರುತ್ತವೆ? ಯೋಹಾನನು ಅಶುದ್ಧಾತ್ಮಗಳು ಕಪ್ಪೆಗಳಾಗಿದ್ದವೆಂದು ಹೇಳಲಿಲ್ಲ, ಆದರೆ ಅವುಗಳು ಕಪ್ಪೆ*ಗಳಂತೆ* ಇದ್ದವು ಎಂದು ಹೇಳುತ್ತಾನೆ. ಅವುಗಳು ದರ್ಶನದಲ್ಲಿ ಕಪ್ಪೆಗಳಂತಿದ್ದವೆಂದು ನಾವು ಊಹಿಸಿಕೊಳ್ಳಬಹುದು, ಆದರೆ ಅದು ಹಾಗಿರುವದಕ್ಕೆ ಸಾಧ್ಯವೇ ಇಲ್ಲದಿರಬಹುದು.

ಯೋಹಾನನು ತನಗೆ ಕಪ್ಪೆಯನ್ನು ನೆನಪಿಗೆ ತರುವಂತಹ ಆತ್ಮಗಳ ಕುರಿತಾದ ಬೇರೊಂದು ಗುಣಲಕ್ಷಣವನ್ನು ಹೊಂದಿರಬಹುದಾಗಿದೆ. ಕೆಲವು ವ್ಯಾಖ್ಯಾನಕಾರರು "ಅಶುದ್ಧ" ಎಂಬುದನ್ನು ಒತ್ತಿ ಹೇಳುತ್ತಾರೆ; ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ, ಕಪ್ಪೆಗಳು "ಅಶುದ್ಧ" ಜೀವಿಗಳಾಗಿದ್ದವು ಮತ್ತು ಇಸ್ರಾಯೇಲ್ಯರು ಅವುಗಳನ್ನು ಸೇವಿಸುವದಕ್ಕೆ ಸಾಧ್ಯವಿರಲಿಲ್ಲ (ನೋಡಿರಿ ಯಾಜಕಕಾಂಡ 11:1-12). (ಯಾಜಕಕಾಂಡ 11ನೇ ಅಧ್ಯಾಯದಲ್ಲಿ ಕಪ್ಪೆಗಳನ್ನು ಹೆಸರಿಟ್ಟು ಪ್ರಸ್ತಾಪಿಸಲಾಗಿರುವದಿಲ್ಲ; ಆದರೆ ಅವುಗಳು ಭೂಮಿಯ ಮೇಲಿರುವ ಜೀವಿಗಳೆಂದು ಪರಿಗಣಿಸಲ್ಪಟ್ಟಿದ್ದರೆ, ಅದು ಅಶುದ್ಧವಾಗಿರುತ್ತಿತ್ತು ಯಾಕೆಂದರೆ ಅದರ ಗೊರಸುಗಳು ಸೀಳಲ್ಪಟ್ಟಿರಲಿಲ್ಲ ಮತ್ತು ಅದು ಮೆಲಕು ಹಾಕುತ್ತಿರಲಿಲ್ಲ. ಅದು ಜಲಜೀವಿಯಾಗಿ ಪರಿಗಣಿಸಲ್ಪಟ್ಟಿದ್ದಲ್ಲಿ, ಅದು ಅಶುದ್ಧವಾಗಿರುತ್ತಿತ್ತು ಯಾಕೆಂದರೆ ಅದಕ್ಕೆ ರೆಕ್ಕೆಯಿದ್ದ ಮೈಯೆಲ್ಲಾ ಪರೆಪರೆಯಾಗಿರಲಿಲ್ಲ.) ಇನ್ನು ಕೇಲವರು ಪ್ರಕಟನೆ 16ನೇ ಅಧ್ಯಾಯದಲ್ಲಿ ವ್ಯಾಪಕವಾಗಿ ಬಳಸಲ್ಪಟ್ಟಿರುವ ವಿಮೋಚನಕಾಂಡದ ಭಾಷೆಯನ್ನು ಎತ್ತಿ ತೋರಿಸುತ್ತಾರೆ (ವಿಮೋಚನಕಾಂಡ 8:1-15). ಈ ಹಿನ್ನಲೆಯ ಸಾಧ್ಯತೆಯಿರುತ್ತದೆ, ಆದರೆ ಐಗುಪ್ತ್ಯದೇಶದಲ್ಲಿದ್ದ ಕಪ್ಪೆಗಳು ದೊಡ್ಡ ಉಪಟಳವಾಗಿದ್ದರೆ, ಪ್ರಕಟನೆ ಪುಸ್ತಕದಲ್ಲಿನ ಕಪ್ಪೆಗಳು ಒಂದು ಮರಣಾಂತಿಕ ಉದ್ದೇಶವನ್ನು ಹೊಂದಿದ್ದವು. ಬೇರೆ ಕೆಲವು ವ್ಯಾಖ್ಯಾನಕಾರರು ಕಪ್ಪೆಗಳ ಹೇಸಿಗೆ ಹುಟ್ಟಿಸುವ ಸ್ವಭಾವನ್ನು ಒತ್ತಿ ಹೇಳುತ್ತಾರೆ; ಈ ದಿನದಲ್ಲಿ ಸಹ, ಕಪ್ಪೆಗಳು ಜಾಗತಿಕವಾಗಿ ಅಹಸ್ಯಕರ ಜೀವಿಗಳೆಂದು ಪರಿಗಣಿಸಲ್ಪಟ್ಟಿರುತ್ತವೆ. ಕೆಲವು ಲೇಖಕರು ಅಭಿಪ್ರಾಯ ಪಡುವದೇನೆಂದರೆ ಕಪ್ಪೆಗಳು ಸಮುದ್ರದಿಂದ ಬಂದ ಮೃಗ *ಮತ್ತು* ಭೂಮಿಯಿಂದ ಬಂದ ಮೃಗಗಳನ್ನು ಪ್ರತಿನಿಧಿಸುವದಕ್ಕೆ ವಿಶೇಷವಾದ ರೀತಿಯಲ್ಲಿ ಸೂಕ್ತವಾಗಿರುತ್ತವೆ ಯಾಕೆಂದರೆ ಅವುಗಳು ಉಭಯಚರಗಳಾಗಿವೆ - ಅಂದರೆ, ಅವುಗಳು ನೀರಿನಲ್ಲಿ ಹಾಗೂ ಭೂಮಿಯಲ್ಲಿ ಸಹ ಜೀವಿಸಬಲ್ಲವು.

ಈ ಚಿತ್ರಣವು ಏಕೆ ಬಳಸಲ್ಪಟ್ಟಿರಬಹುದೆಂಬ ಒಂದು ಸಾಧ್ಯತೆಯು ಇಲ್ಲಿದೆ: ಅವುಗಳ ಮಿಲಿಟರಿ ಕೌಶಲತೆಯನ್ನು ಪರಿಗಣಿಸುವದಾದರೆ, ಅನೇಕ ಜನರು ತಣ್ಣಗೆ, ಅಂಟಂಟಾಗಿರುವ, ಹೇವರಿಕೆ ಹುಟ್ಟಿಸುವ ಜೀವಿಗಳನ್ನು ಇಷ್ಟಪಡುವದಿಲ್ಲ; ಆದರೆ ಅವರು ಅವುಗಳಿಗೆ *ಹೆದರುವವರು* ಆಗಿರುವದಿಲ್ಲ. ಭಕ್ತಿಹೀನ ತ್ರಿಮೂರ್ತಿಗಳ ಕೆಲಸಕ್ಕೆ ನೇಮಿಸಕೊಂಡವರು ಹಾಗೂ ನಾಯಕರಾಗಿ ಉಂಟು ಮಾಡುವದಕ್ಕೆ ಸಾಧ್ಯವಿದ್ದದ್ದೆಲ್ಲಾ ಕೇವಲ ಒಂದಿಷ್ಟು ಕಪ್ಪೆಗಳನ್ನಷ್ಟೇ. ಇದು ಘಟಸರ್ಪ ಹಾಗೂ ಅದರ ತಂಡದಿಂದ ಯೋಜನೆ ಹಾಕಲ್ಪಟ್ಟಿದ್ದ ಯುದ್ಧವು ಒಂದು ಸಂಪೂರ್ಣ ಸೋಲು ಆಗಲಿದೆ ಎಂಬುದಕ್ಕೆ ಮೊದಲ ಸೂಚನೆಯಾಗಿತ್ತು.

**ವಚನ 14.** ಅವರ ಮಿಲಿಟರಿ ದಂಡಯಾತ್ರೆಯು ಒಂದು ಅಧ್ವಾನ ಆಗಲಿದೆ ಎಂಬುದಕ್ಕೆ ಎರಡನೆಯ ಸೂಚನೆಯು ಏನಾಗಿತ್ತೆಂದರೆ ಈ ಭಟ್ಟಂಗಿ ತ್ರಿಮೂರ್ತಿಗಳು ಒಂದು ದಡ್ಡತನದ ಯುದ್ಧ ಯೋಜನೆಯನ್ನು ಮಾಡಿದ್ದರು ಎಂಬುದೆ. Jim McGuigganನ ಅಭಿಪ್ರಾಯದಲ್ಲಿ, ಆತ್ಮಗಳು ಅಶುದ್ಧವಾಗಿದ್ದದ್ದು ಮಾತ್ರವೇ ಅಲ್ಲ, ಆದರೆ "ಅವುಗಳಿಗೆ ಪ್ರಜ್ಞೆಯ ಕೊರತೆ ಸಹ ಇತ್ತು."[14] ಅವುಗಳು ಮಾಡಿದ ಎಲ್ಲವೂ ದೇವರ ಯೋಜನೆಯೊಳಗೆ ಸರಿಹೊಂದುವಂತೆಯೇ ಇತ್ತು. ಮುಂದಿನ ಅಧ್ಯಾಯವು ಬಯಲುಗೊಳಿಸಲಿರುವದೇನೆಂದರೆ, ಭೂರಾಜರ ವಿಷಯವಾಗಿ ನೋಡುವದಾರೆ, ದೇವರು "ತನ್ನ ವಚನವು ನೆರವೇರುವ ತನಕ ಅವರ ಹೃದಯಗಳನ್ನು ಪ್ರೇರಿಸಿದನು" (17:17; ಒತ್ತಿ ಹೇಳಿದ್ದು ನನ್ನದು) ಪೈಶಾಚಿಕ ಯುದ್ಧ ಯೋಜನೆಯು ಆರಂಭದಿಂದಲೇ ನಾಶವಾಗಿತ್ತು. ಕಪ್ಪೆಗಳು ಗದ್ದಲ ಮಾಡುವದರಲ್ಲಿ ನಿಸ್ಸೀಮ, ಆದರೆ ಬೇರೆ ಯಾವದಕ್ಕೂ ಪ್ರಯೋಜನವಿಲ್ಲ. ಈ ಸಂದರ್ಭದಲ್ಲಿ, ಅವುಗಳು ವಿಪರೀತವಾದ ಗದ್ದಲವನ್ನೆಬ್ಬಿಸಿದವು ಆದರೆ ಒಂದಿಷ್ಟೂ ಫಲಿತವು ಕಾಣಲಿಲ್ಲ.

ಕಪ್ಪೆಗಳ ಯೋಜನೆಯು ಕುರಿತು ತಿಳಿಸುವ 14ನೆ ವಚನವು, ಅವುಗಳನ್ನು ಬಣ್ಣಿಸುವ ಮೂಲಕ ಆರಂಭಗೊಳ್ಳುತ್ತದೆ: **ಇವು ಮಹತ್ಕಾರ್ಯಗಳನ್ನು ಮಾಡುವ ದೆವ್ವಗಳು. ದೆವ್ವಗಳು** *ಎಂಬವು* **ಆತ್ಮಗಳು**, ಅತ್ಯಂಥ ಸೂಕ್ತವಾದ ಅನುವಾದವೆಂದರೆ "ದೆವ್ವದಂಥ ಆತ್ಮಗಳು" ಎಂಬುದೆ ಎಂದು ಅಭಿಪ್ರಾಯ ಪಡಲಾಗಿರುತ್ತದೆ. Phillips ತರ್ಜುಮೆಯಲ್ಲಿ "ಪೈಶಾವಿಕ ಆತ್ಮಗಳು"[15] ಎಂದಿದೆ. **ಮಹತ್ಕಾರ್ಯ**ಗಳು ಬಹುಶಃ ಸುಳ್ಳು ಪ್ರವಾದಿಯು (13:13-15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ) ನಡಿಸಿದ "ಮೋಸಗೊಳಿಸುವ ಸಕಲವಿಧವಾದ ಮಹತ್ಕಾರ್ಯ"ಗಳೇ ಆಗಿರಬಹುದಾಗಿದೆ (2 ಥೆಸಲೋನಿಕ 2:9; NIV).

ಕಪ್ಪೆಗಳಂಥ-ಆತ್ಮಗಳು **ಭೂಲೋಕದಲ್ಲೆಲ್ಲಿಯೂ ಇರುವ ರಾಜರ ಬಳಿಗೆ ಹೋ**ದವು. 17ನೇ ಅಧ್ಯಾಯವು ಲೋಕದ ರಾಜರ ಮೇಲೆ ರೋಮನ್ ಸಾಮ್ರಾಜ್ಯವು ಹೊಂದಿದ್ದ ಪ್ರಭಾವದ ಕುರಿತು ಒತ್ತಿ ಹೇಳುವದು (17:2, 12, 13). ನಾವು ಕಪ್ಪೆಗಳು ಜಿಗಿಯುತ್ತಾ "ತಮ್ಮ ಶಬ್ದವನ್ನು ಆಲಿ[ಸಿದ]ಸುವ ರಾಜರ ಕಿವಿಗಳಲ್ಲಿ ಅವುಗಳ ಧಣಿಗಳ ಶ್ರೇಷ್ಠತೆಯನ್ನು ಕುರಿತು"[16] ಒಂದೇ ಸಮನೆ ಒಟಗುಟ್ಟುತ್ತಾ ತಮ್ಮ ಕೈಚಳಕದ ಹಾಗೂ ಕಣ್ಕಟ್ಟು ತಂತ್ರಗಳನ್ನು ನಡಿಸುತ್ತಿರುವದನ್ನು ಹೆಚ್ಚುಕಡಿಮೆ ಊಹಿಸಿಕೊಳ್ಳಬಲ್ಲೆವು.

ಅವುಗಳ ಯೋಜನೆಯು **ರಾಜರ** ಮತ್ತು ಅವರ ಸೈನ್ಯಗಳ **ಬಳಿಗೆ ಹೋಗಿ ಸರ್ವಶಕ್ತನಾದ ದೇವರ ಮಹಾದಿನದಲ್ಲಾಗುವ ಯುದ್ಧಕ್ಕೆ ಅವರನ್ನು ಕೂಡಿಸುವ**ದು ಆಗಿತ್ತು. ಕರ್ತನ ವೈರಿಗಳು ಆತನನ್ನು ಎದುರಿಸಿ ಹೋರಾಡುವದಕ್ಕೆ ತಮ್ಮ ಸೇನೆಗಳನ್ನು ಗುಂಪಾಗಿ ಕೂಡಿಸಿಕೊಳ್ಳುತ್ತಿರುವ ವೇಳೆ, ಅವರು ಮಾಡುತ್ತಿರುವದೆಲ್ಲಾ ದೇವರ ಯೋಜನೆಯ ಪ್ರಕಾರವೇ ಇದ್ದು ಅದಕ್ಕೆ ಸರಿಹೊಂದುವಂತಿದೆ ಎಂಬುದನ್ನು ಗ್ರಹಿಸದೆ ಹೋದರು. ಅವರು ತಮ್ಮ ಸೈನ್ಯಗಳನ್ನು "ಸರ್ವಶಕ್ತನಾದ ದೇವರ ಮಹಾದಿನದಲ್ಲಾಗುವ ಯುದ್ಧಕ್ಕೆ ಅವರನ್ನು ಕೂಡಿಸುವವು" ಎಂಬುದನ್ನು ವಾಚಕನಿಗೆ ಹೇಳಲ್ಪಡುವಾಗ ಆತನಿಗೆ ಈ ವಾಸ್ತವಾಂಶವು ಸ್ಪಷ್ಟವಾಗುವದು. ಇದು *ಅವರ* ಯುದ್ಧವಾಗಿದೆ ಎಂದು ಭಾವಿಸಿಕೊಂಡಿದ್ದರು, ಆದರೆ ಅದು ನಿಜವಾಗಿಯೂ *ದೇವರ* ಯುದ್ಧವೇ ಆಗಿತ್ತು; ಆತನೇ ಅದರ ಸಮಯವನ್ನು ನಿರ್ಧರಿಸುವವನಾಗಿದ್ದನು.

**ದೇವರ ಮಹಾ ದಿನ** ಎಂಬುದು ಆತನು ನ್ಯಾಯತೀರ್ಪಿನಿಂದ ಇಳಿದು ಬರುವ ದಿನವನ್ನು ಸೂಚಿಸುತ್ತದೆ (2 ಪೇತ್ರ 3:12). ಈ ಸನ್ನಿವೇಶದಲ್ಲಿ, "ದೇವರ ಮಹಾದಿನ" ಎಂಬುದು ನ್ಯಾಯತೀರ್ಪಿನ ಅಂತಿಮ ದಿನವನ್ನು ಸೂಚಿಸದೆ ಇರಬಹುದು, ಮತ್ತು ಕರ್ತನ "ಬರೋಣ" (ವ. 15) ಎಂಬುದು ಆತನ ಎರಡನೆಯ ಬರೋಣವನ್ನು ಸೂಚಿಸದೆ ಇರಬಹುದು, ಆದರೆ ರೋಮನ್ ಸಾಮ್ರಾಜ್ಯದ ಮೇಲೆ ಬರಲಿರುವ ನ್ಯಾಯತೀರ್ಪನ್ನು ಸೂಚಿಸಬಹುದಾಗಿದೆ. ಹೇಗೂ, ತಾತ್ಕಾಲಿಕ "ಬರೋಣಗಳು" ಒಬ್ಬ ವ್ಯಕ್ತಿಯ ಮನಸ್ಸನ್ನು ಯುಗಾಂತ್ಯದ ವೇಳೆ ಕರ್ತನು ಬರುವಂಥ ಸಮಯಕ್ಕಾಗಿ ಸಿದ್ಧಗೊಳಿಸುವವು. 14ನೇ ವಚನದಲ್ಲಿ "ಮಹಾದಿನ"ವನ್ನು ಬಣ್ಣಿಸುವದಕ್ಕೆ ಬಳಸಲಾಗಿರುವ ಪರಿಭಾಷೆಯ ವಿಷಯದಲ್ಲಿ, Morrisನು ಹೀಗೆ ಬರೆಯುತ್ತಾನೆ,

> ಇದು ಕಡೇ ದಿನದ ಕುರಿತಾದ ಅತ್ಯಂಥ ಪ್ರತಿಧ್ವನಿಸುವ ಬಣ್ಣನೆಯಾಗಿದೆ. *ಮಹಾ* ಎಂಬುದು ಅದನ್ನು ಕಡಿಮೆ ದಿನಗಳಿಂದ ಭಿನ್ನಗೊಳಿಸುತ್ತದೆ. ಮತ್ತು ಅದು *ದೇವರ* ದಿನವೇ, ಹೊರತು ಮನುಷ್ಯನ ದಿನವಲ್ಲ ... ಅದು ದೈವಿಕ ಉದ್ದೇಶವು ಸಮಾಪ್ತಿಗೊಳ್ಳುವದರೊಂದಿಗೆ ಸಂಬಂಧಿಸಿದ್ದಾಗಿದೆ. ಮತ್ತು *ಸರ್ವಶಕ್ತ* ಎಂಬುದು ಇಡೀ ಭೂಲೋಕದ ಶಕ್ತಿಯ ಎದುರಿನಲ್ಲಿ ದೇವರ ಶಕ್ತಿಯು ಸರ್ವೋಚ್ಛಾಗಿದೆ ಎಂಬುದನ್ನು ನಮಗೆ ಜ್ಞಾಪಿಸುತ್ತದೆ.[17]

**ವಚನ 15.** ಕಪ್ಪೆಗಳು ಸೈನ್ಯಕ್ಕೆ ಹೊಸಬರನ್ನು ಸೇರ್ಪಡೆಗೊಳಿಸುವದನ್ನು ಮಾಡುತ್ತಿರುವದರ ಮಧ್ಯದಲ್ಲಿ, ಕರ್ತನು ಒಂದು ಹೇಳಿಕೆಯೊಂದಿಗೆ ಅಡಚಣೆಯನ್ನುಂಟು

ಮಾಡುತ್ತಾನೆ, ಅದು **ಇಗೋ ಕಳ್ಳನು ಬರುವಂತೆ ಬರುತ್ತೇನೆ** ಎಂಬ ಮಾತುಗಳಿಂದ ಆರಂಭಗೊಳ್ಳುತ್ತದೆ. **ಕಳ್ಳನು ಬರುವಂತೆ** ಎಂಬ ಮಾತುಗಳು ಕರ್ತನ ಬರೋಣವು ಅನಿರೀಕ್ಷಿತವಾಗಿರುತ್ತದೆಂಬುದನ್ನು ಸೂಚಿಸುತ್ತವೆ.

ಶಾಸ್ತ್ರಗಳ ಮೌಖಿಕ ಪ್ರೇರಣೆಯಲ್ಲಿ ನಂಬಿಕೆಯಿಡದ ದೈವಶಾಸ್ತ್ರೀಕ ಉದಾರವಾದಿ ವ್ಯಾಖ್ಯಾನಕಾರರು ಈ ವಚನವು "ತಪ್ಪಾದ ಸ್ಥಳದಲ್ಲಿರುತ್ತದೆ" ಯಾಕೆಂದರೆ ಇದು 13, 14 ಹಾಗೂ 16 ವಚನಗಳಲ್ಲಿ ಸುಗಮವಾಗಿ ಸಾಗುತ್ತಿದ್ದ ವಿಚಾರಕ್ಕೆ ಅಡಚಣೆಯುಂಟು ಮಾಡುತ್ತದೆ ಎಂಬುದಾಗಿ ದೂರು ಹೇಳುತ್ತಾರೆ. ಅವರು ವಚನವನ್ನು ವಾಕ್ಯಭಾಗದೊಳಗೆ ಬೇರೊಂದು ಕಡೆಗೆ ಸ್ಥಳಾಂತರಿಸುವದಕ್ಕೆ ಅಥವಾ ಅದನ್ನು ತೆಗೆದು ಹಾಕುವದಕ್ಕೆ ಸಹ ಸಂಕೋಚಪಡುವದಿಲ್ಲ. ಹೇಗೂ, ಪವಿತ್ರಾತ್ಮನು ತಾನು ಬಯಸಿದ ಕಡೆಯಲ್ಲಿಯೇ ಆ ವಚನವನ್ನು ಇಟ್ಟಿರುತ್ತಾನೆ, ಮತ್ತು ಅದು ಅಲ್ಲಿ ಚೆನ್ನಾಗಿಯೇ ಸರಿ ಹೊಂದುವದಾಗಿದೆ. ಇದನ್ನು ಯೋಚಿಸಿರಿ: ಎಲ್ಲಾ ದುಷ್ಟಶಕ್ತಿಗಳು ಒಂದು ಸ್ಥಳದಲ್ಲಿ ಗುಂಪುಗುಂಪಾಗಿ ಜಮಾವಣೆಗೊಳ್ಳುವದು (ವಚನಗಳು 13, 14) ಯೋಹಾನನ ವಾಚಕರಲ್ಲಿ ಕಳವಳವನ್ನುಂಟು ಮಾಡಿರಬಹುದಾಗಿದೆ. ಈ ಕಾರಣದಿಂದಾಗಿ ಯೇಸುವು ಸ್ವಲ್ಪ ವಿರಾಮ ತೆಗೆದುಕೊಂಡು ಅವರಿಗೆ ಭರವಸವನ್ನು ಕೊಡುತ್ತಾನೆ ಅವರ ವಿರೋಧಿಗಳನ್ನು ಧ್ವಂಸಗೊಳಿಸುವದಕ್ಕಾಗಿ ತಾನು ಬರಲಿದ್ದಾನೆಂಬುದನ್ನು ಅವರಿಗೆ ತಿಳಿಯಪಡಿಸುತ್ತಾನೆ. ಯೇಸುವಿನ ಜಯವು ಆತನ ಹೇಳಿಕೆಯಲ್ಲಿ ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿದೆ.

ಯೇಸುವು ಸಮಸ್ಯೆಯನ್ನು ಬಗೆಹರಿಸುವದಕ್ಕಾಗಿ *ತಾನು* ಏನು ಮಾಡುವನು ಎಂಬುದನ್ನು ಹೇಳುತ್ತಾನೆ: ಆತನು "ಬರುವನು." ಅಲ್ಲದೆ ಕ್ರೈಸ್ತರು ಏನು ಮಾಡುವವರಾಗಿರತಕ್ಕದ್ದು ಎಂಬುದನ್ನು ಸಹ ಅವರಿಗೆ ಹೇಳಿದನು: **ತಾನು ನಿರ್ವಾಣವಾಗಿ ತಿರುಗಾಡಿ ಅವಮಾನಕ್ಕೆ ಗುರಿಯಾದೇನೆಂದು ಎಚ್ಚರವಾಗಿದ್ದು ತನ್ನ ವಸ್ತ್ರಗಳನ್ನು ಕಾಪಾಡಿಕೊಳ್ಳುವವನು ಧನ್ಯನು.** ಕ್ರಿಸ್ತನ ಹಿಂಬಾಲಕರು ಆತ್ಮೀಕವಾಗಿ "ಎಚ್ಚರವಾಗಿರುವ" ಅಗತ್ಯವಿದೆ ಮತ್ತು ಅವರು ಆತ್ಮೀಕವಾಗಿ "ವಸ್ತ್ರಗಳನ್ನು ಧರಿಸಿರುವ" ಅಗತ್ಯವಿರುತ್ತದೆ. **ಧನ್ಯನು** ಎಂಬುದು ಪ್ರಕಟನೆ ಪುಸ್ತಕದಲ್ಲಿರುವ ಮೂರನೆಯ ಧನ್ಯನುಡಿಯನ್ನು ಪರಿಚಯಿಸುತ್ತದೆ (1:3; 14:13; 16:15; 19:9; 20:6; 22:7, 14).

ಏಳು ಸಭೆಗಳಿಗೆ ಬರೆದ ಪತ್ರಗಳಲ್ಲಿ ಇದೇ ರೀತಿಯ ಕರೆಗಳನ್ನು ಕೊಡಲಾಗಿತ್ತು: ಯೇಸುವು ಸಾರ್ದಿಸಿನಲ್ಲಿರುವ ಸಭೆಗೆ ಹೀಗೆ ಹೇಳಿದನು, "ಎಚ್ಚರವಾಗಿರು; ಸಾಯುವ ಹಾಗಿದ್ದ ಉಳಿದವುಗಳನ್ನು ದೃಢಪಡಿಸು ... ನೀನು ಎಚ್ಚರವಾಗಿಲ್ಲದಿದ್ದರೆ ಕಳ್ಳನು ಬರುವಂತೆ ಬರುವೆನು; ನಾನು ಯಾವ ಗಳಿಗೆಯಲ್ಲಿ ನಿನ್ನ ಮೇಲೆ ಬರುವೆನೋ ಅದು ನಿನಗೆ ತಿಳಿಯುವದೇ ಇಲ್ಲ" (3:2, 3). ಆತನು ಲವೊದಿಕೀಯದಲ್ಲಿರುವ ಸಭೆಗೆ ಹೀಗೆ ಬುದ್ಧಿ ಹೇಳಿದನು, "... ಲಜ್ಜಾಸ್ಪದವಾದ ನಿನ್ನ ಬೆತ್ತಲೆತನ ಕಾಣಿಸದಂತೆ ಹೊದ್ದುಕೊಳ್ಳುವದಕ್ಕಾಗಿ ಬಿಳೀವಸ್ತ್ರಗಳನ್ನೂ, ಕಣ್ಣುಕಾಣುವಂತೆ ನಿನ್ನ ಕಣ್ಣುಗಳಿಗೆ ಹಚ್ಚುವದಕ್ಕಾಗಿ ಅಂಜನವನ್ನೂ ನನ್ನಿಂದ ಕೊಂಡುಕೊಳ್ಳಬೇಕೆಂದು ನಿನಗೆ ಬುದ್ಧಿ ಹೇಳುತ್ತೇನೆ" (3:18).

"ವಸ್ತ್ರಗಳನ್ನು ಕಾಪಾಡಿಕೊಂಡು" ಇರಬೇಕೆಂಬುದಕ್ಕೆ ಕಾರಣವೇನೆಂದರೆ ಕ್ರೈಸ್ತನು **ನಿರ್ವಾಣವಾಗಿ ತಿರುಗಾಡ**ದ ಹಾಗೆಯೂ ಮನುಷ್ಯರು ಆತನ **ಅವಮಾನ**ವನ್ನು ನೋಡದಿರುವ ಹಾಗೆಯೂ ಇರಬೇಕೆಂಬುದೆ. ಅನೇಕ ವ್ಯಾಖ್ಯಾನಕಾರರು ಪ್ರಸ್ತಾಪಿಸುವ ವಾಸ್ತವಾಂಶವೇನೆಂದರೆ ಸೈನಿಕರು ಸೆರೆಯಾಗಿ ಹಿಡಿಯಲ್ಪಡುವ ವೇಳೆ, ಅವರ ಉಡುಪುಗಳ ಜುಬ್ಬವನ್ನು ಅನೇಕ ವೇಳೆಗಳಲ್ಲಿ ಕತ್ತರಿಸಲಾಗುತ್ತಿತ್ತು ಮತ್ತು ಅವರನ್ನು ಅವಮಾನವಾಗುವಂತೆ ಜನರ ಮುಂದೆ ಮೆರವಣಿಗೆ ಮಾಡಿಸುತ್ತಿದ್ದರು. ಕೆಲವು ಲೇಖಕರು

ಲೇವಿಕ ಕಾವಲುಗಾರನು ನಿದ್ರಿಸುವದಾಗಿ ಕಂಡು ಬಂದಲ್ಲಿ, ಆತನ ಮೇಲಂಗಿಗೆ ದೇವಾಲಯದ ನಾಯಕನು ಬೆಂಕಿಯನ್ನು ಹೊತ್ತಿಸುತ್ತಿದ್ದನು ಎಂದು ಸಹ ಪ್ರಸ್ತಾಪಿಸುತ್ತಾರೆ. ಮರು ದಿನ ಬೆಳಿಗ್ಗೆ ಉರಿದು ಹೋಗಿರುವ ಹಾಗೂ ಕುಳ್ಳದಾಗಿರುವ ಮೇಲಂಗಿಯು ಆತನು ತನ್ನ ಸೇವೆಯಲ್ಲಿ ಉದಾಸೀನನಾಗಿದ್ದನೆಂಬುದನ್ನು ಎಲ್ಲರಿಗೂ ಪ್ರಚುರಪಡಿಸುತ್ತಿತ್ತು. ಬಹುಶಃ, ರೂಪಕ ಭಾಷೆಯು ಇವೆರಡರಲ್ಲಿ ಯಾವದೂ ಆಗಿರದೆ ಹೆಚ್ಚು ಸಾಮಾನ್ಯವಾದ ಅರ್ಥವನ್ನು ಹೊಂದಿರಬಹುದಾಗಿದೆ. ಬಹುಶಃ ಇಲ್ಲಿ ಚಿತ್ರಣವು ತನ್ನ ವಸ್ತ್ರಗಳನ್ನು ಕಳಚಿ ನಿದ್ದೆಗೆ ಹೋಗಿದ್ದವನೊಬ್ಬನದ್ದಾಗಿರಬಹುದು. ಒಂದು ಅಗ್ನಿಅವಘಡ ಅಥವಾ ಬೇರೆ ಇನ್ನಾವದೋ ವಿಕೋಪದ ಕಾರಣದಿಂದ ನಿದ್ದೆಯಿಂದ ಹಠಾತ್ತಾಗಿ ಎಚ್ಚರಗೊಂಡ ವೇಳೆ, ಆತನಿಗೆ ಬಟ್ಟೆಗಳನ್ನು ಧರಿಸಿಕೊಂಡು ಓಡಿ ಹೋಗುವಷ್ಟು ಸಮಯವು ಇಲ್ಲದಂತಾಗಿರುತ್ತಿತ್ತು.

ಪ್ರಕಟನೆ 16:15ರಲ್ಲಿ, "ಎಚ್ಚರವಾಗಿದ್ದು" (γρηγορῶν, *grēgorōn*, ಇದು γρηγορέω, *grēgoreō* ಎಂಬದರಿಂದ ಬಂದದ್ದು) ಮತ್ತು "ಕಾಪಾಡಿಕೊಳ್ಳುವವನು" (τηρῶν, *terōn*, ಇದು τηρέω, *tereō* ಎಂಬದರಿಂದ ಬಂದದ್ದು) ಎಂಬ ಪದಗಳು ವರ್ತಮಾನಕಾಲರೂಪದಲ್ಲಿದ್ದು ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ಕ್ರೈಸ್ತರು ಕರ್ತನ ಬರೋಣಕ್ಕಾಗಿ ಸಿದ್ಧರಾಗಿರುವದಕ್ಕೆ ಬಯಸುವದಾದರೆ, ಅವರು *ನಿರಂತರವಾಗಿ* ಎಚ್ಚರಿಕೆಯಿಂದಿರಬೇಕು. ಕರ್ತನು ನೀಡಿದ ಇಮ್ಮಡಿ ಕರೆಯ ಸಂದೇಶವು ಸ್ಪಷ್ಟವಾಗಿದೆ: ಎಲ್ಲಾ ಸಮಯದಲ್ಲಿಯೂ ಸಿದ್ಧರಾಗಿರಿ (ನೋಡಿರಿ ಮತ್ತಾಯ 25:1-13).

**ವಚನ 16.** ಯುದ್ಧವು ಸಂಪೂರ್ಣ ಪರಾಜಿತಗೊಂಡಿರುತ್ತದೆಂಬುದಕ್ಕೆ ಅಂತಿಮ ಸೂಚನೆಯು 16ನೇ ವಚನದಲ್ಲಿ ಸಿಕ್ಕುತ್ತದೆ: **ಆ ದೆವ್ವಗಳು ಭೂರಾಜರನ್ನು ಇಬ್ರಿಯ ಭಾಷೆಯಲ್ಲಿ ಹರ್ಮಗೆದೋನ್ ಎಂಬ ಹೆಸರುಳ್ಳ ಸ್ಥಳಕ್ಕೆ ಕೂಡಿಸಿದವು.** ಈ **ಹರ್ಮಗೆದೋನ್** (Ἁρμαγεδών) ಎಂಬ ಕಾಗುಣಿತದ ವಿಷಯದಲ್ಲಿ ಅನೇಕ ಪ್ರಶ್ನೆಗಳಿರುತ್ತವೆ. ಇರುವಂಥ ಪ್ರಶ್ನೆಗಳಲ್ಲೊಂದು ಎಂದರೆ ಉಚ್ಛಾರಣೆಯ ಚಿಹ್ನೆಗಳು. ಕೆಲವು ಹಸ್ತಪ್ರತಿಗಳಲ್ಲಿ ಹೆಸರಿನ (ಉಚ್ಚಾರದ ಮೇಲೆ ಪರಿಣಾಮ ಬೀರದ) ಮೊದಲ "A"ದ ಮೇಲ್ಗಡೆ ಒಂದು ಅಲ್ಪಪ್ರಾಣ ಚಿಹ್ನೆಯಿರುತ್ತದೆ (') ಮತ್ತು ಹೀಗೆ "ಅರ್ಮಗೆದ್ದೋನ್" ಎಂದಿರುತ್ತದೆ. ಇನ್ನು ಕೆಲವು ಹಸ್ತಪ್ರತಿಗಳಲ್ಲಿ "A"ದ ಮೇಲ್ಗಡೆ ಒಂದು ಮಹಾಪ್ರಾಣ ಚಿಹ್ನೆ (‘) ಇರುತ್ತದೆ (ಅದು ಅದಕ್ಕೊಂದು "ಹ" ಉಚ್ಚಾರವನ್ನು ಕೊಡುತ್ತದೆ), ಹೀಗೆ ಆ ಪ್ರತಿಗಳು ಹೆಸರನ್ನು "ಹರ್ಮಗೆದೋನ್" ಎಂದು ಕಾಗುಣಿತ ಮಾಡುತ್ತವೆ.

ಅಲ್ಲದೆ ಈ ಪದದ ಅರ್ಥದ ವಿಷಯದಲ್ಲಿ ಸಹ ಕೆಲವೊಂದು ಪ್ರಶ್ನೆಗಳಿರುತ್ತವೆ. "ಅರ್ಮಗೆದೋನ್" ಎಂಬ ಪದದ ಕಾಗುಣಿತ ಹಾಗೂ ಅರ್ಥದ ವಿಷಯವಾಗಿ ಇರುವ ಒಂದು ಸಮಸ್ಯೆಯು ಏನೆಂದರೆ, ಅದು ಶಾಸ್ತ್ರಗಳೊಳಗೆ ಬೇರೆ ಎಲ್ಲೂ ಕಾಣಿಸುವದಿಲ್ಲ ಹಾಗೂ ಪ್ರಕಟನೆ ಪುಸ್ತಕದಲ್ಲಿ ಈ ಒಂದು ಸಾರಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. "ಅರ್ಮಗೆದೋನ್" (ಮಹಾಪ್ರಾಣ ಚಿಹ್ನೆಯಿಲ್ಲದೆ) ಎಂಬುದು "ಮೆಗಿದ್ದೋ ನಗರ" ಎಂಬುದನ್ನು ಒಳಗೊಂಡಂತೆ ವಿವಿಧ ಅರ್ಥಗಳನ್ನು ಹೊಂದಿರಬಹುದಾಗಿದೆ. ಹೇಗೂ, ಬಹುಪಾಲು ವೇದ ಪಂಡಿತರು "ಹರ್ಮಗೆದೋನ್" ಸರಿಯಾದ ಕಾಗುಣಿತ ಎಂದು ನಂಬುತ್ತಾರೆ. הַר (*har*) ಎಂಬುದು "ಬೆಟ್ಟ" ಎಂಬುದಕ್ಕಿರುವ **ಇಬ್ರಿಯ** ಪದವಾಗಿದೆಯಾದ್ದರಿಂದ, ಅವರು ಆ ಹೆಸರಿನ ಅರ್ಥವು "ಮೆಗಿದ್ದೋ ಬೆಟ್ಟ" ಎಂದಾಗಿರುತ್ತದೆ ಎಂಬ ಮುಕ್ತಾಯಕ್ಕೆ ಬರುತ್ತಾರೆ.

"ಮೆಗಿದ್ದೋ" (מְגִדּוֹ) ಎಂಬ ಪದದ ವಿಷಯದಲ್ಲಿ, ಕೆಲವು ಪೂರ್ವಭಾವಿ ಹೇಳಿಕೆಗಳು ಸೂಕ್ತವಾಗಿರುತ್ತವೆ. ಮೆಗಿದ್ದೋ ಎಂಬುದು ಹಳೆಯ ಒಡಂಬಡಿಕೆಯಲ್ಲಿ ಹನ್ನೊಂದು ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತದೆ (ಯೆಹೋಶುವ 12:21; 17:11; ನ್ಯಾಯಸ್ಥಾಪಕರು 1:27; 5:19; 1 ಅರಸು

4:12; 9:15; 2 ಅರಸು 9:27; 23:29, 30; 1 ಪೂರ್ವಕಾಲವೃತ್ತಾಂತ 7:29; 2 ಪೂರ್ವಕಾಲವೃತ್ತಾಂತ 35:22; ಜೆಕರ್ಯ 12:11). ಮೆಗಿದ್ದೋ ನಗರವು ಯೆರೂಸಲೇಮಿನಿಂದ ಅರವತ್ತು ಮೈಲಿ ಉತ್ತರಕ್ಕೆ ಹಾಗೂ ಗಲಿಲಾಯ ಸಮುದ್ರದಿಂದ ಇಪ್ಪತ್ತೈದು ಮೈಲಿಗಳಷ್ಟು ದೂರದಲ್ಲಿ ನೈರುತ್ಯದ ಕಡೆಗಿರುವ ಉತ್ತರದ ಫಿಲಿಷ್ಟಿಯದಲ್ಲಿರುತ್ತದೆ. ಈ ಹೆಸರಿನ ನಿಖರವಾದ ಅರ್ಥದ ಕುರಿತು ವಾಗ್ವಾದಗಳಿರುತ್ತವೆ. ಕೆಲವರು ಈ ಹೆಸರಿನ ಅರ್ಥವು "ಸೇನಾಪಡೆಗಳ ಸ್ಥಳ" ಅಥವಾ "ವಧಸ್ಥಾನ" ಎಂಬುದಾಗಿ ಯೋಚಿಸುತ್ತಾರೆ. ಮೆಗಿದ್ದೋದ ಈಶಾನ್ಯದ ಕಡೆಗೆ ಬೃಹತ್ ಸಮಭೂಮಿಯಿತ್ತು, ಅದು ಸುಮಾರು ಹದಿನಾಲ್ಕು ಮೈಲಿ ಅಗಲ ಹಾಗೂ ಇಪ್ಪತ್ತು ಮೈಲಿ ಉದ್ದವಾಗಿತ್ತು. ಮೆಗಿದ್ದೋ ನಗರವು ಅದರ ಸಮೀಪದಲ್ಲಿದ್ದ ಸಮಭೂಮಿಗೆ ಅದರ ಹೆಸರನ್ನು ಎರವಲಾಗಿ ನೀಡಿತ್ತು. ಈ ವಿಸ್ತಾರವಾದ ತೆರೆದ ಪ್ರಾಂತ್ಯವು ಜಜ್ರೇಲ್ (ಎಸ್ದ್ರಾಯಲೋನ್) ಕಣಿವೆ ಸೇರಿದಂತೆ, ಹಲವಾರು ಪ್ರಸಿದ್ಧ ಸ್ಥಳಗಳನ್ನು ಒಳಗೊಂಡಿತ್ತು.

ನಗರದ ಸುತ್ತಲಿನ ಪ್ರಾಂತ್ಯಕ್ಕೆ "ಮಹಾ ಕಾರ್ಯತಾಂತ್ರಿಕ ಪ್ರಾಮುಖ್ಯತೆಯಿತ್ತು, ಯಾಕೆಂದರೆ ಅದು ಶಾರೋನ್ ಹಾಗೂ ಎಸ್ದ್ರಾಯಲೋನ್ ಬಯಲುಗಳ ನಡುವೆ ಇದ್ದ ಪರ್ವತಗಳಿಗೆ ಸಾಗಿ ಹೋಗಲು ದಾರಿಯ ಮೇಲೆ ಹಿಡಿತ ಹೊಂದಿದ್ದ ಜಾಗದಲ್ಲಿತ್ತು."[18] ಆ ಸ್ಥಳದಲ್ಲಿ, ಆಕ್ರಮಣ ಮಾಡುವವರನ್ನು ಎದುರಿಸುವದಕ್ಕೆ ಸಾಧ್ಯವಾಗುತ್ತಿತ್ತು. ಹಲವಾರು ನಿರ್ಣಾಯಕ ಯುದ್ಧಗಳು ಮೆಗಿದ್ದೋವಿನ ಬಯಲು ಪ್ರದೇಶಗಳಲ್ಲಿ ನಡೆದಿರುತ್ತವೆ. ಒಬ್ಬ ಇತಿಹಾಸಕಾರನು ಹೀಗೆ ಬರೆದನು, "ಎಸ್ದ್ರಾಯಲೋನ್ ಬಯಲುಗಳ ಕಡೆಗೆ ಮುಖಮಾಡಿದ್ದಂಥ ಮೆಗಿದ್ದೋ ಸುತ್ತಲಿನ ಕೆಳಮಟ್ಟದ ಬೆಟ್ಟಗಳು ... ಬಹುಶಃ ಪ್ರಪಂಚದ ಒಂದು ಸ್ಥಳದ ಮೇಲ್ಮೈಯನ್ನು ಎಂದಾದರೂ ತೊಯಿಸಿರಬಹುದಾದದ್ದಕ್ಕಿಂತಲೂ ಅತ್ಯಧಿಕ ರಕ್ತಪಾತದ ಕದನಗಳಿಗೆ ಸಾಕ್ಷಿಯಾಗಿರುತ್ತವೆ."[19] ಈ ಯುದ್ಧಗಳಲ್ಲಿ ಕೆಲವು ಶಾಸ್ತ್ರಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತವೆ. ಈ ಕ್ಷೇತ್ರದಲ್ಲಿ, ಗಿದ್ಯೋನ್ ಮತ್ತು ಆತನ ಮುನ್ನೂರು ಮಂದಿ ಸಂಗಡಿಗರು ಮಿದ್ಯಾನ್ಯರನ್ನು ಸೋಲಿಸಿದರು (ನ್ಯಾಯಸ್ಥಾಪಕರು 7:1-22), ಅರಸನಾದ ಸೌಲನು ಫಿಲಿಷ್ಟಿಯರ ಕೈಯಲ್ಲಿ ಸೋಲಿಸಲ್ಪಟ್ಟನು (1 ಸಮು 31:1-6), ಮತ್ತು ಅರಸನಾದ ಅಹಜ್ಯನು ಯೇಹುವಿನ ಬಾಣದಿಂದ ಕೊಲ್ಲಲ್ಪಟ್ಟನು (2 ಅರಸು 9:27).

ಮೆಗಿದ್ದೋನಲ್ಲಿ ನಡೆದ ಇನ್ನು ಎರಡು ಯುದ್ಧಗಳು ಯೆಹೂದ್ಯರಿಗೆ ವಿಶೇಷವಾದ ಮಹತ್ವವನ್ನು ಹೊಂದಿದ್ದವು: ಅದರಲ್ಲೊಂದೆಂದರೆ ಬಾರಾಕನ ಮತ್ತು ದೆಬೋರಳು ಸೇರಿ ಕಾನಾನ್ಯರ ಅರಸನಾದ ಯಾಬೀನ ಸೇನೆಗಳ ಮೇಲೆ (ನ್ಯಾಯಸ್ಥಾಪಕರು 4, 5) "ಮೆಗಿದ್ದೋ ಪ್ರವಾಹಗಳ ಬಳಿಯಲ್ಲಿ" (ನ್ಯಾಯಸ್ಥಾಪಕರು 5:19) ದೊಡ್ಡ ಜಯವನ್ನು ಸಾಧಿಸಿದ್ದರು. ಇನ್ನೊಂದು ಯುದ್ಧವು ಫರೋಹ ನೆಕೋನ ವಿರುದ್ಧವಾಗಿತ್ತು, ಅದರಲ್ಲಿ ಯೋಷೀಯನು ಮರಣಾಂತಿಕವಾಗಿ ಗಾಯಗೊಂಡನು (2 ಅರಸು 23:29, 30; 2 ಪೂರ್ವಕಾಲವೃತ್ತಾಂತ 35:22-24). "ಇವುಗಳೊಳಗೆ ಕಡೇ ಘಟನೆಯು ಯೆಹೂದ್ಯರ ನೆನಪಿನಲ್ಲಿ ಉರಿಯುತ್ತಲಿತ್ತು, ಮತ್ತು ಮೆಗಿದ್ದೋವಿನ ಕಣಿವೆಗಳಲ್ಲಿ ಯೋಷೀಯನಿಗಾಗಿ ಶೋಕ ಪಟ್ಟದ್ದು ಅದಾದ ನಂತರದಲ್ಲಿ ಬಹುಕಾಲದ ವರೆಗೆ ರಾಷ್ಟ್ರೀಯ ಶೋಕಾಚರಣೆಯ ಒಂದು ವೈಶಿಷ್ಟ್ಯವಾದ ಉದಾಹರಣೆಯಾಗಿ ಉಲ್ಲೇಖಿಸಲ್ಪಡುತ್ತಿತ್ತು [ಜೆಕರ್ಯ 12:11]."[20]

ಅದು ಮೆಗಿದ್ದೋ ನಗರಕ್ಕೆ ಸ್ವಲ್ಪ ಮಟ್ಟಿಗೆ ಹಿನ್ನಲೆಯನ್ನು ಒದಗಿಸುತ್ತದೆ, ಆದರೆ "ಮೆಗಿದ್ದೋ ಬೆಟ್ಟ"ದ ವಿಷಯವೇನು? Albert Baldingerನು ಹೀಗೆ ಬರೆದನು, "ತಿರುಗಿರಿ ... ನಿಮ್ಮ ಪ್ರಾಚೀನ ಫಿಲಿಷ್ಟಿಯ ನಕ್ಷೆಯ ಕಡೆಗೆ ಮತ್ತು ಅರ್ಮಗೆದ್ದೋನ್ ಎಲ್ಲಿದೆ ಗುರುತಿಸಿರಿ. ಅದು ಸುಲಭವಾಗಿ ಸಿಕ್ಕುವದಿಲ್ಲ; ನಿಜ ಹೇಳುವದಾದರೆ ನಿಮಗೆ ಅದು ಸಿಕ್ಕುವದೇ ಇಲ್ಲ. ಅದು

ಆ ನಕ್ಷೆಯಲ್ಲಿರುವದಿಲ್ಲ."[21] ಈ ಮುಂಚೆ ಹೇಳಿದ ಹಾಗೆ, ಬಹುಪಾಲು ವೇದ ಪಂಡಿತರು ಒಪ್ಪಿಕೊಳ್ಳುವದೇನೆಂದರೆ "ಹರ್ಮಗೆದೋನ್" ("ಅರ್ಮಗೆದ್ದೋನ್"; KJV) ಎಂದರೆ "ಮೆಗಿದ್ದೋ ಬೆಟ್ಟ" ಎಂದರ್ಥವಾಗಿದೆ. Bruce Metzgerನು ತೋರಿಸಿ ಕೊಡುವ ಪ್ರಕಾರ "ಹೇಗೂ, ಸಮಸ್ಯೆಯು ಏನೆಂದರೆ, 'ಮೆಗಿದ್ದೋ ಬೆಟ್ಟ' ಎಂಬುದು ಇಲ್ಲವೇ ಇಲ್ಲ."[22] ವೇದಪಂಡಿತರು ಸಾಮಾನ್ಯವಾಗಿ ವಿಶ್ವದಲ್ಲಿ ಎಲ್ಲಿಯೂ ಮೆಗಿದ್ದೋ ಬೆಟ್ಟ ಎಂಬ ಸ್ಥಳವೇ ಇರುವದಿಲ್ಲ ಎಂದು ಒಮ್ಮತವನ್ನು ವ್ಯಕ್ತಪಡಿಸುತ್ತಾರೆ.

> ಬೈಬಲ್ ಭೌಗೋಳಿಕವಾಗಿ "ಮೆಗಿದ್ದೋ ಮತ್ತು ಅದರ ಮೂರು ಶಿಖರಗಳು" (ಯೆಹೋಶುವ 17:11), "ಮೆಗಿದ್ದೋ ಎಂಬ ಪಟ್ಟಣಗಳೂ" (ನ್ಯಾಯಸ್ಥಾಪಕರು 1:27), "ಮೆಗಿದ್ದೋ ಪ್ರವಾಹಗಳು" (ನ್ಯಾಯಸ್ಥಾಪಕರು 5:19), ಮತ್ತು "ಮೆಗಿದ್ದೋ ಬೈಲು" (II ಪೂರ್ವಕಾಲವೃತ್ತಾಂತ 35:22; ಜೆಕರ್ಯ 12:11), ಆದರೆ ಮೆಗಿದ್ದೋ ಬೆಟ್ಟದ ಕುರಿತು ಯಾವ ಪ್ರಸ್ತಾಪವನ್ನೂ ಮಾಡುವದಿಲ್ಲ.[23]

ಹಳೆಯ ಒಡಂಬಡಿಕೆಯು ಮೆಗಿದ್ದೋ ಕುರಿತು ಬಹಳಷ್ಟನ್ನು ಹೇಳುತ್ತದಾದರೂ, ಅದು ಮೆಗಿದ್ದೋ ಬೆಟ್ಟದ ಕುರಿತು ಏನನ್ನೂ ಹೇಳುವದಿಲ್ಲ. ಪಟ್ಟಣವು ಒಂದು "tel" ಅಥವಾ ದಿಬ್ಬದ ಮೇಲೆ ಕಟ್ಟಲ್ಪಟ್ಟಿತ್ತು, ಮತ್ತು ಈ ವಿಶಿಷ್ಟತೆಯು "ಹರ್ಮಗೆದೋನ್" ಪದವು ಉಂಟಾಗುವಂತೆ ಮಾಡಿರಬಹುದಾಗಿದೆ ಎಂದು ಕೆಲವರು ಯೋಚಿಸುತ್ತಾರೆ. ಹೇಗೂ, ಬಹುಪಾಲು ಲೇಖಕರು *ಹರ್* ಎಂಬುದು ಒಂದು ಅಕ್ಷರಶಃ ಬೆಟ್ಟವನ್ನು ಸೂಚಿಸುತ್ತದೆಂದು ನಂಬುತ್ತಾರೆ - ಮತ್ತು ಅದು ಅವರನ್ನು ಗೊಂದಲಕ್ಕೆ ಬೀಳಿಸುತ್ತದೆ:

> ಸಮಸ್ಯೆಯು ಏನೆಂದರೆ ಮೆಗಿದ್ದೋ ಒಂದು ಬೆಟ್ಟ ಆಗಿರುವದಿಲ್ಲ, ಆದರೆ ಗಲಿಲಾಯ ಸಮುದ್ರದ ಹಾಗೂ ಮೆಡಿಟೆರ್ರೇನಿಯನ್ ಸಮುದ್ರ ನಡುವೆ ಇರುವ ಒಂದು ಬೈಲು ಪ್ರದೇಶವಾಗಿದ್ದು, ಜೆಜ್ರೇಲ್ (ಎಸ್ದ್ರಾಯಲೋನ್) ಕಣಿವೆಯ ಭಾಗವಾಗಿತ್ತು.[24]
>
> ... ಇಲ್ಲೊಂದು ಸಮಸ್ಯೆಯು ಉದ್ಭವವಾಗುತ್ತದೆ: ಮೆಗಿದ್ದೋ ಎಂಬ ಬೆಟ್ಟವೂ ಇಲ್ಲವೇ ಇಲ್ಲ.[25]
>
> ... ವಿಷಾದಕರವಾಗಿ "ಮೆಗಿದ್ದೋ ಬೆಟ್ಟ" ಎಂದು ಕರೆಸಿಕೊಳ್ಳಬಹುದಾದ ಯಾವ ಬೆಟ್ಟವೂ ಕಾಣಿಸುವದಿಲ್ಲ.[26]
>
> ಈ ಚಿಕ್ಕ ಪಟ್ಟಣವು ಇಸ್ರಾಯೇಲಿನಲ್ಲಿರುವ ಎಸ್ದ್ರಾಯಲೋನ್ ಬೈಲು ಪ್ರದೇಶದಲ್ಲಿರುತ್ತದೆ, ಮತ್ತು ಅದು ಯಾವ ಬೆಟ್ಟವನ್ನೂ ಒಳಗೊಂಡಿರುವದಿಲ್ಲ.[27]
>
> ಆದರೆ ಮೆಗಿದ್ದೋ ಸಮೀಪದಲ್ಲಿ ಯಾವ ಬೆಟ್ಟವೂ ಇರುವದಿಲ್ಲ ...[28]

ಸಮಸ್ಯೆಯನ್ನು ಇಷ್ಟಬಂದ ಹಾಗೆ ಒಂದು ಸಾಮಾನ್ಯವಾದ ಕ್ಷೇತ್ರಕ್ಕೆ "ಮೆಗಿದ್ದೋ ಬೆಟ್ಟ" ಎಂಬ ಹೆಸರುಪಟ್ಟಿಯನ್ನು ಅಂಟಿಸುವ ಮೂಲಕ ಬಗೆಹರಿಸುವದಕ್ಕೆ ಪ್ರಯತ್ನಿಸುವ ಬದಲಾಗಿ. ಇನ್ನಷ್ಟು ಸರಳವಾದ ಪರಿಹಾರವೆಂದರೆ ಪವಿತ್ರಾತ್ಮನ ಉದ್ದೇಶವು ಭೌಗೋಳಿಕ ಸ್ಥಳವನ್ನು ಬೆರಳು ಮಾಡಿ ತೋರಿಸುವದಾಗಿರುವದಿಲ್ಲ ಆದರೆ *ಒಂದು ಭಾವನೆಯ* ಛಾಪು ಮೂಡಿಸುವದೇ ಆಗಿತ್ತದೆಂಬುದನ್ನು ಒಪ್ಪಿಕೊಳ್ಳುವದೇ ಆಗಿದೆ. ಅದು ಯಾವ ಭಾವನೆ ಆಗಿರಬಹುದು? ಮೆಗಿದ್ದೋ ಒಂದು ಯುದ್ಧ ಸ್ಥಳವೆಂದು ಖ್ಯಾತಿಯನ್ನು ಪಡೆದುಕೊಂಡಿತ್ತು. ಆದದರಿಂದ ಮೆಗಿದ್ದೋ ಬೆಟ್ಟವು ಸೈತಾನ ಹಾಗೂ ಆತನ ಕೈಕೆಳಗಿನವರು ಯೋಜನೆ ಹಾಕಿರುವ ಆತ್ಮೀಕ ಯುದ್ಧಕ್ಕೆ ಸಂಬಂಧ ಪಟ್ಟಂತೆ ಬಳಸುವ ಸೂಕ್ತವಾದ ಪದವಾಗಿರುತ್ತದೆ. ಅಷ್ಟುಮಾತ್ರವಲ್ಲದೆ,

ಮೆಗಿದ್ದೋದಲ್ಲಿ ನಡೆದ ಯುದ್ಧಗಳ ಕಾರಣದಿಂದಾಗಿ ಅಸಂಖ್ಯಾತ ಕಣ್ಣೀರು ಸುರಿಸಲ್ಪಟ್ಟಿರುತ್ತವೆ. ಸೈತಾನನ ಬಂಡಾಯವು ಹೃದಯ ವೇದನೆಯನ್ನು ಅಂತ್ಯಗೊಳ್ಳುತ್ತದಾದ್ದರಿಂದ, ಹರ್ಮಗೆದೋನ್ ಸಹ ದುರಂತದ ಅರ್ಥವನ್ನು ನೀಡುವದಕ್ಕೆ ಸಮರ್ಪಕವಾಗಿರುತ್ತದೆ.

ಮೇಲಿನದು ಸತ್ಯವಾಗಿದೆಯಾದರೂ, ಬಹುಶಃ ಅಲ್ಲಿ ಒಂದು ಹೆಚ್ಚು ಮಾರ್ಮಿಕ - ಮತ್ತು ಮಹತ್ವಪೂರ್ಣವಾದ - ಭಾವನೆಯೊಂದು ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿರಬಹುದಾಗಿದೆ. ಈ ಮುಂಚೆ ಪಟ್ಟಿ ಮಾಡಲಾಗಿರುವ ಹಳೆಯ ಒಡಂಬಡಿಕೆಯ ಯುದ್ಧಗಳನ್ನು ಆಲೋಚಿಸಿರಿ: ಪ್ರತಿಯೊಂದು ಪ್ರಕರಣಗಳಲ್ಲಿಯೂ, ಯಾರ ಕೃತ್ಯಗಳಿಗೆ ದೇವರ ಮನ್ನಣೆಯು ಇತ್ತೋ ಅವರು ಯುದ್ಧವನ್ನು ಗೆದ್ದರು; ಯಾರ ಕೃತ್ಯಗಳು ದೇವರ ಚಿತ್ತಕ್ಕೆ ವಿರುದ್ಧವಾಗಿದ್ದವೋ ಅವರು ಸೋತು ಹೋದರು. ಉಲ್ಲೇಖಿಸಲಾಗಿರುವ ಎಲ್ಲಾ ಉದಾಹರಣೆಗಳಲ್ಲಿಯೂ ಈ ಸತ್ಯವು ಸ್ಪಷ್ಟವಾಗಿ ಕಂಡು ಬರುತ್ತದೆ; ಆದರೆ ಯೋಷೀಯನ ಪ್ರಕರಣದಲ್ಲಿ ಅದು ಸ್ಪಷ್ಟವಾಗಿ ಕಾಣಿಸದೆ ಇರಬಹುದು, ಆತನು ಬಹಳಷ್ಟು ವಿಧದಲ್ಲಿ ಒಳ್ಳೇ ಅರಸನಾಗಿದ್ದನು. 2 ಪೂರ್ವಕಾಲವೃತ್ತಾಂತ 35:20-25ರಲ್ಲಿರುವ ಕಥನದ ಕಡೆಗೆ ವಿಶೇಷ ಗಮನವನ್ನು ಕೊಡಿರಿ. ಫರೋಹ ನೆಕೋ ತನ್ನನ್ನು ಯುದ್ಧದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಡವೆಂದು ಯೋಷೀಯನನ್ನು ಬೇಡಿಕೊಂಡನು, ಆದರೆ ಯೋಷೀಯನು "*ದೇವೋಕ್ತಿಯಾಗಿದ್ದ* ನೆಕೋವಿನ ಮಾತಿಗೆ ಕಿವಿಗೊಡದೆ ವೇಷಹಾಕಿಕೊಂಡು ಅವನೊಡನೆ ಕಾದುವದಕ್ಕೆ *ಮೆಗಿದ್ದೋ ಬೈಲಿಗೆ* ಹೋದನು" (2 ಪೂರ್ವಕಾಲವೃತ್ತಾಂತ 35:22; ಒತ್ತಿ ಹೇಳಿದ್ದು ನನ್ನದು). "ಕಾದುವದಕ್ಕೆ ಮೆಗಿದ್ದೋ ಬೈಲಿಗೆ" ಬಂದವರು "ದೇವೋಕ್ತಿಯಾಗಿದ್ದ ... ಮಾತಿಗೆ" ಕಿವಿಗೊಡದವರಾಗಿದ್ದರು, ಅವರಿಗೆ ಸೋಲು ಖಚಿತವಾಗಿತ್ತು. ನಾವು ಇದೇ ವಿಚಾರವನ್ನು ಪ್ರಕಟನೆ 16:14, 16ರಲ್ಲಿ ಗುಂಪಾಗಿ ಕೂಡಿಬಂದಿರುವ ದುಷ್ಟಶಕ್ತಿಗಳಿಗೆ ಅನ್ವಯಿಸಲಾಗದೋ? ಅವರು ಸರ್ವಶಕ್ತನ ವಿರುದ್ಧ ಬಂಡಾಯವೆದ್ದಿದ್ದರು ಮತ್ತು ಅವರು "ಇಬ್ರಿಯ ಭಾಷೆಯಲ್ಲಿ ಹರ್ಮಗೆದೋನ್ ಎಂಬ ಹೆಸರುಳ್ಳ ಸ್ಥಳ"ದಲ್ಲಿ ಇದ್ದರು. ಕಪ್ಪೆಗಳು ತಮ್ಮ ಸೈನ್ಯಗಳನ್ನು *ತಮಗೆ ಗೆಲ್ಲುವದಕ್ಕೆ ಅಸಾಧ್ಯವಾಗಿರುವ* ಸ್ಥಳವೊಂದರಲ್ಲಿ ಕೂಡಿಸಿಕೊಂಡಿದ್ದವು - ಅಲ್ಲಿ ಅವರಿಗೆ ಆರಂಭದಿಂದಲೇ ಸಂಪೂರ್ಣ ಪರಾಜಯವಾಗಿತ್ತು. ಆದ್ದರಿಂದ ಅವರು ಸ್ಪರ್ಧೆಯಲ್ಲಿ ಸೋಲುವದು ಖಚಿತವಾಗಿತ್ತು.

ಆ ವೇದಿಕೆಯು ಒಂದು ಅಸ್ತಿತ್ವದಲ್ಲಿಲ್ಲದ ಸ್ಥಳವಾಗಿತ್ತು ಎಂಬದನ್ನು ತಿಳಿದುಕೊಂಡ ಬಳಿಕ, ಆ ಸಂದರ್ಭವು ಒಂದು ಘಟನೆಯಾಗಿರಲೇ ಇಲ್ಲ ಎಂಬುದನ್ನು ಒತ್ತಿ ಹೇಳುವ ಸಮಯವಾಗಿರುತ್ತದೆ. ಈ ಮುಂಚೆ ಗಮನಿಸಿದ ಹಾಗೆ, *ಅಲ್ಲಿ ಯುದ್ಧವು ನಡೆಯಲೇ ಇಲ್ಲ.* ನಾವು ಅನಂತರದಲ್ಲಿ ನೋಡಲಿರುವದೇನೆಂದರೆ, ದುಷ್ಟ ಸೈನ್ಯವು ಒಟ್ಟಾಗಿ ಕೂಡಿಕೊಂಡ ಕೂಡಲೆ, "ಏಳನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ವಾಯುಮಂಡಲದ ಮೇಲೆ ಹೊಯ್ಯಲು ದೇವಾಲಯದಲ್ಲಿರುವ ಸಿಂಹಾಸನದ ಕಡೆಯಿಂದ ಮಹಾ ಶಬ್ದವು ಉಂಟಾಗಿ - ಆಯಿತು ಎಂದು ಹೇಳಿತು" (ವ. 17). ಅಲ್ಲಿ ಯಾವದೇ ಗುಂಡು ಹಾರಿಸಲ್ಪಡಲಿಲ್ಲ, ಕ್ಷಿಪಣಿಗಳು ಸ್ಫೋಟಿಸಲ್ಪಡಲಿಲ್ಲ. ದೇವರು "ತೀರಿತು" ಎಂದನು ಮತ್ತು ಅಲ್ಲಿ ಎಲ್ಲವೂ ಸಮಾಪ್ತಿಯಾಗಿತ್ತು.

ಒಂದು "ಅರ್ಮಗೆದ್ದೋನ್" ಯುದ್ಧವು ಇದೆ ಎಂಬುದು ಬೈಬಲಿಗೆ ಗೊತ್ತೇ ಇರುವದಿಲ್ಲ. 13ರಿಂದ 16 ವಚನಗಳು ದೇವರ ಯೋಜನೆ ಹಾಗೂ ಉದ್ದೇಶಗಳಿಗೆ ಭಂಗವುಂಟು ಮಾಡುವದಕ್ಕಾಗಿ ಸೈತಾನನು ನಿರಂತರವಾಗಿ ಮಾಡುವ ಪ್ರಯತ್ನಕ್ಕೆ ಸಂಕೇತವಾಗಿರುತ್ತವೆ, ಆ ಪ್ರಯತ್ನಗಳೆಲ್ಲಾ ಯಾವಾಗಲೂ ಸೋತು ಹೋಗುವದಕ್ಕೇ ನೇಮಿಸಲ್ಪಟ್ಟಿರುತ್ತವೆ. Burton Coffmanನು ಹೀಗೆ ಬರೆದನು, "ಇಲ್ಲಿ ಯಾವದೇ ವಿಧವಾದ ಯುದ್ಧದ ಕುರಿತು ಪ್ರಸ್ತಾಪಿಸಲಾಗಿರುವದಿಲ್ಲ ಎಂಬುದನ್ನು ಗಮನಿಸಿರಿ."[29] James Efirdನು ಅದೇ

ಅಭಿಪ್ರಾಯವನ್ನು ತಿಳಿಸುತ್ತಾನೆ:

> ಚಕ್ರದಲ್ಲಿನ ಈ ಪಾತ್ರೆಯಲ್ಲಿರುವ ಅರ್ಮಗೆದ್ದೋನಿನ ಬಣ್ಣನೆಯ ಕುರಿತಾದ ಆಸಕ್ತಿಕರ ಅಂಶವು ಏನೆಂದರೆ ಯಾವ ಯುದ್ಧವೂ ಮಾಡಲ್ಪಡಲಿಲ್ಲ. ಅವರು ಯುದ್ಧಕ್ಕಾಗಿ ಒಂದುಗೂಡಿದರು, ಆದರೆ ದೇವರು ಮಧ್ಯಪ್ರವೇಶಿಸಿದನು (ಒಂದು ವೈಶಿಷ್ಟ್ಯವಾದ ಅಂತ್ಯಕಾಲಿಕ ಶೈಲಿಯಲ್ಲಿ) ಮತ್ತು ದೇವರ ಜನರ ವೈರಿಗಳನ್ನು ಒಂದು ಯುದ್ಧವಿಲ್ಲದೆಯೇ ನಾಶಗೊಳಿಸುತ್ತಾನೆ.[30]

ಅಕ್ಷರಶಃ ವಾದಿಗಳ ನಾಟಕೀಯ ದೃಶ್ಯಾವಳಿಯಂತಲ್ಲದೆ, ಮಾನವರ ಯಾವ ಸೈನ್ಯಗಳು ಸಹ ಯುದ್ಧದಲ್ಲಿ ಮುಖಾಮುಖಾಗಿ ಎದುರುಗೊಳ್ಳಲಿಲ್ಲ, ಮತ್ತು ಯಾವದೇ ಗುಂಡು ಹಾರಿಸಲ್ಪಡಲಿಲ್ಲ. ಬದಲಾಗಿ, ದುಷ್ಟಶಕ್ತಿಗಳೆಲ್ಲಾ ಒಂದಾಗಿ ಕೂಡಿಕೊಂಡ ಮೇಲೆ, ದೇವರು ನಡುವೆ ಬಂದನು ಮತ್ತು ಅವರ ಮೇಲೆ ಆತನ ರೌದ್ರವು ಬಿದ್ದಿತು, ಅದು ಮಿಂಚುಗಳೂ ವಾಣಿಗಳೂ ಗುಡುಗುಗಳೂ ಇವುಗಳಿಂದ ಸಂಕೇತಿಸಲ್ಪಟ್ಟಿರುತ್ತದೆ (ವಚನಗಳು 18, 21). ಇಡೀ ಘಟನೆಯು ಆರಂಭಗೊಳ್ಳುವದಕ್ಕೆ ಮುನ್ನವೇ ಅಂತ್ಯಗೊಳಿಸಲ್ಪಟ್ಟಿತ್ತು.

ವಾಚಕನು "ಯುದ್ಧ"ದ ಇತರ ಎರಡು ಆವೃತ್ತಿಗಳನ್ನೊಮ್ಮೆ ಮುಂದಾಗಿ ಕಣ್ಣಾಡಿಸುವದಾದರೆ, ಪ್ರತಿಯೊಂದು ಘಟನೆಯಲ್ಲಿಯೂ ಅದೇ ಸಂಗತಿಯು ನಡೆಯಿತೆಂಬುದನ್ನು ಕಾಣುವನು. 19ನೇ ಅಧ್ಯಾಯದಲ್ಲಿ ಯೋಹಾನನು ಹೀಗೆ ಹೇಳುತ್ತಾನೆ, "ತರುವಾಯ ಆ ಮೊದಲನೆಯ ಮೃಗವೂ ಭೂರಾಜರೂ ಅವರ ಸೈನ್ಯಗಳವರೂ ಆ ಕುದುರೆಯ ಮೇಲೆ ಕೂತಿದ್ದವನ [ಯೇಸು] ಮೇಲೆಯೂ ಆತನ ಸೈನ್ಯದ ಮೇಲೆಯೂ ಯುದ್ಧಮಾಡುವದಕ್ಕಾಗಿ [ಅಕ್ಷರಶಃ, 'ಯುದ್ಧ'] ಕೂಡಿ ಬಂದಿರುವದನ್ನು ಕಂಡೆನು" (19:19). ಹೇಗೂ, ಯುದ್ಧದ ಯಾವ ವಿವರಣೆಯೂ ಕೊಡಲ್ಪಟ್ಟಿರುವದಿಲ್ಲ. ಬದಲಾಗಿ, ಮೃಗವು "ಸೆರೆಸಿಕ್ಕಿತು," ಅದರ ಜೊತೆಗೆ ಸುಳ್ಳುಪ್ರವಾದಿಯೂ ಸೆರೆಸಿಕ್ಕನು, ಮತ್ತು ಇಬ್ಬರೂ "ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು" (19:20), ಅದೇ ವೇಳೆಯಲ್ಲಿ ಅವರ ಹಿಂಬಾಲಕರು ಪಕ್ಷಿಗಳಿಗೆ ಆಹಾರವಾದರು (19:21; ನೋಡಿರಿ 19:17, 18). 20ನೇ ಅಧ್ಯಾಯದಲ್ಲಿ ಸೈತಾನನು "… ಜನಾಂಗಗಳನ್ನು ಮರುಳುಗೊಳಿಸಿ ಅವರನ್ನು ಯುದ್ಧಕ್ಕೆ [ಯುದ್ಧ] ಕೂಡಿಸುವ"ದಕ್ಕೆ ಹೊರಟನು (20:8), ಆದರೆ ಸೈತಾನನು ಏರ್ಪಡಿಸಿಕೊಂಡ ಸೈನ್ಯವು ದೇವಜನರ ಪಾಳೆಯವನ್ನು ಸುತ್ತುವರೆದ ತಕ್ಷಣವೇ, "ಪರಲೋಕದಿಂದ ಬೆಂಕಿ ಇಳಿದು ಬಂದು ಅವರನ್ನು ದಹಿಸಿಬಿಟ್ಟಿತು" (20:9) ಮತ್ತು "ಸೈತಾನನು ಬೆಂಕಿ ಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು" (20:10). ಅಲ್ಲಿ ಯುದ್ಧವೇ ನಡೆಯಲಿಲ್ಲ.

Homer Haileyನು ಹೀಗೆ ಬರೆದನು, "ಮುಂದೆ ಭವಿಷ್ಯದಲ್ಲಿ ಯಾವದೋ ಒಂದು ದಿನದಂದು ಉತ್ತರ ಫಿಲಿಷ್ಟಿಯದಲ್ಲಿ ಮಾನವ ಸೈನ್ಯಗಳ ನಡುವೆ ಒಂದು ದೈಹಿಕವಾದ ಮಿಲಿಟರಿ ಕದನವು ನಡೆಯುತ್ತದೆಂಬುದಾಗಿ ಎದುರುನೋಡುವದು ಸಂಪೂರ್ಣವಾಗಿ ಶಾಸ್ತ್ರಗಳ ಆಧಾರವಿಲ್ಲದ್ದು ಮತ್ತು ಪ್ರಕಟನೆ ಪುಸ್ತಕದ ಉದ್ದೇಶಕ್ಕೆ ಪರಿಚಿತವಾದದ್ದು ಆಗಿದೆ."[31] Coffmanನು ಇದಕ್ಕೆ ಸಹಮತವನ್ನು ವ್ಯಕ್ತಪಡಿಸಿ ಹೀಗೆ ಹೇಳುತ್ತಾನೆ: "ಈ 'ಅರ್ಮಗೆದ್ದೋನ್ ಯುದ್ಧ' ಎಂದು ಕರೆಯಲ್ಪಡುವ ಯುದ್ಧವು ಭೂಲೋಕದ ಒಂದು ರಣರಂಗದಲ್ಲಿ ನಡೆಯುವ ಬೃಹದಾಕಾರದ ಅಂತಿಮ ಮುಖಾಮುಖಿಯಾಗಿರುತ್ತದೆ ಎಂಬ … ಇಡೀ ಭಾವನೆ ಸಂಪೂರ್ಣ ತಾರ್ಕಿಕತೆಯಿಲ್ಲದ್ದು, ವಿವೇಚನೆಯಿಲ್ಲದ ಕಲ್ಪನೆ, ಹಾಗೂ ಕ್ರಿಸ್ತನ ಇಡೀ ಉಪದೇಶಕ್ಕೆ ತದ್ವಿರುದ್ಧವಾದದ್ದು ಆಗಿದೆ."[32] Ray Summersನು ಅದಕ್ಕೆ ಸೇರಿಸಿ ಹೇಳಿದ್ದೇನೆಂದರೆ, "ಒಬ್ಬನು ಇದನ್ನು ಅಕ್ಷರಶಃವಾದ, ಭೌತಿಕ ಯುದ್ಧವಾಗಿರಲಿದೆ ಎಂದು ನಿರೀಕ್ಷಿಸುವದಾದರೆ, ಆತನು

ಸೈನ್ಯವನ್ನು ಮೂರು ಕಪ್ಪೆಗಳ ಸಮಿತಿಯಿಂದ ಮುಂದಾಳತ್ವ ವಹಿಸಿಕೊಂಡದ್ದು ಎಂಬುದನ್ನು ನಿರೀಕ್ಷಿಸತಕ್ಕದ್ದು."[33]

ಭವಿಷ್ಯದಲ್ಲಿ ಎಷ್ಟೋ ಶತಮಾನಗಳ ಬಳಿಕ ನಡೆಯಲಿದ್ದ ಯುದ್ಧದ ಕುರಿತು ಕೇಳಿಸಿಕೊಳ್ಳುವ ಮೂಲಕ ಪ್ರಥಮ ಶತಮಾನದ ಕ್ರೈಸ್ತರಿಗೆ ಯಾವ ಆದರಣೆ ಅಥವಾ ಪ್ರೋತ್ಸಾಹವು ಉಂಟಾಗಿದ್ದಿರಲು ಸಾಧ್ಯ? ಸ್ಪಷ್ಟವಾಗಿರುವ ಉತ್ತರವೆಂದರೆ "ಯಾವ ಪ್ರೋತ್ಸಾಹವೂ ಇಲ್ಲ." ಯೋಹಾನನ ವಾಚಕರಿಗೆ *ಅವರ* ವೈರಿಗಳು ಕರ್ತನಿಂದ ಸೋಲಿಸಲ್ಪಡುವದು ಕೇಳಿಸಿಕೊಳ್ಳುವದು ಅಗತ್ಯವಿತ್ತು - ಮತ್ತು ಪ್ರಕಟನೆ 16ನೇ ಅಧ್ಯಾಯವು *ಅದನ್ನೇ* ಅವರಿಗೆ ಭರವಸ ನೀಡುತ್ತದೆ. 16ನೇ ಅಧ್ಯಾಯವು ಇಂದಿನ ಕ್ರೈಸ್ತರಿಗೆ ಅವರ ವಿರೋಧಿಗಳು ಕರ್ತನಿಂದ ಸೋಲಿಸಲ್ಪಡುವರು ಎಂಬ ಅದೇ ಭರವಸವನ್ನು ನೀಡುತ್ತದೆ.

## ಏಳನೆಯ ಪಾತ್ರೆ (16:17-21)

**17ಏಳನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ವಾಯುಮಂಡಲದ ಮೇಲೆ ಹೊಯ್ಯಲು ದೇವಾಲಯದಲ್ಲಿರುವ ಸಿಂಹಾಸನದ ಕಡೆಯಿಂದ ಮಹಾ ಶಬ್ದವು ಉಂಟಾಗಿ - ಆಯಿತು ಎಂದು ಹೇಳಿತು. 18ಆಗ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಉಂಟಾದವು; ಇದಲ್ಲದೆ ಮಹಾ ಭೂಕಂಪವಾಯಿತು; ಮನುಷ್ಯರು ಭೂಮಿಯ ಮೇಲೆ ಇದ್ದಂದಿನಿಂದ ಅಂಥ ದೊಡ್ಡ ಭೂಕಂಪವಾಗಲಿಲ್ಲ. 19ಮಹಾ ಪಟ್ಟಣವು ಮೂರು ಭಾಗವಾಯಿತು; ಜನಾಂಗಗಳ ಪಟ್ಟಣಗಳು ಬಿದ್ದವು. ಇದಲ್ಲದೆ ದೇವರು ದೊಡ್ಡ ಬಾಬೆಲನ್ನು ಜ್ಞಾಪಿಸಿಕೊಂಡು ತನ್ನ ಉಗ್ರಕೋಪವೆಂಬ ದ್ರಾಕ್ಷಾರಸದ ಪಾತ್ರೆಯನ್ನು ಅವಳಿಗೆ ಕುಡಿಯಲು ಕೊಟ್ಟನು. 20ಆಗ ದ್ವೀಪಗಳೆಲ್ಲಾ ಓಡಿಹೋದವು; ಬೆಟ್ಟಗಳು ಸಿಕ್ಕದೆ ಹೋದವು. 21ಮತ್ತು ಆಕಾಶದಿಂದ ಮನುಷ್ಯರ ಮೇಲೆ ದೊಡ್ಡ ಆನೇಕಲ್ಲಿನ ಮಳೆ ಸುರಿಯಿತು; ಒಂದೊಂದು ಕಲ್ಲು ಹೆಚ್ಚುಕಡಿಮೆ ನಾಲ್ಕುಮಣ ತೂಕವಾಗಿತ್ತು. ಆ ಆನೇಕಲ್ಲಿನ ಮಳೆಯ ಕಾಟವು ಬಹಳ ಹೆಚ್ಚಾಗಿದ್ದದರಿಂದ ಆ ಮಳೆಯಲ್ಲಿ ಸಿಕ್ಕಿಕೊಂಡ ಮನುಷ್ಯರು ದೇವರನ್ನು ದೂಷಿಸಿದರು.**

**ವಚನ 17.** ದುಷ್ಟ ಶಕ್ತಿಗಳು ತಮಗೆ ಗೆಲ್ಲಲು ಸಾಧ್ಯವಿಲ್ಲದಂಥ ಸ್ಥಳವೊಂದರಲ್ಲಿ (ಹರ್ಮಗೆದೋನ್) ಒಟ್ಟುಗೂಡಿಸಲ್ಪಟ್ಟವು ಎಂದು ಘೋಷಿಸಿದ ಬಳಿಕ, ಈಗ ಏಳನೆಯ ದೇವದೂತನು ತನ್ನ ಪಾತ್ರೆಯನ್ನು ಸುರಿಸುವ ಸಮಯವು ಬಂದಿತ್ತು: **ಏಳನೆಯವನು ತನ್ನ ಪಾತ್ರೆಯಲ್ಲಿದ್ದದ್ದನ್ನು ವಾಯುಮಂಡಲದ ಮೇಲೆ ಹೊಯ್ಯಲು.**

ಕೆಲವೊಬ್ಬ ಲೇಖಕರು ಪಾತ್ರೆಯು **ವಾಯುಮಂಡಲದ** ಮೇಲೆ ಸುರಿಸಲ್ಪಟ್ಟಿತು ಎಂಬ ವಾಸ್ತವಾಂಶದಲ್ಲಿ ಒಂದು ಮಹತ್ವಪೂರ್ಣತೆಯನ್ನು ಕಾಣುತ್ತಾರೆ. ಜನರು ಉಸಿರಾಡುವ ಗಾಳಿಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತಾರೆ. ನೀರು ರಕ್ತವಾಗಿ ಮಾರ್ಪಟ್ಟಾಗ (ಎರಡನೆಯ ಹಾಗೂ ಮೂರನೆಯ ಪಾತ್ರೆಗಳು), ಅದು ಕೆಟ್ಟದ್ದಾಗಿತ್ತು, ಯಾಕೆಂದರೆ ಮನುಷ್ಯನು ನೀರಿಲ್ಲದೆ ಕೆಲವು ದಿನಗಳ ಕಾಲ ಬದುಕಬಲ್ಲನು; ಇನ್ನೊಂದೆಡೆ, ಮನುಷ್ಯನು ಗಾಳಿಯಿಲ್ಲದೆ ಕೆಲವೇ *ನಿಮಿಷಗಳ* ಕಾಲವಷ್ಟೆ ಬದುಕಬಲ್ಲನು. "ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿ" ಎಂದು (ಎಫೆಸ 2:2) ಕರೆಯಲ್ಪಡುವ ಸೈತಾನನ ಮೇಲೆ ನೇರವಾದ ದಾಳಿಯನ್ನು ನಡಿಸುವದಾಗಿ ಏಳನೆಯ ಪಾತ್ರೆಯು "ವಾಯುಮಂಡಲ"ದ ಮೇಲೆ ಗುರಿಯಿಟ್ಟು ಸುರಿಸಲ್ಪಟ್ಟಿತು ಎಂದು ಇನ್ನು ಕೆಲವರು ನಂಬುತ್ತಾರೆ. ಆ ಪದಕ್ಕೆ ಯಾವದೇ ಮಹತ್ವದ ಅರ್ಥವೂ ಇಲ್ಲದಿರಬಹುದು: ಪಾತ್ರೆಯು ವಾತಾವರಣ ಎಂದು ಕರೆಯಲ್ಪಡುವದರ ಮೇಲೆ

ಸುರಿಸಲ್ಪಟ್ಟಿತು, ಮತ್ತು ಹೀಗೆ "ಎಲ್ಲೆಡೆಯೂ, ಸುರಕ್ಷತೆಯ ಯಾವ ಮೂಲೆಯಾಗಲಿ ಅಥವಾ ಸಂದುಗಳಾಗಲಿ ಸಿಕ್ಕದಂತೆ ದೇವರ ರೌದ್ರವು ಮನುಷ್ಯರ ಮೇಲೆ ತೇಲಾಡು[ತ್ತಿತ್ತು]."[34]

ಅದು ಸಂಭವಿಸಿದಾಗ, **ದೇವಾಲಯದಲ್ಲಿರುವ ಸಿಂಹಾಸನದ ಕಡೆಯಿಂದ ಮಹಾ ಶಬ್ದವು ಉಂಟಾಗಿ - ಆಯಿತು ಎಂದು ಹೇಳಿತು. ದೇವಾಲಯದಲ್ಲಿರುವ ಸಿಂಹಾಸನ** ಎಂಬ ಪದಗುಚ್ಛವು ಪರಲೋಕದಲ್ಲಿ "ದೇವಾಲಯ" ಎಂದರೆ ದೇವರ "ಸಿಂಹಾಸನ ಕೋಣೆ"ಯೇ ಆಗಿದೆ ಎಂದು ವಾಚಕನಿಗೆ ತಿಳಿಯಪಡಿಸುತ್ತದೆ. ಮೃಗದ ಸಿಂಹಾಸನವು ಕಾರ್ಯನಡಿಸುವದಕ್ಕೆ ಸಾಧ್ಯವಿಲ್ಲದ್ದಾಗಿ ಮಾಡಲ್ಪಟ್ಟಿತ್ತು (16:10), ಆದರೆ ದೇವರ ಸಿಂಹಾಸನವು ಈಗಲೂ - ಶಕ್ತಿಶಾಲಿಯಾಗಿ - ಕಾರ್ಯವನ್ನು ನಿರ್ವಹಿಸುತ್ತಿತ್ತು. 1ನೇ ವಚನದಲ್ಲಿರುವ ಪ್ರಕಾರವೇ, ಶಬ್ದವು ದೇವರಿಂದ ಬಂದಿರಬಹುದಾಗಿದೆ (ವ. 1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಆಯಿತು** ಎಂಬುದು ಗ್ರೀಕ್ ಭಾಷೆಯ γέγονεν (*gegonen*, ಇದು γίνομαι, *ginomai* ಎಂಬದರಿಂದ ಬಂದದ್ದು) ಎಂಬ ಪದದ ಅನುವಾದವಾಗಿದೆ. ಇದು ಸಂಪೂರ್ಣವಾಚಿ ಕಾಲರೂಪದಲ್ಲಿದ್ದು ಪೂರ್ಣಗೊಂಡ ಕ್ರಿಯೆಯನ್ನು ಸೂಚಿಸುತ್ತದೆ. ಸಂಪೂರ್ಣವಾಚಿ ಕಾಲರೂಪವು ಮುಂಚಿನ ಕ್ರಿಯೆಯ ಆಧಾರವಾದ ವರ್ತಮಾನದ ಫಲಿತಾಂಶದ ಕಡೆಗೆ ಗಮನವನ್ನು ಸೆಳೆಯುತ್ತದೆ. ದೇವರು ತಾನು ಏನನ್ನು ಮಾಡುವದಕ್ಕೆ ಕೈಹಾಕಿದ್ದನೋ ಅದನ್ನು ನೆರವೇರಿಸಿ ಬಿಟ್ಟಿದ್ದನು. ಪ್ರಕಟನೆ ಪುಸ್ತಕದಲ್ಲಿ ಆರು ಅಧ್ಯಾಯಗಳು ಬಾಕಿ ಇರುತ್ತವೆ, ಆದರೆ ಪುಸ್ತಕದ ಬಹುಪಾಲು ಉಳಿದ ಭಾಗವೆಲ್ಲಾ ಮೂಲಭೂತವಾಗಿ 16ನೇ ಅಧ್ಯಾಯದ ವಿಸ್ತರಣೆ ಹಾಗೂ ವಿವರಣೆ ಆಗಿರುತ್ತದೆ.

**ವಚನ 18.** ದೈವಿಕ ತೀರ್ಪು ಘೋಷಣೆ ಬಳಿಕ ದೈವಿಕ ಶಕ್ತಿಯ ಒಂದು ಪ್ರದರ್ಶನವು ಸಂಭವಿಸುತ್ತದೆ (ನೋಡಿರಿ 4:5; 6:12; 8:5; 11:19). **ಆಗ ಮಿಂಚುಗಳೂ ವಾಣಿಗಳೂ ಗುಡುಗುಗಳೂ ಉಂಟಾದವು; ಇದಲ್ಲದೆ ಮಹಾ ಭೂಕಂಪವಾಯಿತು; ಮನುಷ್ಯರು ಭೂಮಿಯ ಮೇಲೆ ಇದ್ದಂದಿನಿಂದ ಅಂಥ ದೊಡ್ಡ ಭೂಕಂಪವಾಗಲಿಲ್ಲ.** Haileyನು ಹೀಗೆ ವ್ಯಾಖ್ಯೆ ನೀಡುತ್ತಾನೆ, "ರೋಮನ್ ಸಾಮ್ರಾಜ್ಯಕ್ಕಿಂತ ... ದೊಡ್ಡದಾದ ಮಂಡಲವು ಹಿಂದೆಂದಿಗೂ ಇದ್ದಿರಲಿಲ್ಲವಾದ್ದರಿಂದ, ಅದು ಬಿದ್ದು ಹೋದಾಗ ಆದಂಥ ಭೂಕಂಪನಕ್ಕಿಂತಲೂ ದೊಡ್ಡದ ಕಂಪನ ಇನ್ನೊಂದಿರಲಿಲ್ಲ."[35]

**ವಚನ 19.** ಭೂಕಂಪದ ನಿರ್ದಿಷ್ಟವಾದ ಗುರಿಯು ಮಹಾ ಬಾಬೆಲ ನಗರಿಯಾಗಿತ್ತು, ಅದು ಮುಂದಿನ ಅಧ್ಯಾಯದಲ್ಲಿ ರೋಮ್ ನಗರವೆಂದು ಗುರುತಿಸಲ್ಪಟ್ಟಿರುವಂತೆ ಕಾಣಿಸುತ್ತದೆ (ನೋಡಿರಿ 17:9, 18). ಕೆಲವರು ಬಾಬೆಲನ್ನು ಯೆರೂಸಲೇಮ್ ಎಂದು ಗುರುತಿಸುತ್ತಾರೆ ಮತ್ತು ಚಿತ್ರಿಸಲ್ಪಟ್ಟಿರುವ ನಾಶನವು ಕ್ರಿ.ಶ. 70ರಲ್ಲಾದ ನಗರದ ನಾಶನವನ್ನು ಸೂಚಿಸುತ್ತದೆಂದು ಯೋಚಿಸುತ್ತಾರೆ. ಇವೆರಡರಲ್ಲಿ ಹೇಗಿದ್ದರೂ ಸರಿಯೇ, ಪಾಪದ ಪರಿಣಾಮಗಳಿಂದ ಯಾವ ಪಟ್ಟಣವಾಗಲಿ, ಯಾವ ದೇಶವಾಗಲಿ, ಮತ್ತು ಯಾವ ವ್ಯಕ್ತಿಯಾಗಲಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದಾಗಿ ಈ ವಾಕ್ಯಭಾಗವು ಕಲಿಸುತ್ತದೆ. ಬಾಬೆಲಿನ ಬೀಳುವಿಕೆ 14:8ರಲ್ಲಿ ಪ್ರಕಟಿಸಲ್ಪಟ್ಟಿತ್ತು; ಇಲ್ಲಿ ಆ ಬೀಳುವಿಕೆಯ ಕುರಿತು ಕ್ಲುಪ್ತವಾದ ಬಣ್ಣನೆಯು ಇರುತ್ತದೆ, ಅದು ಈ ಮಾತುಗಳಿಂದ ಆರಂಭಗೊಳ್ಳುತ್ತದೆ **ಮಹಾ ಪಟ್ಟಣವು ಮೂರು ಭಾಗವಾಯಿತು.** "ಮೂರು" ದೈವತ್ವದ ಸಂಖ್ಯೆಯಾಗಿದೆ. **ಮೂರು ಭಾಗವಾಯಿತು** ಎಂಬುದು ದೈವಿಕ ನ್ಯಾಯತೀರ್ಪನ್ನು ಸೂಚಿಸುತ್ತದೆ. ಈ ಪದಗುಚ್ಛವು *ಸಂಪೂರ್ಣ* ನಾಶನವನ್ನು ಸಹ ಸೂಚಿಸಬಹುದಾಗಿದೆ.

ರೋಮ್ ನಗರವು ಬೇರೆಯವರಿಗೆ ಬಾಧೆಯನ್ನುಂಟು ಮಾಡದೆಯೇ ಬೀಳುವದಕ್ಕಾಗಲಿಲ್ಲ. ರೋಮನ್ ನಗರವು ಲೋಕದ ಯಜಮಾನಿ ಆಗಿದ್ದಳು; ಬಹುಪಾಲು ಗಂಡಸರ ಭವಿಷ್ಯವು

ಅವಳೊಂದಿಗೆ ಸಂಬಂಧ ಹೊಂದಿತ್ತು. ಹೀಗಿರುವದರಿಂದ ಬಾಬೆಲ ಬಿದ್ದು ಹೋದ ವೇಳೆ **ಜನಾಂಗಗಳ ಪಟ್ಟಣಗಳು** ಸಹ **ಬಿದ್ದವು.**

ದೇವರ ಈ ರೌದ್ರವು ಸುರಿಸಲ್ಪಡುವಂತೆ ಕಾರಣವಾದದ್ದು ಏನು? ಬಾಬಲೆ ಹಾಗೂ ಆಕೆಯ ಗಂಡಂದಿರು ದೇವರನ್ನು ಒಪ್ಪಿಕೊಂಡು ಆತನಿಗೆ ಮಹಿಮೆಯನ್ನು ಸಲ್ಲಿಸುವದಕ್ಕೆ ನಿರಾಕರಿಸಿದ್ದರು. ಆದದರಿಂದ, **ದೇವರು ದೊಡ್ಡ ಬಾಬೆಲನ್ನು ಜ್ಞಾಪಿಸಿಕೊಂಡು ತನ್ನ ಉಗ್ರಕೋಪವೆಂಬ ದ್ರಾಕ್ಷಾರಸದ ಪಾತ್ರೆಯನ್ನು ಅವಳಿಗೆ ಕುಡಿಯಲು ಕೊಟ್ಟನು.** Morrisನು ಹೀಗೆ ಬರೆದನು,

> ಈ ಪುಸ್ತಕದಲ್ಲಿ ಬೇರೆ ಎಲ್ಲಿಯೂ *ದೇವರ ಕೋಪವೆಂಬ ಏನೂ ಬೆರಸದ ದ್ರಾಕ್ಷಾರಸ ತುಂಬಿದ ಪಾತ್ರೆ* (ನೋಡಿರಿ NIV) ಎಂಬ ಭಾವಾನುದಕ್ಕಿಂತಲೂ ಹೆಚ್ಚು ಒತ್ತಿ ಹೇಳಲ್ಪಟ್ಟಿರುವಿಕೆಯು ಇರುವದಿಲ್ಲ. ಬಾಬೆಲ ಸರ್ವಶಕ್ತ ಹಾಗೂ ಸರ್ವ-ಪರಿಶುದ್ಧನಾದ ದೇವರಿಂದ ಕಲ್ಪಿಸಿಕೊಳ್ಳಬಹುದಾದ ಪೂರ್ಣ ಹೃದಯದ ವಿರೋಧವನ್ನು ಬಾಬೆಲ್ ಪಡೆದುಕೊಳ್ಳಲಿತ್ತು ಎಂಬ ವಿಷಯವನ್ನು ಸಂಶಯಿಸುವದಕ್ಕೆ ನಮಗೆ ಯೋಹಾನನು ಯಾವ ಅವಕಾಶವನ್ನೂ ಬಿಟ್ಟು ಕೊಡುವದಿಲ್ಲ.[36]

**ವಚನ 20.** ದೇವರ ಶಕ್ತಿಯ ಇನ್ನೊಂದು ತೋರ್ಪಡುವಿಕೆಯು ಏನೆಂದರೆ **ದ್ವೀಪಗಳೆಲ್ಲಾ ಓಡಿಹೋದವು; ಬೆಟ್ಟಗಳು ಸಿಕ್ಕದೆ ಹೋದವು** (ನೋಡಿರಿ 6:14).

**ವಚನ 21.** 21ನೇ ವಚನದಲ್ಲಿನ ಸಾಂಕೇತಿಕತೆಯು 18 ಮತ್ತು 20 ವಚನಗಳಲ್ಲಿರುವ ಸಂಕೇತದೊಂದಿಗೆ ಸಾಮ್ಯತೆ ಹೊಂದಿದೆ, ಆದರೆ ಅದು ಪ್ರಕಟನೆ ಪುಸ್ತಕದಲ್ಲಿ ಈ ಮುಂಚೆ ಕಂಡು ಬರದ ಚಿತ್ರಣವನ್ನು ಬಳಸುತ್ತದೆ - ಐಗುಪ್ತ್ಯದೇಶದಲ್ಲಾದ ಏಳನೆಯ ಉಪದ್ರವವನ್ನು ಸೂಚಿಸುವಂಥ ಚಿತ್ರಣ (ವಿಮೋಚನಕಾಂಡ 9:18-35). **ಆಕಾಶದಿಂದ ಮನುಷ್ಯರ ಮೇಲೆ ದೊಡ್ಡ ಆನೇಕಲ್ಲಿನ ಮಳೆ ಸುರಿಯಿತು; ಒಂದೊಂದು ಕಲ್ಲು ಹೆಚ್ಚುಕಡಿಮೆ ನಾಲ್ಕುಮಣ ತೂಕವಾಗಿತ್ತು. ಒಂದೊಂದು ಕಲ್ಲು ಹೆಚ್ಚುಕಡಿಮೆ ನಾಲ್ಕುಮಣ** ಎಂಬದು ταλαντιαία (*talantiaia*) ಎಂಬ ಗ್ರೀಕ್ ಪದವನ್ನು ಆಧುನೀಕರಿಸುತ್ತದೆ, ಅದರರ್ಥವು "ಒಂದು ತಲಾಂತು ತೂಕದ" (ನೋಡಿರಿ KJV) ಎಂದಾಗಿದೆ. ತಲಾಂತುಗಳ ತೂಕದಲ್ಲಿ ವ್ಯತ್ಯಾಸಗಳಿರುತ್ತಿದ್ದವಾದ್ದರಿಂದ, ದರ್ಶನದಲ್ಲಿ ಕಾಣುವ ಆನೆಕಲ್ಲುಗಳ ನಿಖರವಾದ ಭಾರವೆಷ್ಟೆಂಬುದನ್ನು ತಿಳಿದುಕೊಳ್ಳುವದಕ್ಕೆ ಸಾಧ್ಯವಿರುವದಿಲ್ಲ. ಅಂದಾಜು ಲೆಕ್ಕಾಚಾರಗಳು 60ರಿಂದ 125 ಪೌಂಡುಗಳ ನಡುವೆ ಇರುತ್ತವೆ. "ಒಂದು ನೂರು ಪೌಂಡುಗಳು" ವಿಷಯವನ್ನು ಸ್ಪಷ್ಟಗೊಳಿಸುತ್ತದೆ. ಕೆಲವು ಜನರು ಗಲ್ಫ್ ಚೆಂಡು ಗಾತ್ರದ ಆನೆಕಲ್ಲನ್ನು, ಬೇಸಬಾಲ್ ಗಾತ್ರದ, ಮತ್ತು ದ್ರಾಕ್ಷೆಹಣ್ಣಿನ ಗಾತ್ರದ ಆನೆಕಲ್ಲನ್ನು ಸಹ ನೋಡಿರುತ್ತಾರೆ; ಲೋಕವು ಇದುವರೆಗೂ ಒಂದು-ನೂರು-ಪೌಂಡು ಗಾತ್ರದ ಆನೆಕಲ್ಲಿನ ಅನುಭವವನ್ನು ಮಾಡಿಯೇ ಇರುವದಿಲ್ಲ. ಕೆಲವು ವೃದ್ಧ ಜನರು ಮಂಜುಗಡ್ಡೆಯು ಒಂದು-ನೂರು-ಪೌಂಡು ಗಾತ್ರದ ಘಟಕಗಳಾಗಿ ಮಾರಲ್ಪಡುತ್ತಿದ್ದದನ್ನು ಈಗಲೂ ನೆನಪಿಸಿಕೊಳ್ಳಬಹುದಾಗಿದೆ. ಆ ಮಂಜುಗಡ್ಡೆಯ ತುಂಡುಗಳಲ್ಲೊಂದು ತನ್ನ ತಲೆಯ ಮೇಲೆ ಬೀಳುವದನ್ನು ಯಾವನೂ ಬಯಸುವದಿಲ್ಲ!

"[ಹಳೆಯ ಒಡಂಬಡಿಕೆಯಲ್ಲಿ] ದೇವರು ತನ್ನ ಜನರ ವೈರಿಗಳನ್ನು ಪದೇ ಪದೇ ಆನೆಕಲ್ಲಿನಿಂದ ದಂಡಿಸಿದನು ... ಆನೆಕಲ್ಲು ಅಂಗೀಕರಿಸಲ್ಪಟ್ಟ ದೈವಿಕ ಪ್ರತೀಕಾರದ ಯುದ್ಧಾಯುಧಗಳಲ್ಲಿ ಒಂದಾಗಿತ್ತು."[37] ವಾಚಕನು 21ನೇ ವಚನವು ಭವಿಷ್ಯದಲ್ಲಿ ಅಕ್ಷರಶಃ ಒಂದು-ನೂರು-ಪೌಂಡು ಆನೆಕಲ್ಲು ಆಕಾಶದಿಂದ ಬೀಳುವದೆಂಬುದಾಗಿ ಮುಂತಿಳಿಸುತ್ತಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳತಕ್ಕದ್ದು. ಬದಲಾಗಿ, ಪಾಪವು ದೇವರನ್ನು ಎಷ್ಟು

ವಿಪರೀತವಾಗಿ ಬೇಸರಗೊಳ್ಳುವಂತೆ ಮಾಡುತ್ತದೆಂಬುದನ್ನು ದೃಷ್ಟಾಂತಪಡಿಸುತ್ತದೆ.

ಪುನಃ, ದಂಡಿಸಲ್ಪಟ್ಟವರಿಂದ ಅದೇ ವಿಚಿತ್ರವಾದ ಪ್ರತಿಕ್ರಿಯೆಯು ಬರುತ್ತದೆ: **ಆ ಆನೇಕಲ್ಲಿನ ಮಳೆಯ ಕಾಟವು ಬಹಳ ಹೆಚ್ಚಾಗಿದ್ದದರಿಂದ ಆ ಮಳೆಯಲ್ಲಿ ಸಿಕ್ಕಿಕೊಂಡ ಮನುಷ್ಯರು ದೇವರನ್ನು ದೂಷಿಸಿದರು.** ಅವರು ಸ್ವತಃ ತಮ್ಮ ತಲೆಗಳ ಮೇಲೆ ಸಮಸ್ಯೆಯನ್ನು ಬರಮಾಡಿಕೊಂಡಿದ್ದರು (ಕೀರ್ತನೆ 7:16), ಆದರೆ ಈಗಲೂ ಅವರು ದೇವರನ್ನು ದೂಷಿಸಿದರು.

# ಅನ್ವಯಿಸುವಿಕೆ

## ನ್ಯಾಯತೀರ್ಪು (ಅಧ್ಯಾಯ 16)

ನಮ್ಮಲ್ಲಿ ಪ್ರತಿಯೊಬ್ಬರೂ 16ನೇ ಅಧ್ಯಾಯದಿಂದ ಕೆಲವೊಂದು ಪಾಠಗಳನ್ನು ಕಲಿತುಕೊಳ್ಳಬಹುದಾಗಿದೆ: (1) ನ್ಯಾಯತೀರ್ಪು ನಿಶ್ಚಿತವಾದದ್ದು. (2) ದೇವರು ಎಲ್ಲಾ ಮನುಷ್ಯರನ್ನು ತನ್ನ ಮುಂದೆ ಬರಮಾಡಿಕೊಳ್ಳುವನು ಹಾಗೂ ನಮ್ಮನ್ನು ಆತನ ಕಡೆಗೆ ತಿರುಗಿಸಿಕೊಳ್ಳುವದಕ್ಕೆ ಆತನು ಸಕಲ ಪ್ರಯತ್ನವನ್ನು ಮಾಡುವನು. (3) ನಾವು ಆತನ ಕರುಣೆಯನ್ನು ತಿರಸ್ಕರಿಸುವದನ್ನು ಮುಂದುವರೆಸುವದಾದರೆ, ನಮ್ಮ ಹೃದಯಗಳು ಕಠಿಣಗೊಳ್ಳುವವನು. (4) ಅದು ಸಂಭವಿಸುವಾಗ, ನಮಗೆ ಆತನ ರೌದ್ರವನ್ನು ಎದುರುಗೊಳ್ಳುವದನ್ನು ಬಿಟ್ಟರೆ ಬೇರೆ ಆಯ್ಕೆಯು ಇರುವದಿಲ್ಲ. ಅದು ಸಂಭವಿಸಿದಾಗ, ನಮಗೆ ಇಬ್ರಿಯ 10:31ರ ಸತ್ಯವು ತಿಳಿದು ಬರುವದು: "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು"! ಒಬ್ಬನು ಇದಕ್ಕೆ ಆಕ್ಷೇಪಣೆಯನ್ನೆತ್ತಿ, "ಆದರೆ ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವದು *ಅಷ್ಟೇನೂ* ಭಯಂಕರವಾದದ್ದಲ್ಲ" ಎಂದು ಹೇಳಬಹುದು. ಅದು ನಂಬುವಷ್ಟರ ಮಟ್ಟಿಗೆ ಭಯಂಕರವಾದದ್ದೆಂದು ನೀವು ನಂಬುವದಿಲ್ಲವಾದರೆ, ಏಳು ಪಾತ್ರೆಗಳನ್ನು ನೋಡಿರಿ.

ಈ ಅಧ್ಯಾಯದ ಮೇಲೆ ಒಂದು ಪಾಠವನ್ನು ಅಭಿವೃದ್ಧಿಪಡಿಸಿಕೊಳ್ಳಲು ಈ ಕೆಳಗಿನ ಶಿರ್ಷೀಕೆಯನ್ನು ಬಳಸಬಹುದು: "ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ" (ಇಬ್ರಿಯ 12:29); "ಆಗ ದೇವರು 'ಇನ್ನು ಸಾಕು!'" ಎಂದು ಹೇಳುವನು; "ಆಗ ದೇವರು ನ್ಯಾಯತೀರ್ಪಗೆ ಹಸಿರು ನಿಶಾನೆಯನ್ನು ತೋರಿಸುವನು"; "ಇನ್ನು ಹಿಂದಿರುಗುವದಕ್ಕೆ ಅವಕಾಶವೇ ಇರುವದಿಲ್ಲ." Batsell Barrett Baxterನಿಂದ ಸ್ಫೂರ್ತಿಯನ್ನು ತೆಗೆದುಕೊಂಡು ಹೇಳುವದಾದರೆ, ಅಂಥ ಪಾಠವನ್ನು "ದೇವರ ಬಿರುಗಾಳಿಯಿಂದ ಕೂಡಿದ ಉತ್ತರದ ದಿಕ್ಕು" ಎಂದು ಕರೆಯಬಹುದು.

## ಜ್ಞಾಪಿಸಿಕೊಳ್ಳುವದು (16:1-9)

ಮೊದಲ ನಾಲ್ಕು ಪಾತ್ರೆಗಳ ಕುರಿತಾದ ಒಂದು ಅಧ್ಯಯನವು (16:1–9) ದೇವರು ನಮ್ಮ ಪಾಪಗಳನ್ನು ಜ್ಞಾಪಿಸಿಕೊಳ್ಳುವದು ಭಯಂಕರವಾದದ್ದೆಂದು ಯಾರಲ್ಲಿಯೇ ಆಗಲಿ ಮನವರಿಕೆಯನ್ನುಂಟು ಮಾಡತಕ್ಕದ್ದು. "ಆದರೆ ನಾನು ಪಾಪಮಾಡಿದ್ದೇನಲ್ಲಾ!" ಎಂದು ನೀವು ಗೋಳಾಡುವಿರಿ. "ನನಗೆ ಯಾವ ನಿರೀಕ್ಷೆ ಇರುತ್ತದೆ?" ಪ್ರಕಟನೆ 16:9ನೇ ವಚನವನ್ನು ಇಬ್ರಿಯ 8:10–12ರೊಂದಿಗೆ ಸಮತೋಲನಗೊಳಿಸುವ ಅಗತ್ಯವಿದೆ:

> ... ನಾನು ... ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು - ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡುವೆನು, ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು; ನಾನು

ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು ... ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು, *ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ.* (ಒತ್ತಿ ಹೇಳಿದ್ದು ನನ್ನದು.)

ನ್ಯಾಯತೀರ್ಪಿನಲ್ಲಿ ದೇವರು ನಿನ್ನ ಪಾಪವನ್ನು ಜ್ಞಾಪಿಸಿಕೊಳ್ಳ*ದಿರುವಂತೆ* ಹೇಗೆ ಖಾತ್ರಿಪಡಿಸಿಕೊಳ್ಳಬಲ್ಲಿರಿ? ಮೊದಲನೆಯದಾಗಿ, ನೀನು ತಪ್ಪು ಮಾಡಿದ್ದೀ ಎಂಬುದನ್ನು ಜ್ಞಾಪಿಸಿಕೋ (ಯೆಹೆಜ್ಕೇಲ 36:31), ಮತ್ತು ನಿನ್ನ ಪಾಪಗಳಿಗಾಗಿ ಪಶ್ಚಾತ್ತಾಪ ಪಡು (ಲೂಕ 13:3). ಬಳಿಕ, ದೇವರು ನಿನಗಾಗಿ ಏನು ಮಾಡಿದ್ದಾನೆಂಬುದನ್ನು ಜ್ಞಾಪಿಸಿಕೋ (2 ತಿಮೊಥೆ 2:8), ಮತ್ತು ಆತನ ಕಡೆಗೆ ಪ್ರೀತಿ ಹಾಗೂ ನಂಬಿಕೆಯಲ್ಲಿ ತಿರುಗಿಕೋ (ಯೋಹಾನ 3:16). ನಂತರ, ಬೈಬಲ್ ಕಲಿಸುವದನ್ನು ಜ್ಞಾಪಿಸಿಕೋ (ಯೂದನು 17), ಮತ್ತು ದೀಕ್ಷಾಸ್ನಾನ ಮಾಡಿಕೊಳ್ಳುವವನಾಗಿ ಕರ್ತನಿಗೆ ವಿಧೇಯನಾಗು (ಅಪೊಸ್ತಲರ ಕೃತ್ಯಗಳು 2:38). ಅಂತಿಮವಾಗಿ, ನಂಬಿಗಸ್ತ ಕ್ರೈಸ್ತ ಜೀವಿತವನ್ನು ನಡಿಸುವನಾಗಿರು, ಆತನನ್ನು ಪ್ರೀತಿಸಿ ಸೇವೆ ಮಾಡುವದೆಂದರೆ ಏನೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡವನಾಗಿರು (ಪ್ರಕಟನೆ 2:5). ನೀನು ದೇವರ "ಜ್ಞಾಪಕದ ಪುಸ್ತಕದಲ್ಲಿ" ಇರುವಿ, ಅದು ಆತನಲ್ಲಿ ಭಯಭಕ್ತಿಯನ್ನಿಟ್ಟು ಆತನ ನಾಮಸ್ಮರಣೆ ಮಾಡುವವರ ಹೆಸರುಗಳನ್ನು ದಾಖಲಿಸಿಕೊಂಡಿರುತ್ತದೆ (ಮಲಾಕಿಯ 3:16).

ಹೀಗೆ ಹೇಳಲಾಗಿರುತ್ತದೆ ಏನೆಂದರೆ "ದೇವರಿಂದ ಓಡಿ ಹೋಗುವದಕ್ಕೆಇರುವ ಏಕೈಕ ದಾರಿಯೆಂದರೆ ಆತನ ಕಡೆಗೆ ಓಡಿ ಹೋಗುವದೇ ಆಗಿದೆ."[38] ದೇವರ ರೌದ್ರದಿಂದ ತಪ್ಪಿಸಿಕೊಂಡು ಪಲಾಯನ ಮಾಡುವದಕ್ಕೆ ಇರುವ ಏಕೈಕ ದಾರಿಯೆಂದರೆ ಆತನ ಕರುಣೆಯ ಕಡೆಗೆ ಓಡಿ ಹೋಗುವದೇ. ದೇವರು ನಿಮ್ಮನ್ನು ರಕ್ಷಿಸಬೇಕೆಂದು ಬಯಸುತ್ತಾನೆ, ಆದರೆ ನೀವು ಆತನ ಬಳಿಗೆ ನಂಬಿಕೆಯಿಂದ ಹಾಗೂ ವಿಧೇಯತೆಯಿಂದ ಬರತಕ್ಕದ್ದು.

## ಪಾಪವು ದುರ್ವಾಸನೆ ಬೀರುತ್ತದೆ (16:3)

"ಎರಡನೆಯನು ತನ್ನ ಪಾತ್ರೆಯಲ್ಲಿದ್ದದ್ದನ್ನು ಸಮುದ್ರದ ಮೇಲೆ ಹೊಯಿದ" ವೇಳೆ, ನೀರು ರಕ್ತವಾಗಿ ಮಾರ್ಪಟ್ಟಿತು ಮತ್ತು "ಸಮುದ್ರದಲ್ಲಿದ್ದ ಜೀವಜಂತುಗಳೆಲ್ಲವು ಸತ್ತುಹೋದವು" (16:3). ಈ ಪಾತ್ರೆಯು ದೇವರು ಅವಿಧೇಯ ಐಗುಪ್ತದೇಶದ ಮೇಲೆ ಕಳುಹಿಸಿ ಮೊದಲನೆಯ ಉಪದ್ರವವನ್ನು ಜ್ಞಾಪಿಸುವದಾಗಿದೆ. ಆತನ ಸೇವಕರಾದ ಮೋಶೆ ಹಾಗೂ ಆರೋನ ಮೂಲಕವಾಗಿ ದೇವರು ನೈಲ್ ನದಿಯನ್ನು ಹಾಗೂ ನೀರಿನ ಇತರ ಮೂಲಗಳನ್ನು ರಕ್ತವಾಗಿ ಮಾರ್ಪಡಿಸಿದನು. ಈ ಉಪದ್ರವದ ಫಲಿತವಾಗಿ, "ಅದರಲ್ಲಿದ್ದ ಮೀನುಗಳು ಸತ್ತುಹೋದವು; ನದಿಯು ಹೊಲಸು ನಾರಿದ್ದರಿಂದ ಐಗುಪ್ತ್ಯರು ಅದರಲ್ಲಿ ಕುಡಿಯಲಾರದೆ ಹೋದರು" (ವಿಮೋಚನಕಾಂಡ 7:21; NIV). ಕರ್ತನಿಂದ ಅಂಥ ನ್ಯಾಯತೀರ್ಪುಗಳು ಅವಿಧೇಯತೆಗೆ ಸಿಕ್ಕುವ ನ್ಯಾಯವಾದ ಪ್ರತಿಫಲವಾಗಿರುತ್ತವೆ.

ಇದನ್ನು ಸರಳವಾಗಿ ಹೇಳುವದಾದರೆ, ಪಾಪವು ದುರ್ವಾಸನೆಯುಳ್ಳದ್ದಾಗಿದೆ! ಒಂದು ಸಾರಿ ಬೋಧಕನೊಬ್ಬನು ಜನರು ಮನುಷ್ಯನ ಹಾಗೂ ದೇವರ ಕಾನೂನುಗಳಿಗೆ ಬೆಲೆಯನ್ನು ಕೊಡದಂಥ ಪಟ್ಟಣದ ಒಂದು ಭಾಗಕ್ಕೆ ಸಂದೇಶ ಕೊಡುವದಕ್ಕೆ ಆಮಂತ್ರಿಸಲ್ಪಟ್ಟನು. ಆತನು ಸುತ್ತಲು ನೋಡುತ್ತಿರುವ ವೇಳೆ, ಹೀಗೆ ಹೇಳಿಕೆಯನ್ನು ನೀಡಿದನು, "ನನಗೆ ಈ ಸ್ಥಳದಲ್ಲಿ ಪಾಪದ ವಾಸನೆ ಬರುತ್ತಿದೆ!" ಪಾಪಕ್ಕೆ ಒಂದು ವೈಶಿಷ್ಟ್ಯವಾದ ನಾತವು ಇಲ್ಲದೆ ಇರಬಹುದು, ಆದರೆ ಅದು ಭಕ್ತಿವಂತರ ಹಾಗೂ ಸ್ವತಃ ದೇವರ ಮೂಗಿನ ನಾಳಗಳಿಗೆ ಒಂದು ದುರ್ನಾತವಾಗಿರುತ್ತದೆ.

## ನ್ಯಾಯವಾದ ದಂಡನೆ (16:6)

ದೇವರ ವೈರಿಗಳು ಕ್ರೈಸ್ತರ ರಕ್ತವನ್ನು ಸುರಿಸಿಯಾದ ಬಳಿಕ ಅವರಿಗೆ ಕುಡಿಯುವದಕ್ಕೆ ರಕ್ತವು ಕೊಡಲ್ಪಡುವದು (16:6). ಈ ದಂಡನೆಯು ನಮಗೆ ತನಗಿದ್ದ ಬಂಗಾರದ ಮೇಲಿನ ವ್ಯಾಮೋಹಕ್ಕೋಸ್ಕರ ದಕ್ಷಿಣ ಅಮೆರಿಕದಲ್ಲಿದ್ದ ಇಂಕಾ ಸಾಮ್ರಾಜ್ಯವನ್ನು ನಾಶಗೊಳಿಸಿದ ಸ್ಪೇನ್ ದೇಶದ ಅನ್ವೇಷಕಾರನಾದ Francisco Pizarroನ ಕಥೆಯನ್ನು ಜ್ಞಾಪಿಸುತ್ತದೆ. ದಂತಕಥೆಯ ಪ್ರಕಾರವಾಗಿ, Pizarroನು ಕೊಲೆಗೈಯಲ್ಪಟ್ಟ ವೇಳೆ, ಆತನ ವೈರಿಗಳು ಬಂಗಾರವನ್ನು ಆತನ ಗಂಟಲಿನೊಳಗೆ ಸುರಿಯುತ್ತಾ, "ನಿನಗೆ ಚಿನ್ನ ತಾನೇ ಬೇಕಾಗಿತ್ತು; ನಿನಗೆ ಚಿನ್ನವೇ ಸಿಕ್ಕುವದು ತೆಗೆದುಕೋ!"[39] ಎಂದು ನುಡಿದರು.

## ದೇವರ ನ್ಯಾಯ (16:7)

ಸಮಯವು ಬಂದಾಗ ದೇವರು ಸಕಲ ತಪ್ಪುಗಳನ್ನು ಸರಿಪಡಿಸುವನು ಮತ್ತು ಆತನ ಜನರಿಗಾಗಿ ಪ್ರತಿದಂಡನೆಯನ್ನು ಮಾಡುವನು ಎಂಬುದು ಪ್ರಕಟನೆ ಪುಸ್ತಕದ ಮೂಲ ವಾಚಕರಿಗೆ ಪ್ರಾಮುಖ್ಯವಾಗಿತ್ತು. ಈಗಲೂ ಈ ದಿನದಲ್ಲಿ ನಮಗೆ ಜ್ಞಾಪಕದಲ್ಲಿಟ್ಟುಕೊಳ್ಳುವದಕ್ಕೆ ಪ್ರಾಮುಖ್ಯವಾಗಿರುತ್ತದೆ. McGuigganನು ಹೀಗೆ ಬರೆದನು,

> ಇದು ಮೊಳಗಿಸಲ್ಪಡಲಿ: ನ್ಯಾಯವು ಒದಗಿಸಲ್ಪಡುವದು. ಭೂಮಿಯ ಮೇಲೆ ಮಾಡಲ್ಪಡುವ ಸಕಲ ಭಕ್ತಿಹೀನತೆಗೆ, ಒಂದು ಲೆಕ್ಕ ಕೊಡುವ ದಿನ ಬರುವದು. ಅನಾಥಾಶ್ರಮದ ಮೂಲೆಗಳಲ್ಲಿ ಕೂತುಕೊಂಡು ಎಲ್ಲಿ ತಪ್ಪು ನಡೆದು ಹೋಯಿತೆಂದು ಚಕಿತಗೊಳ್ಳುತ್ತಿರುವ ಪ್ರತಿಯೊಬ್ಬ ಏಕಾಂಗಿ ಚಿಕ್ಕ ಬಾಲಕರು ಹಾಗೂ ಬಾಲಕಿಯರ ಕಣ್ಣೀರುಗಳಿಗೆಲ್ಲಾ; ಕುಡಿಕರಾದ ಉಂಡಾಡಿಗಳ ಕಾಲುಗಳ ಹಾಗೂ ಕೈಗಳಲ್ಲಿ ಗುದ್ದುಗಳನ್ನು ತಿನ್ನುತ್ತಾ ಪ್ರಜ್ಞೆಯಿಲ್ಲದೆ ಬಿದ್ದುಕೊಂಡಿರುವ ಎಲ್ಲಾ ಕಠಿಣ ಶ್ರಮಿಕರಾದ ಹೆಂಗಸರಿಗೆ ... ಅವಮಾನ ಹಾಗೂ ನಾಚಿಕೆಗಳಿಂದ ತುಂಬಿದ್ದ ಜೀವಿತಗಳನ್ನು ಹೊಂದಿರುವಂಥ ಶೋಷಣೆ ಹಾಗೂ ಬೆದರಿಕೆಗಳಿಗೆ ಒಳಗಾಗಿರುವ ಎಲ್ಲಾ ಯುವತಿಯರಿಗಾಗಿ; ಸಾಲಗಾರರೆಂಬ ತಿಮಿಂಗಲಗಳಿಂದ ಹಿಂಡುವ ಶಕ್ತಿಯಲ್ಲಿ ಸಿಲುಕಿ ಜೀವಿಸುವ ಸಕಲ ಬಡವರಿಗಾಗಿ ... [ಮದುವೆಯ ಹೊರಗೆ] ಹುಟ್ಟಿ ಅಪಕೀರ್ತಿಯಲ್ಲಿ ಪೋಷಿಸಲ್ಪಟ್ಟಿರುವ ಆ ಎಲ್ಲಾ ಮಕ್ಕಳಿಗಾಗಿ - ಇವವರಿಗೆಲ್ಲಾ, ಒಂದು ದಿನ ಬರಲಿದೆ! ಅವರಿಗೆ ನ್ಯಾಯವನ್ನು ಒದಗಿಸಲಾಗುವದು ... ದೇವರೊಬ್ಬನು ಇರುವದಾದಲ್ಲಿ, ಒಂದು ನ್ಯಾಯತೀರ್ಪಿನ ದಿನವೂ ಇರತಕ್ಕದ್ದು. ಮತ್ತು ಆ ದಿನದಲ್ಲಿ, ಯಜ್ಞವೇದಿಯು ಹೌದು ಕರ್ತನೇ ಎಂದು ಕೂಗುವದು![40]

## ದೂಷಿಸುವದು (16:10, 11)

ಕಾಲದ ಆರಂಭದಿಂದಲೂ, ಮನುಷ್ಯನು ತನ್ನ ಸಮಸ್ಯೆಗಳಿಗೆ ಬೇರೆಯವರನ್ನು ದೂಷಿಸುವದಕ್ಕೆ ಪ್ರಯತ್ನಿಸಿರುತ್ತಾನೆ: ಆದಾಮನು ತನ್ನ ಪಾಪಕ್ಕಾಗಿ ಹವ್ವಳನ್ನು ದೂಷಿಸಿದನು, ಮತ್ತು ಹವ್ವಳು ಸರ್ಪವನ್ನು ದೂಷಿಸಿದಳು (ಆದಿಕಾಂಡ 3:12, 13). ಆರೋನನು ಚಿನ್ನದ ಬಸವದೊಂದಿಗೆ ಸಿಕ್ಕಿಕೊಂಡಾಗ, ಆತನು ಜನರನ್ನು ದೂಷಿಸಿದನು (ವಿಮೋಚನಕಾಂಡ 32:22, 23). ಇಸ್ರಾಯೇಲಿನಲ್ಲಿನ ಮಳೆಯು ಬಾರದೆ ಇದ್ದಾಗ, ಅರಸನಾದ ಆಹಾಬನು ಪ್ರವಾದಿಯಾದ ಎಲೀಯನನ್ನು ದೂಷಿಸಿದನು (1 ಅರಸು 18:17).

ಆಧುನಿಕ ಕಾಲಗಳಲ್ಲಿ, ಜನರು ತಮ್ಮ ಸಮಸ್ಯೆಗಳಿಗೆ ಅವರ ಹೆತ್ತವರನ್ನು, ಸಂಗಾತಿಗಳನ್ನು, ಶಾಲೆಗಳನ್ನು, ಸಭೆಗಳನ್ನು, ಮತ್ತು ಸರ್ಕಾರವನ್ನು, ಒಟ್ಟಾರೆಯಾಗಿ ಸಮಾಜವನ್ನು, ದೇವರನ್ನು ಸಹ - ತಮ್ಮನ್ನು ಹೊರತು ಪಡಿಸಿಕೊಂಡು ಮಿಕ್ಕ

ಯಾರನ್ನಾದರೂ ಮತ್ತು ಪ್ರತಿಯೊಬ್ಬರನ್ನು - ದೂಷಿಸುತ್ತಾರೆ. ಹಾಗಿದ್ದರೂ, ನಮ್ಮ ಕೃತ್ಯಗಳಿಗೆ ನಾವೇ ಹೊಣೆಗಾರರು ಎಂಬುದಾಗಿ ಬೈಬಲ್ ಹೇಳುತ್ತದೆ: "ಪಾಪಮಾಡುವವನೇ ಸಾಯುವನು; ಮಗನು ತಂದೆಯ ದೋಷಫಲವನ್ನು ಅನುಭವಿಸನು ... ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ, ದುಷ್ಟನ ದುಷ್ಟತನದ ಫಲವು ದುಷ್ಟನದೇ" (ಯೆಹೆಜ್ಕೇಲ 18:20).

ನಾವೆಲ್ಲರೂ ನಮ್ಮ ಜೀವಿತಗಳಲ್ಲಿ ಅನೇಕ ಬೇರೆ ಬೇರೆ ವಿಧವಾದ ಕಾರಣಾಂಶಗಳಿಂದಾಗಿ ಬಾಧಿಸಲ್ಪಟ್ಟಿರುತ್ತೇವೆ, ಮತ್ತು ನಮ್ಮನ್ನು ಪೀಡಿಸುವ ಪ್ರತಿಯೊಂದು ಸಮಸ್ಯೆಗೂ ಯಾವಾಗಲೂ ವೈಯಕ್ತಿಕವಾಗಿ ನಾವೇ ಕಾರಣರಾಗಿರುವದಿಲ್ಲ. ಹೇಗೂ, ವಾಸ್ತವಾಂಶವು ಏನೆಂದರೆ, ನಮ್ಮ ದಾರಿಯಲ್ಲಿ ಬರುವಂಥ ಸಮಸ್ಯೆಗಳಿಗೆ ಹೇಗೆ *ಪ್ರತಿಕ್ರಿಯೆ* ತೋರಿಸುತ್ತೇವೆ ಎಂಬುದಕ್ಕೆ *ನಾವು* ಜವಾಬ್ದಾರರು, ಮತ್ತು ಆ ಸಮಸ್ಯೆಗಳು ನಮ್ಮ ಕೊರಳಿಗೆ ಬೀಸುವ ಕಲ್ಲುಗಳಾಗುತ್ತವೋ ಅಥವಾ ಒಂದು ಉತ್ತಮಕ್ಕಾಗಿ ನಡೆಸುವ ಮೆಟ್ಟಿಲುಗಳಾಗುತ್ತವೋ ಎಂಬುದಕ್ಕೆ *ನಾವೇ* ಜವಾಬ್ದಾರರಾಗಿರುತ್ತೇವೆ. ಜನಸಮೂಹವು "ಅಯ್ಯೋ, ನನ್ನ ಗತಿಯನ್ನು ಏನು ಹೇಳಲಿ!" ಎಂದು ಕೂಗುವದನ್ನು ನೋಡುವದು ಬೋಧಪ್ರದವಲ್ಲವೆಂದು ಹೇಳಬೇಕಷ್ಟೆ. ದೇವರಲ್ಲಿ ನಂಬಿಕೆಯನ್ನಿಟ್ಟಿರುವವನು ಆತನು "ಹಿತಕ್ಕಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲಮಾಡುವನು" (ರೋಮಾ 8:28) ಎಂದು ಬಲ್ಲವನಾಗಿರುತ್ತಾನೆ. ಆತನಿಗೆ ಇರುವ ಸವಾಲುಗಳು ಏನೇ ಆಗಿದ್ದರೂ ಸರಿಯೇ, ನಂಬಿಗಸ್ತ ಕ್ರೈಸ್ತನು ಹೀಗೆ ಹೇಳಬಲ್ಲನು, "ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" ಎಂದು ಹೇಳಬಲ್ಲನು (ಫಿಲಿಪ್ಪಿ 4:13).

ಕಡೇ ಮೂರು ಪಾತ್ರೆಗಳು ಯೆರೆಮೀಯ 25:14ರಲ್ಲಿನ ದೇವರ ಹೇಳಿಕೆಯು ಎಷ್ಟು ಸತ್ಯವಾದದ್ದೆಂಬುದನ್ನು ದೃಷ್ಟಾಂತಪಡಿಸುತ್ತವೆ: "ಅವರ ಕೃತ್ಯಗಳಿಗೂ ಕೈಕೆಲಸಗಳಿಗೂ ತಕ್ಕಂತೆ ಅವರಿಗೆ ಮುಯ್ಯಿತೀರಿಸುವೆನು." ಅನೇಕರಿಗೆ ದೇವರ ನ್ಯಾಯತೀರ್ಪುಗಳನ್ನು ಅಂಗೀಕರಿಸಿಕೊಳ್ಳುವದಕ್ಕೆ ಮನಸ್ಸಿರಲಿಲ್ಲ ಎಂಬುದನ್ನು ಸಹ ಪಾತ್ರೆಗಳು ದೃಷ್ಟಾಂತಪಡಿಸುತ್ತವೆ. ನಾವು ಅವರ ಅಸಂತುಷ್ಟಕರವಾದ ಉದಾಹರಣೆಯಿಂದ ಕಲಿತುಕೊಳ್ಳಬಹುದಾಗಿದೆ; ನಾವು ನಮ್ಮ ಕೃತ್ಯಗಳಿಗೆ ಜವಾಬ್ದಾರಿಯನ್ನು ಒಪ್ಪಿಕೊಳ್ಳುವದಕ್ಕೆ ಕಲಿತುಕೊಳ್ಳಬಹುದಾಗಿದೆ. ಒಂದು ದಿನ "ನಮ್ಮಲ್ಲಿ ಪ್ರತಿಯೊಬ್ಬನು *ತನ್ನ ತನ್ನ* ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು" (ರೋಮಾ 14:12; ಒತ್ತಿ ಹೇಳಿದ್ದು ನನ್ನದು).

ನಾವು 16ನೇ ಅಧ್ಯಾಯದಿಂದ ಬೇರೆ ಏನನ್ನೂ ಕಲಿತುಕೊಳ್ಳದಿದ್ದಾಗ್ಯೂ, ನಮ್ಮ ಸಮಸ್ಯೆಗಳಿಗೆ ದೇವರನ್ನು ದೂಷಿಸಲು ಮಾತ್ರ ಕಲಿತುಕೊಳ್ಳಕೂಡದು. ಅವುಗಳಲ್ಲಿ ಕೆಲವು ಒಂದು ಪಾಪಭರಿತ ಲೋಕದಲ್ಲಿ ಜೀವಿಸುವದರ ಫಲಿತವಾಗಿರುತ್ತವೆ (ಆದಿಕಾಂಡ 3:17-19). ಕೆಲವು ಪಾಪಭರಿತ ಜನರೊಂದಿಗೆ ಸಂಬಂಧವಿಟ್ಟುಕೊಳ್ಳಬೇಕಾದ ನಿಮಿತ್ತವಾಗಿ ಬರುವಂಥವುಗಳಾಗಿವೆ (1 ಕೊರಿಂಥ 15:33). ಇನ್ನು ಕೆಲವು ವೈಯಕ್ತಿಕವಾಗಿ ಮಾಡಿದ ಕೆಟ್ಟ ತೀರ್ಮಾನಗಳ ಫಲಿತವಾಗಿ ಸಹ ಬರಬಲ್ಲವು (ಗಲಾತ್ಯ 6:7). ನಮ್ಮ ಜೀವಿತಗಳಲ್ಲಿ ಏಕೆ ಸಮಸ್ಯೆಗಳು ತುಂಬಿಕೊಂಡರೂ ಸರಿಯೇ, ಮೂರ್ಖತನದಿಂದ ದೇವರ ಮೇಲೆ ದೋಷಾರೋಪಣೆ ಮಾಡದಿರೋಣ (ನೋಡಿರಿ ಯೋಬ 1:22; KJV). "ಯಾವನು ಒತ್ತಡದಲ್ಲಿ ಸಿಲುಕಿಕೊಂಡು ... ದೇವರು ನನ್ನನ್ನು ಮುಗ್ಗುವರಿಸುವಂತೆ ಮಾಡಲು ಪ್ರಯತ್ನಿಸುತ್ತಿದ್ದಾನೆಂದು ಹೇಳುವಂತೆ ಬಿಡಬೇಡಿರಿ. ದೇವರು ... ಯಾರ ದಾರಿಯಲ್ಲಿಯೂ ವಿಘ್ನಗಳನ್ನು ಇಡುವವನಲ್ಲ" (ಯಾಕೋಬ 1:13)[41] ಬದಲಾಗಿ, ನಮ್ಮ ಸಮಸ್ಯೆಗಳ ಮೂಲಕ ದಾಟಿಸಿಕೊಂಡು ನಡೆಸುವಂತೆ ದೇವರಲ್ಲಿ ವಿಶ್ವಾಸವನ್ನಿಡೋಣ ಮತ್ತು ಅವುಗಳಿಂದ ಕಲಿತುಕೊಳ್ಳೋಣ.

## ಅರ್ಮಗೆದ್ದೋನ್ (16:13-16)

16:13-16ರ ಮೇಲಿನ ಒಂದು ಪಾಠಕ್ಕಾಗಿ ಇರುವ ಶಿರ್ಷಿಕೆಯು "ಅರ್ಮಗೆದ್ದೋನ್‌ನ ಯುದ್ಧರಹಿತತೆ" ಅಥವಾ ಕೇವಲ "ಅರ್ಮಗೆದ್ದೋನ್!" ಎಂದಾಗಿರುವದು. ನೀವು ಒಂದು ಹೆಚ್ಚು ವೈಯಕ್ತಿಕವಾದ ಅನ್ವಯಿಕೆಯ ಕುರಿತು ಬೋಧಿಸುವದಕ್ಕೆ ಬಯಸುವದಾದರೆ, "ನೀವು ಚಿಂತೆ ಮಾಡುವ ಅಗತ್ಯವಿಲ್ಲದ - ಮತ್ತು ನೀವು ಚಿಂತೆ ಮಾಡಬೇಕಾದಂಥ - ಯುದ್ಧ" ಎಂಬುದರ ಮೇಲೆ ಬೋಧಿಸಬಹುದು. ಪ್ರಸಂಗದ ಮೊದಲ ಅರ್ಧ ಸಮಯವನ್ನು "ಅರ್ಮಗೆದ್ದೋನ್ ಯುದ್ಧ"ದ ಕುರಿತು ಮಾತನಾಡಿರಿ ಮತ್ತು ಕಡೇ ಅರ್ಧಭಾಗವನ್ನು ವ್ಯಕ್ತಿಗತ ಹೃದಯದಲ್ಲಿ ನಡೆಯುವ ಯುದ್ಧದ ಕುರಿತು ಮಾತಾಡಿರಿ. West[42] ಮತ್ತು Baldinger[43] ರು ಹೃದಯದಲ್ಲಿ ನಡೆಯುವ ಯುದ್ಧದ ಕುರಿತಾಗಿ ಕೆಲ ಅತ್ಯುತ್ತಮವಾದ ಲೇಖನಗಳನ್ನು ಬರೆದಿರುತ್ತಾರೆ.

## ಯುದ್ಧ (16:13-21)

ನೀವು ದೇವರ ನಂಬಿಗಸ್ತ ಮಗುವಾಗಿರುವದಾದರೆ, ನೀವು ಈ "ಅರ್ಮಗೆದ್ದೋನ್ ಯುದ್ಧ" ಎಂದು ಹೇಳಲ್ಪಡುವ ಯುದ್ಧದ ಬಗ್ಗೆ ಚಿಂತೆ ಮಾಡುವ ಅಗತ್ಯವಿಲ್ಲ. ಕರ್ತನು ಆ ಯುದ್ಧವನ್ನು ನೋಡಿಕೊಳ್ಳುವನು. ಇನ್ನೊಂದು ಕಡೆಯಲ್ಲಿ, ನೀವು ಕಳಕಳಿ ಹೊಂದಿರ*ಬೇಕಾದ* ಯುದ್ಧವೊಂದು ಇರುತ್ತದೆ: "... ರಾಜತ್ವಗಳ ಮೇಲೆಯೂ ಅಧಿಕಾರಿಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ" (ಎಫೆಸ 6:12). ಈ ಯುದ್ಧವು ಒಂದು "ಗುಂಡು ಮತ್ತು ಕ್ಷಿಪಣಿಗಳದ್ದಲ್ಲ, ಆದರೆ ಪ್ರಾಣ ಹಾಗೂ ಆತ್ಮಗಳ"[44] ಯುದ್ಧವಾಗಿದೆ. ಇದು "ಮಾನವ ಹೃದಯವೆಂಬ ರಣರಂಗಗಳಲ್ಲಿ ಹೋರಾಡಲ್ಪಡುವ"[45] ಯುದ್ಧವಾಗಿದೆ (ನೋಡಿರಿ ರೋಮಾ 7:21). ಇದು ಪ್ರತಿದಿನವೂ ನಾವು ಯಾರ ಚಿತ್ತವನ್ನು ಸೇವಿಸುವವರಾಗುತ್ತೇವೆಂಬುದನ್ನು ಆರಿಸಿಕೊಳ್ಳುವ ವೇಳೆ ನಡೆಯುವ ಯುದ್ಧವಾಗಿದೆ (ಯೆಹೋಶುವ 24:15). ಹೇಗೂ, ಇದು ದೇವರನ್ನು ನಮ್ಮ ಪಕ್ಷದಲ್ಲಿಟ್ಟುಕೊಂಡು ಜಯಿಸಬಹುದಾದ ಯುದ್ಧವಾಗಿದೆ "ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ" (1 ಕೊರಿಂಥ 15:57)!

ಕೆಲವು ಲೇಖಕರು ಪ್ರತಿ ವ್ಯಕ್ತಿಯು ತೊಡಗಿಸಿಕೊಂಡಿರುವ ಆತ್ಮೀಕ ಯುದ್ಧವನ್ನು "ಅರ್ಮಗೆದ್ದೋನ್" ಎಂದು ಕರೆಯುತ್ತಾರೆ. ಅವರ ಉದ್ದೇಶಗಳು ಇವುಗಳಾಗಿರುತ್ತವೆ, ಏನೆಂದರೆ (1) ಅರ್ಮಗೆದ್ದೋನ್ ಫಿಲಿಷ್ಟಿಯದಲ್ಲಿರುವ ಒಂದು ಭೂಮಿಯ ಸ್ಥಳದಲ್ಲಿ ನಡೆಯುವಂತ ಯುದ್ಧವಲ್ಲ ಎಂಬುದನ್ನು ತೋರಿಸಿ ಕೊಡುವದು; (2) ಮುಖ್ಯವಾಗಿರುವದು ಆತ್ಮೀಕ ಯುದ್ಧವೇ ಹೊರತು ಶಾರೀರಿಕ ಯುದ್ಧವಲ್ಲ ಎಂಬುದನ್ನು ಒತ್ತಿ ಹೇಳುವದು; (3) ವೈಯಕ್ತಿಕ ಅನ್ವಯಿಕೆಯೊಂದನ್ನು ಮಾಡುವದು. ಹಾಗಿದ್ದರೂ, ನಮ್ಮ ಹೋರಾಟಗಳನ್ನು "ಅರ್ಮಗೆದ್ದೋನ್" ಎಂದು ಕರೆಯುವದು ವಿಷಯವನ್ನು ಗೊಂದಲಪಡಿಸುವದಾಗಿದೆ. ಕೆಲವರು ತಮ್ಮ ಪದಗಳನ್ನು ಅರ್ಹಗೊಳಿಸುತ್ತಾರೆ ಮತ್ತು "ನಿನ್ನ ವೈಯಕ್ತಿಕ ಅರ್ಮಗೆದ್ದೋನ್" ಮತ್ತು "ಕಿರು-ಅರ್ಮಗೆದ್ದೋನ್‌ಗಳು" ಎಂಬಂತಹ ಪದಗುಚ್ಛಗಳನ್ನು ಬಳಸುತ್ತಾರೆ.

## ಕರ್ತನಿಗೋಸ್ಕರ ಸಿದ್ಧವಾಗಿರ್ರಿ (16:15)

ನಾವು ಪಶ್ಚಾತ್ತಾಪ ಪಡುವದಕ್ಕೆ ನಿರಾಕರಿಸಿದ ಆ ಜನರಂತಿರಬಾರದು. ನಮ್ಮ ಹೃದಯಗಳನ್ನು ಮೃದುವಾಗಿಟ್ಟುಕೊಳ್ಳೋಣ, ನಮ್ಮ ಹೃದಯಗಳನ್ನು ನಿರಂತರವಾಗಿ ಪರೀಕ್ಷಿಸಿಕೊಳ್ಳೋಣ (2 ಕೊರಿಂಥ 13:5). ನಾವು ಅಲ್ಲಿ ಪಾಪವನ್ನು ಕಂಡುಕೊಂಡಲ್ಲಿ,

ಪಶ್ಚಾತ್ತಾಪಪಡೋಣ ಹಾಗೂ ದೇವರ ಬಳಿಗೆ ಹಿಂದಿರುಗೋಣ (ಪ್ರಕಟನೆ 2:5, 16, 22; 3:3, 19; ನೋಡಿರಿ 9:20, 21). ನಾವು ಈ ವಿಧವಾಗಿಯೇ ಎಚ್ಚರಿಕೆಯಿಂದ ಇರುತ್ತೇವೆ. ಈ ವಿಧವಾಗಿಯೇ ನಾವು ಕರ್ತನ ಬರೋಣಕ್ಕೆ ಸಿದ್ಧರಾಗಿರುತ್ತೇವೆ (16:15).

ನೀವು ಹುರುಪಿನಿಂದ "ಕರ್ತನಾದ ಯೇಸುವೇ, ಬಾ" (22:20) ಎಂದು ಹೇಳುವದಕ್ಕೆ ಸಾಧ್ಯವಿಲ್ಲವೆಂದಾದರೆ, ಹಾಗೆ ಹೇಳುವಂತಾಗುವ ಹಾಗೆ ಏನೂ ಅಗತ್ಯವಿದೆಯೋ ಅದನ್ನು ಮಾಡಿರಿ - ಮತ್ತು ನಿಮ್ಮ ಹೃದಯವು ಕಠಿಣವಾಗಿ ಹೋಗುವದಕ್ಕೆ ಮುಂಚೆ ಇದನ್ನು ಮಾಡಿರಿ. Dr. George Sweetingನು ಹೀಗೆ ಬರೆದನು,

> ಹಲವಾರು ವರ್ಷಗಳ ಹಿಂದೆ ನಮ್ಮ ಕುಟುಂಬವು ನಯಾಗರಾ ಜಲಪಾತಕ್ಕೆ ಭೇಟಿ ಕೊಟ್ಟಿತ್ತು. ಅದು ವಸಂತಕಾಲವಾಗಿತ್ತು, ಮತ್ತು ಮಂಜುಗಡ್ಡೆಯು ನದಿಯಿಂದ ರಭಸವಾಗಿ ಹರಿದು ಬರುತ್ತಿತ್ತು. ಮಂಜುಗಡ್ಡೆಯ ದೊಡ್ಡ ತುಂಡುಗಳು ಜಲಪಾತದ ಕಡೆಗೆ ಹರಿದು ಬರುವದನ್ನು ನಾವು ನೋಡುತ್ತಿರುವ ವೇಳೆ, ಮಂಜುಗಡ್ಡೆಯೊಳಗೆ ಮೃತ ಮೀನುಗಳ ದೇಹಗಳು ಸೇರಿಕೊಂಡು ಒಂದಾಗಿದ್ದವು. ಕಡಲ ಹಕ್ಕಿಗಳು ನದಿಯುದ್ದಕ್ಕೂ ಗುಂಪಾಗಿ ಮಂಜುಗಡ್ಡೆಯ ಮೇಲೆ ಕೂತುಕೊಂಡು ಸತ್ತ ಮೀನುಗಳನ್ನು ತಿನ್ನುತ್ತಿದ್ದವು, ಜಲಪಾತದ ತುತ್ತತುದಿಗೆ ಬರುತ್ತಿದ್ದಂತೆ, ಅವುಗಳ ರೆಕ್ಕೆಗಳು ತೆರೆದುಕೊಳ್ಳುತ್ತಿದ್ದವು, ಮತ್ತು ಜಲಪಾತಗಳಿಂದ ತಪ್ಪಿಸಿಕೊಳ್ಳುತ್ತಿದ್ದವು.
>
> ನಾನು ಒಂದು ಹಕ್ಕಿಯು ಸ್ವಲ್ಪ ವಿಳಂಬ ಮಾಡುತ್ತಿರುವಂತೆ ಕಾಣಿಸುವದನ್ನು ನೋಡಿದೆ ... ಅದು ಒಂದು ಸತ್ತ ಮೀನನ್ನು ತಿನ್ನುವದರಲ್ಲಿ ತಲ್ಲೀನವಾಗಿತ್ತು, ಮತ್ತು ಅದು ಕೊನೆಗೆ ಜಲಪಾತದ ತುದಿಯ ವರೆಗೆ ಬಂದ ವೇಳೆ, ಅದರ ಶಕ್ತಿಶಾಲಿ ರೆಕ್ಕೆಗಳು ತೆರೆದುಕೊಂಡವು. ಹಕ್ಕಿಯು ರೆಕ್ಕೆಗಳನ್ನು ಬಡಿಯುತ್ತಲೇ ಇತ್ತು, ಮತ್ತು ಮಂಜುಗಡ್ಡೆಯನ್ನು ಸಹ ನೀರಿನಿಂದ ಮೇಲಕ್ಕೆ ಎತ್ತಿತ್ತು ... ಆದರೆ ಅದು ಬಹಳ ವಿಳಂಬ ಮಾಡಿತ್ತಾದ್ದರಿಂದ ಅದರ ಪಂಜರಗಳು ಮಂಜುಗಡ್ಡೆಯೊಳಗೆ ಸೇರಿ ಮಂಜುಗಡ್ಡೆಯಾಗಿ ಹೋಗಿದ್ದವು. ಮಂಜುಗಡ್ಡೆಯ ಭಾರವು ಅತ್ಯಂಥ ಅಧಿಕವಾಗಿದ್ದರಿಂದ ಹಕ್ಕಿಯು ಪ್ರಪಾತದೊಳಗೆ ಬಿದ್ದು ಹೋಯಿತು.[46]

ದೇವರಿಗೆ ವಿಧೇಯರಾಗುವದಕ್ಕಾಗಿ ಕಾಲವು ಮಿಂಚಿ ಹೋಗುವಷ್ಟರ ವರೆಗೂ ಕಾಯಬೇಡಿರಿ!

## "ದೇವರು ತಿರಸ್ಕಾರ ಸಹಿಸುವವನಲ್ಲ" (16:17-21)

16:17-21ರ ಮೇಲಿನ ಪಾಠಕ್ಕೆ ಈ ಶಿರ್ಷಿಕೆಗಳನ್ನು ಕೊಡಬಹುದು: "ದೇವರು ಮುಖ ಸಿಂಡರಿಸಿಕೊಳ್ಳುವಾಗ," "ದೇವರು ತಿರಸ್ಕಾರ ಸಹಿಸುವವನಲ್ಲ," "ದೇವರ ದೀರ್ಘಕಾಲ ನೆನಪಿಟ್ಟುಕೊಳ್ಳುವ ಶಕ್ತಿ," ಅಥವಾ "ಆಕಾಶದಿಂದ ಭಯಾನಕತೆ."

---

### ಅಡಿಟಿಪ್ಪಣಿಗಳು

[1]William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 126. [2]ಈ ವಾಕ್ಯವು W. B. West, Jr., *Revelation Through First Century Glasses*, ed. Bob Prichard (Nashville: Gospel Advocate Co., 1997), 108ದಿಂದ ಆಯ್ದುಕೊಳ್ಳಲ್ಪಟ್ಟಿದೆ. [3]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 227. [4]Edward A. McDowell, *The Meaning and Message of the Book of Revelation* (Nashville: Broadman Press, 1951), 164. [5]West, 108. [6]Leon Morris, *Revelation*, rev. ed., The Tyndale New Testament Commentaries, ed.

Leon Morris (Grand Rapids, Mich.: Wm. B. Eerdmans Publishing Co., 1987), 188. [7]James D. Strauss, *The Seer, the Saviour, and the Saved*, rev. ed., Bible Study Textbook Series (Joplin, Mo.: College Press, 1979), 222. [8]Hal Lindsey, quoted in McGuiggan, 237. [9]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 610. [10]William Hendriksen, *More Than Conquerors* (Grand Rapids, Mich.: Baker Book House, 1954), 194.

[11]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 147. [12]Morris, 191. [13]Strauss, 225. [14]McGuiggan, 242. [15]J. B. Phillips, *The New Testament in Modern English.* [16]D. T. Niles, *As Seeing the Invisible: A Study of the Book of Revelation* (New York: Harper & Brothers, Publishers, 1961), 85. [17]Morris, 192–93. [18]John D. Davis, *A Dictionary of the Bible*, 4th rev. ed. (Grand Rapids, Mich.: Baker Book House, 1956), 489. [19]ಹೆಸರಿಸಲ್ಪಡದ ಇತಿಹಾಸಕಾರನು Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 91ದಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ. [20]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 209.

[21]Baldinger, 90. [22]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 84. [23]Homer Hailey, *Revelation: An Introduction and Commentary* (Grand Rapids, Mich.: Baker Book House, 1979), 336. [24]George Eldon Ladd, *A Commentary on the Revelation of John* (Grand Rapids, Mich.: Wm. B. Eerdmans Publishing Co., 1972), 216. [25]Robert H. Mounce, *The Book of Revelation*, The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 301. [26]Morris, 193. [27]G. R. Beasley-Murray, *The Book of Revelation*, The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co., 1974), 245. [28]M. Robert Mulholland, Jr., *Revelation: Holy Living in an Unholy World*, Francis Asbury Press Commentary, ed. M. Robert Mulholland, Jr. (Grand Rapids, Mich.: Francis Asbury Press, 1990), 271. [29]Burton Coffman, *Commentary on Revelation* (Austin, Tex.: Firm Foundation Publishing House, 1979), 376. [30]James M. Efird, *Revelation for Today* (Nashville: Abingdon Press, 1989), 101.

[31]Hailey, 336–37. [32]Coffman, 376. [33]Ray Summers, Worthy Is the Lamb (Nashville: Broadman Press, 1951), 189. [34]H. L. Ellison, *1 Peter-Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 76. [35]Hailey, 338. [36]Morris, 195. [37]Mounce, 304–5. [38]Chuck Colclasure, *The Overcomers,* quoted in Morris, 190. [39]ಈ ದೃಷ್ಟಾಂತವು John Risse, "The Final Cycle of Judgment," Sermon preached at the Southern Hills church of Christ, Abilene, Texas, 2 June 1991. details came from *Grolier Multimedia Encyclopedia,* 1997 ed., S.V. "Pizarro" ದಿಂದ ತೆಗೆದುಕೊಳ್ಳಲ್ಪಟ್ಟಿದೆ. [40]McGuiggan, 238.

[41]Eugene H. Peterson, *The Message: New Testament With Psalms and Proverbs*. [42]West, 110–13. [43]Baldinger, 92–94. [44]Owen L. Crouch, *Expository Preaching and Teaching: Revelation* (Joplin, mo.: College Press Publishing Co., 1985), 287. [45]West, 110. [46]Quoted in Craig Brian Larson, ed., *Illustrations for Preaching and Teaching From Leadership Journal* (Grand Rapids, Mich.: Baker Books, 1993), 180.